

॥ ಶ್ರೀ ಗುರು ಬಸವ ಲಿಂಗಾಯನಮಃ ॥

# ಲಿಂಗಾಯತ ದರ್ಶನ

ಮಾಸಿಕ

ಸಂಪುಟ : ೭ ಫೆಬ್ರವರಿ ೨೦೨೦ ಸಂಚಿಕೆ : ೦೨

**ಮಾರ್ಗದರ್ಶನ**

**ಪೂಜ್ಯಶ್ರೀ ಡಾ. ತೋಂಟದ ಸಿದ್ಧರಾಮ ಮಹಾಸ್ವಾಮಿಗಳು**

ರುದ್ರಾಕ್ಷಿಮಠ, ನಾಗನೂರು-ಬೆಳಗಾವಿ

ತೋಂಟದಾರ್ಯ ಸಂಸ್ಥಾನಮಠ, ಗದಗ-ಡಂಬಳ

**ಸಂಪಾದಕ**

**ಡಾ॥ ಎಸ್. ಜಿ. ಮಹಾದೇವಪ್ಪ**

**ಸಹ ಸಂಪಾದಕ**

**ಡಾ॥ ರಾಮಕೃಷ್ಣ ಮರಾಠೆ**

**ಸಂಪಾದಕ ಮಂಡಳಿ**

ಡಾ॥ ಗುರುಲಿಂಗ ಕಾಪಸೆ | ಡಾ॥ ಸಿ. ಕೆ. ನಾವಲಗಿ

ಶ್ರೀ ಆರ್. ಪಿ. ಅಪರಾಜ | ಡಾ॥ ವಿ. ಎಸ್. ಮಾಳಿ

ಡಾ॥ ಬಸವರಾಜ ಜಗಜಂಪಿ | ಶ್ರೀ ಬಿ. ಬಿ. ಹೊಸಮನಿ

ಡಾ. ಎಂ. ಎಸ್. ಹುಲ್ಲೋಳಿ | ಶ್ರೀಮತಿ ನೀಲಗಂಗಾ ಚರಂತಿಮಠ

**ಪ್ರಕಾಶಕರು**

ಕಾರ್ಯದರ್ಶಿ ಶ್ರೀ ಸಿದ್ಧರಾಮೇಶ್ವರ ಶಿಕ್ಷಣ ಸಂಸ್ಥೆಯ

**ವಚನ ಅಧ್ಯಯನ ಕೇಂದ್ರ**

ನಾಗನೂರು ಶ್ರೀ ರುದ್ರಾಕ್ಷಿಮಠ, ಶಿವಬಸವನಗರ

ಬೆಳಗಾವಿ-೫೯೦೦೧೦

ದೂ:೦೮೩೧-೨೪೦೭೧೫೭ *email:basavaguru@rediffmail.com*

*Web: www.rudrakshimath.in*

**ಚಂದಾವಿವರ**

| | | |
|---|---|---|
| ಮಹಾಪೋಷಕರು | ರೂ. | ೧೦,೦೦೦=೦೦ |
| ಪೋಷಕರು | ರೂ. | ೫೦೦೦=೦೦ |
| ಆಜೀವ | ರೂ. | ೩೦೦೦=೦೦(೨೦ ವರ್ಷ) |
| ಆರು ವರ್ಷದ | ರೂ. | ೧೦೦೦=೦೦ |
| ಒಂದುವರ್ಷದ | ರೂ. | ೨೦೦=೦೦ |
| ಬಿಡಿ ಪ್ರತಿ | ರೂ. | ೨೦=೦೦ |

ಚಂದಾಹಣವನ್ನು ನಗದು ಅಥವಾ **'ವಚನ ಅಧ್ಯಯನ ಕೇಂದ್ರ'** ಹೆಸರಿನಲ್ಲಿ ಕ್ರಾಸ್ ಮಾಡಿದ ಡಿ.ಡಿ/ಚೆಕ್ ಮುಖಾಂತರ **"ನಿರ್ದೇಶಕರು, ವಚನ ಅಧ್ಯಯನ ಕೇಂದ್ರ ನಾಗನೂರು ರುದ್ರಾಕ್ಷಿಮಠ, ಶಿವಬಸವ ನಗರ, ಬೆಳಗಾವಿ-೫೯೦ ೦೧೦"** ಈ ವಿಳಾಸಕ್ಕೆ ಕಳಿಸಬೇಕಾಗಿ ವಿನಂತಿ.

**ಅಂತರಂಗದೊಳಗೆ.....**

* ಸಂಪಾದಕೀಯ ೨
* ವಚನಾರ್ಥ ಚಿಂತನ ೪
  - **ಡಾ. ಸಿದ್ಧರಾಮ ಸ್ವಾಮಿಗಳು**
* ಬಸವತತ್ತ್ವಗಳ ಶ್ರೇಷ್ಠ ಪ್ರತಿಪಾದಕ ಡಾ. ತೋಂಟದ ಸಿದ್ಧಲಿಂಗ ಶ್ರೀಗಳು ೬
  - **ಡಾ. ಎಸ್. ಎಂ. ಜಾಮದಾರ**
* ಅಪ್ಪಟ ಭಾರತೀಯ ಹರ್ಡೇಕರ ಮಂಜಪ್ಪ ೧೧
  - **ಶ್ರೀ ಎಂ. ಎಸ್. ಇಂಚಲ**
* ಸಿದ್ಧರಾಮೇಶ್ವರರ ವಚನದೊಂದು ತಾತ್ಪರ್ಯ ೧೪
  - **ನಧಾಪ ಎಚ್. ಹತ್ತಿಮತ್ತೂರು**
* ಕೂಡಲಸಂಗಮ ಹಾಗು ಶರಣರು ೧೬
  - **ಎಂ. ಎಂ. ಗೊರಚಿಕ್ಕನ್ನವರ**
* ಬಸವಣ್ಣನ ಅರಸಿ ವಚನಗಾರ್ತಿ ಗಂಗಾಂಬಿಕೆ ೨೪
  - **ಶ್ರೀಧರ ಗೌಡರ**
* ಪ್ರಾಣದಲ್ಲಿ ಮಾಯೆಯಿರಲು ಅದೇತರ ನಿರ್ವಾಣ ೨೬
  - **ವೆಂಕಟೇಶ ಕೆ. ಜನಾದ್ರಿ**
* ಪುಸ್ತಕ ಪರಿಚಯ ೩೦
  - **ಡಾ. ಎಂ. ಎಸ್. ಹುಲ್ಲೋಳಿ**
* ೨೦೨೦ನೇ ವರ್ಷದ ಬಸವಾದಿ ಶರಣರ ಶರಣೋತ್ಸವಗಳು ೩೨
  - **ಪ್ರೊ. ಸಿದ್ಧಣ್ಣ ಲಂಗೋಟಿ**

ಇಲ್ಲಿಯ ಲೇಖನಗಳ ಅಭಿಪ್ರಾಯಗಳು ಲೇಖಕರವೇ ಹೊರತು ಪತ್ರಿಕೆಯ ಅಭಿಪ್ರಾಯಗಳಲ್ಲ. **-ಸಂ**

# ಜ್ಞಾನದ ಬಲದಿಂದ ತಮಂಧದ ಕೇಡು

**ಅಜ್ಞಾನವೆಂಬ ತೊಟ್ಟಿಲೊಳಗೆ ಜ್ಞಾನವೆಂಬ ಶಿಶುವ ಮಲಗಿಸಿ**
**ಸಕಲ ಶಾಸ್ತ್ರವೆಂಬ ನೇಣ ಕಟ್ಟಿ**
**ಹಿಡಿದು ತೂಗಿ ಜೋಗುಳವಾಡುತ್ತಿದ್ದಾಳೆ ಭ್ರಾಂತಿಯೆಂಬ ತಾಯಿ**
**ತೊಟ್ಟಿಲು ಮುರಿದು, ನೇಣು ಹರಿದು, ಜೋಗುಳ ನಿಂದಲ್ಲದೆ**
**ಗುಹೇಶ್ವರನೆಂಬ ಲಿಂಗವ ಕಾಣಬಾರದು.**

ಇದು ಅಲ್ಲಮಪ್ರಭುಗಳ ಸುಪರಿಚಿತವಾದ ಸುಪ್ರಸಿದ್ಧ ವಚನ. ಅಲ್ಲಮ ಪ್ರಭುಗಳು ಜಗತ್ತಿನ ಶ್ರೇಷ್ಠ ದಾರ್ಶನಿಕರಲ್ಲಿ ಒಬ್ಬರು. ಲಿಂಗಾಯತ ದರ್ಶನದ ಪ್ರತಿಪಾದನೆಯಲ್ಲಿ ಅವರದು ಮೇರು ಸದೃಶ ವ್ಯಕ್ತಿತ್ವ. ೧೨ ನೆಯ ಶತಮಾನದಲ್ಲಿ ಕಲ್ಯಾಣ ನಾಡಿನಲ್ಲಿ, ಬಸವಣ್ಣನವರ ನೇತೃತ್ವದಲ್ಲಿ ಅಸ್ತಿತ್ವಕ್ಕೆ ಬಂದಿದ್ದ 'ಅನುಭವ ಮಂಟಪ'ದ ಅಧ್ಯಕ್ಷರಾಗಿ ಅಂದು ಅವರು ಆಡಿದ ಆಟ ನಮಗಿಂದು ಲೀಲೆಯಾಗಿ ಕಾಣಿಸುತ್ತಿದೆ. ಅಂದು ಅವರು ಆಡಿದ ಮಾತು ಬೆಡಗಾಗಿ ಕಾಣಿಸುತ್ತಿದೆ. ಇದಕ್ಕೆ ಕಾರಣ ಅವರ ಆನುಭಾವಿಕ ವ್ಯಕ್ತಿತ್ವ ಮತ್ತು ಆಧ್ಯಾತ್ಮಿಕ ಸಾಧನೆಯೆಂದೇ ಹೇಳಬೇಕು. ಪ್ರಭುಗಳು ಅಂದು ಶಿವಶರಣರಿಗೆ ಮಾಡಿದ ಮಾರ್ಗದರ್ಶನ, ತೋರಿದಂತಹ ಬೆಳಕು 'ಶೂನ್ಯಸಂಪಾದನೆ'ಯ ರೂಪದಲ್ಲಿ ನಮ್ಮೆದುರಿಗಿದೆ. ಅದೊಂದು ನಮ್ಮ ನಾಡಿನ ಅದ್ಭುತವಾದ ಸಾಂಸ್ಕೃತಿಕ ಮತ್ತು ಆಧ್ಯಾತ್ಮಿಕ ಸಂಪತ್ತು ಎಂದೇ ಹೇಳಬೇಕು.

ಮೇಲಿನ ವಚನದಲ್ಲಿ ಪ್ರಭುಗಳು ನಮ್ಮ ಇಂದಿನ ಬದುಕನ್ನು ಕುರಿತೇ ಮಾತನಾಡುತ್ತಿದ್ದಾರೆ ಎಂದು ಅನಿಸುತ್ತದೆ. ಅನುಭಾವಿಗಳ ಮಾತೇ ಹಾಗೆ; ಅವು ಸಾರ್ವಕಾಲಿಕ ಧ್ವನಿಗಳು. 'ಸತ್ಯವಂತರಿಗಿದು ಕಾಲವಲ್ಲ' ಎಂಬ ಸತ್ಯವಂತರ ಗೋಣಗಾಟ ಯಾವುದೇ ಕಾಲಕ್ಕೂ ಕೇಳಿಸುವಂತಹದ್ದೆ. ಸತ್ಯ ಮತ್ತು ಜ್ಞಾನದ ಅವಸ್ಥೆಗಳೇ ಹಾಗೆ. ಅವು ತುಂಬ ಸೂಕ್ಷ್ಮ–ನಾಜೂಕು ಪ್ರಕೃತಿಯವು. ಆಡಂಬರ, ಡಂಭಾಚಾರವೆಂದರೆ ಅವುಗಳಿಗೆ ಆಗುವುದಿಲ್ಲ. ಸರಳತೆ, ಸಹಜತೆ ಅವುಗಳ ಸ್ವಭಾವ; ಅಹಂಕಾರದ ಅಟ್ಟಹಾಸ ನಡೆದರೆ, ಅಜ್ಞಾನದ ಅಬ್ಬರವಿದ್ದರೆ, ಭ್ರಮೆಯ ಜೋಗುಳವಿದ್ದರೆ ಜ್ಞಾನವೆಂಬುದು ಮೌನಕ್ಕೆ ಶರಣಾಗುತ್ತದೆ, ಯೋಗನಿದ್ರೆಗೆ ಜಾರುತ್ತದೆ. ಇಂದಿನ ಬದುಕಿನಲ್ಲಿ ನಾವು ಇದನ್ನೇ ಅನುಭವಿಸುತ್ತಿದ್ದೇವೆ. ಎಲ್ಲ ಕಡೆಗೆ ಅರಿವಿನ ಪ್ರಭಾವ, ಜ್ಞಾನದ ಕೊರತೆ ಎದ್ದು ಕಾಣಿಸುತ್ತದೆ. ಜ್ಞಾನದ ಕೇಂದ್ರಗಳಲ್ಲಿ ಅಜ್ಞಾನದ ಪ್ರದರ್ಶನ ಹಿಂಸಾತ್ಮಕ ಚಟುವಟಿಕೆಗಳು ನಡೆದಿವೆ. ಜನಸಾಮಾನ್ಯರ ಬದುಕಿಗೆ ನೆಮ್ಮದಿ, ಭದ್ರತೆ ಒದಗಿಸಬೇಕಾದ ಆಡಳಿತ, ಆಡಳಿತದ ಸೂತ್ರ ಹಿಡಿದ ಜನನಾಯಕರು ತಮ್ಮ ತಮ್ಮ ಅಧಿಕಾರಕ್ಕಾಗಿಯೇ ಕಚ್ಚಾಡುವುದು ದೊಡ್ಡ ವಿಪರ್ಯಾಸ. ಅವರಾಡುವ ಮಾತುಗಳಂತೂ ಬೆಂಕಿಯನ್ನೇ ಕಾರುತ್ತವೆ. ನ್ಯಾಯಕ್ಕಾಗಿ ನಡೆಯುವ ಹೋರಾಟಗಳು, ಪ್ರತಿಭಟನೆಗಳು ಹಿಂಸೆಯ ಹಾದಿಯನ್ನೇ ತುಳಿಯುತ್ತಿವೆ. ಜಾತಿರಾಜಕಾರಣ, ಶಕ್ತಿರಾಜಕಾರಣದ ಮೇಲಾಟದಲ್ಲಿ ದೇಶದ ಆರ್ಥಿಕ ಪ್ರಗತಿ ಕುಸಿಯುತ್ತಿದೆ. ಸತ್ಯದ ಮುಖಕ್ಕೆ ಹೊಡೆಯುವಂತೆ ಮೌಢ್ಯ ಕಂದಾಚಾರಗಳು ಎಗ್ಗಿಲ್ಲದೆ ಸಾಗಿವೆ. ಮತ್ತೊಂದು ವಚನದಲ್ಲಿ ಅಲ್ಲಮಪ್ರಭುಗಳು ಇದಕ್ಕೆ ಮಾಯೆಯ ಕಸರತ್ತು ಎಂದು ಕರೆದಿದ್ದಾರೆ. ಇರುಳನ್ನು ಹಗಲು ಮಾಡುವ, ಆಚಾರವನ್ನು ಅನಾಚಾರದಂತೆ–ಅನಾಚಾರವನ್ನು ಆಚಾರದಂತೆ ಬಿಂಬಿಸುವ ಚಟುವಟಿಕೆಗಳು ನಡೆಯುತ್ತವೆ. ಇಂತಹ ಪರಿಸ್ಥಿತಿಯಲ್ಲಿ ಜನಸಾಮಾನ್ಯರ ಬದುಕು ದುರ್ಭರವಾಗುವುದು, ದಯನೀಯವಾಗುವುದು ಸಹಜ. ಇದು ನಿಲ್ಲಬೇಕು ಎಂದರೆ ಜ್ಞಾನದ ಬೆಳಕು ಹರಡಬೇಕು. 'ಜ್ಞಾನದ ಬಲದಿಂದ ತಮಂಧದ ಕೇಡು'

ಜ್ಞಾನವೆಂಬುದನ್ನು ಜ್ಞಾನಿಗಳಿಂದ, ಹಿರಿಯರಿಂದ, ಗ್ರಂಥಗಳಿಂದ ಸಂಪಾದಿಸಬಹುದು. ಆದರೆ ಬಸವಾದಿ ಶರಣರು ಅಂತರಂಗದ ಅರಿವಿಗೆ ವಿಶೇಷ ಮಹತ್ವ ಕೊಡುತ್ತಾರೆ. ಅರಿವೇ ಗುರುವಾಗಬೇಕು ಎನ್ನುತ್ತಾರೆ. ವ್ಯಕ್ತಿ ತನ್ನ ನಡೆ ನುಡಿಗಳನ್ನು ವಿವೇಕದ ಒರೆಗಲ್ಲಿಗೆ ಹಚ್ಚಿ ಸರಿಯಾದ ಮಾರ್ಗದಲ್ಲಿ ಹೆಜ್ಜೆ ಹಾಕಬೇಕೆಂಬುದೇ ಶರಣರ ಸಿದ್ಧಾಂತ. ಬಸವಣ್ಣನವರು ವ್ಯಕ್ತಿಯ ಅಂತರಂಗಶುದ್ಧಿ, ಬಹಿರಂಗಶುದ್ಧಿಗೆ ತುಂಬ ಮಹತ್ವ ನೀಡಿದ್ದಾರೆ. ನಾವು

ಲೋಕದ ಡೊಂಕನ್ನು ತಿದ್ದುವುದಕ್ಕಿಂತ ನಾವು ನಮ್ಮ ಡೊಂಕನ್ನು ತಿದ್ದಿಕೊಳ್ಳುವುದೇ ದೊಡ್ಡ ಸಾಧನೆ ಎನ್ನುತ್ತಾರೆ. 'ನಿಮ್ಮ ತನುವಿನ ಆರೋಗ್ಯ-ನೆಮ್ಮದಿ, ನಿಮ್ಮ ಮನದ ಆರೋಗ್ಯ-ನೆಮ್ಮದಿಯನ್ನು ನೀವು ಸಾಧಿಸಿದರೆ ಈ ಸಮಾಜಕ್ಕೆ ನೀವು ಸಲ್ಲಿಸುವ ದೊಡ್ಡ ಕೊಡಗೆ ಎಂಬುದು ಬಸವಣ್ಣನವರ ನಿಲುವು. ನಮಗೆ ಸಮಾಜ ಸುಧಾರಣೆಯೆಂಬುದು ಸುಲಭದ ಮಾತಾಗಿಬಿಟ್ಟಿದೆ. ಆದರೆ ನಮ್ಮ ವೈಯಕ್ತಿಕ ಸುಧಾರಣೆ ಎಂಬುದು ನಿಜಕ್ಕೂ ಸವಾಲಿನ ಕೆಲಸವಾಗಿದೆ; ಜಟಿಲವಾದ ಕೆಲಸವಾಗಿದೆ. ಆದರೆ ಇದುವೆ ನಮ್ಮ ಮೊದಲ ಆದ್ಯತೆಯಾಗಬೇಕಲ್ಲವೆ?

* * *

ಫೆಬ್ರವರಿ-ಪರಮಪೂಜ್ಯ ಜಗದ್ಗುರು ಲಿಂಗೈಕ್ಯ ಡಾ. ತೋಂಟದ ಸಿದ್ಧಲಿಂಗ ಮಹಾಸ್ವಾಮಿಗಳ ಜಯಂತಿ ತಿಂಗಳು. (೨೧ ಫೆಬ್ರವರಿ ೧೯೪೯). ಪೂಜ್ಯರ ಸಮಾಜಮುಖಿ ಸೇವೆಯನ್ನು ಸ್ಮರಿಸುವುದೇ ಒಂದು ಪುಣ್ಯದ ಘಳಿಗೆ. ಭಾಷೆ, ಬದುಕು, ಧರ್ಮ, ಸಮಾಜ, ಸಂಸ್ಕೃತಿಗಾಗಿ ಪೂಜ್ಯರು ಕೈಕೊಂಡಿದ್ದ ಚಟುವಟಿಕೆಗಳು ಹೊಸ ಇತಿಹಾಸವನ್ನೇ ನಿರ್ಮಿಸಿದವು. ಬಸವಾದಿ ಶರಣರು ಕಂಡ 'ಕಲ್ಯಾಣ'ದ ಕನಸನ್ನು ಆಧುನಿಕ ಸಮಾಜದಲ್ಲಿ ನನಸು ಮಾಡಲು ಹೊರಟಂಥ ಮಹಾ ಮೇಧಾವಿಯೆನಿಸಿದ್ದರು ಪೂಜ್ಯ ಗುರುಗಳು. ಅವರ ಕಂಚಿನ ಕಂಠದಿಂದ ಅಸ್ಖಲಿತವಾಗಿ ಮೊಳಗುತ್ತಿದ್ದ ಕನ್ನಡ ನುಡಿ, ನುಡಿಗಟ್ಟುಗಳನ್ನು ಕೇಳುತ್ತಿದ್ದರೆ ನಾವೂ ಕನ್ನಡವನ್ನೇ ಮಾತನಾಡಬೇಕು, ಕನ್ನಡಕ್ಕಾಗಿಯೇ ದುಡಿಯಬೇಕು ಎನಿಸುತ್ತಿತ್ತು. ಕನ್ನಡವನ್ನು ಉಳಿಸಲು, ಬೆಳೆಸಲು, ಸಮೃದ್ಧಗೊಳಿಸಲು ಒಂದು ಸಂಸ್ಥೆ ಏನು ಮಾಡಲು ಸಾಧ್ಯ? ಎಂಬುದನ್ನು ಶ್ರೀಮಠದ ಮೂಲಕ ಮಾಡಿ ತೋರಿಸಿದರು. ಅವರ ಕನ್ನಡ ಪ್ರೀತಿ, ಪುಸ್ತಕ ಸಂಸ್ಕೃತಿ ನಾಡಿನ ಅನೇಕ ಮಠಗಳಿಗೆ ಸ್ಫೂರ್ತಿಯಾಯಿತು; ವಿಶ್ವವಿದ್ಯಾಲಯಗಳಿಗೆ ಮಾದರಿಯಾಯಿತು.

ವೈದಿಕ, ಅವೈದಿಕ ಆಚಾರ ವಿಚಾರಗಳಿಂದ ಗೊಂದಲಕ್ಕೆ ಗುರಿಯಾದ ಲಿಂಗಾಯತ ಸಮಾಜವನ್ನು ಬಸವ ಪ್ರಣೀತ ಲಿಂಗಾಯತ ಸಮಾಜವನ್ನಾಗಿ ಮಾರ್ಪಡಿಸುವುದಕ್ಕಾಗಿ, ಸಮಾನ ಮನಸ್ಕ ಧರ್ಮಗುರುಗಳನ್ನು, ವಿದ್ವಾಂಸರನ್ನು ಕಟ್ಟಿಕೊಂಡು 'ಲಿಂಗಾಯತ ಸ್ವತಂತ್ರ ಧರ್ಮ'ದ ಹೋರಾಟವನ್ನು ಆರಂಭಿಸಿದ್ದು ಪೂಜ್ಯರ ಮಹತ್ವದ ಸಾಧನೆ. ಹಾಗೆಯೇ ಸ್ವಾಮಿಗಳಾದವರು ವಿದ್ಯಾರ್ಥಿಗಳ ಸೇವೆ, ರೈತರ ಸೇವೆ, ಶೋಷಿತರ ಸೇವೆ, ಕೋಮುಸೌಹಾರ್ದ, ಪರಿಸರ ಸಂರಕ್ಷಣೆಯಂತಹ ಚಟುವಟಿಕೆಗಳಲ್ಲಿ ಹೇಗೆ ತೊಡಗಿಸಿಕೊಳ್ಳಬೇಕು ಎನ್ನುವುದಕ್ಕೆ ಮಾದರಿಯಾಗಿದ್ದ ಪೂಜ್ಯರ ಕುರಿತು ಡಾ. ಎಸ್. ಎಂ. ಜಾಮದಾರ ಅವರು ಈ ತಿಂಗಳ ಸಂಚಿಕೆಯಲ್ಲಿ ವಿಶೇಷ ಲೇಖನ ಬರೆದಿದ್ದಾರೆ.

ಹರ್ಡೇಕರ ಮಂಜಪ್ಪನವರ ಜಯಂತಿ ಕೂಡ ಇದೇ ತಿಂಗಳಲ್ಲಿ ಬರುತ್ತದೆ. (ಫೆಬ್ರವರಿ ೧೮, ೧೮೮೬) ಇವರು ರಾಷ್ಟ್ರಭಕ್ತಿಗೆ ಹೆಸರಾದವರು. ಗಾಂಧೀಜಿಯವರ ಜೊತೆಗೆ ರಾಷ್ಟ್ರ ಕಟ್ಟಲು ಶ್ರಮಿಸಿದವರು. ಕಾರಣ ಹರ್ಡೇಕರ ಮಂಜಪ್ಪನವರು ಧರ್ಮದ್ರಷ್ಟಾರ, ಕರ್ನಾಟಕದ ಗಾಂಧಿ ಎಂಬ ಗೌರವಕ್ಕೆ ಪಾತ್ರರಾದರು. ೧೯೨೪ ರಲ್ಲಿ ಬೆಳಗಾವಿಯಲ್ಲಿ ಜರುಗಿದ ಕಾಂಗ್ರೆಸ್ ಅಧಿವೇಶನದಲ್ಲಿ ಮಂಜಪ್ಪನವರು ತಮ್ಮನ್ನು ಸಕ್ರಿಯವಾಗಿ ತೊಡಗಿಸಿಕೊಂಡಿದ್ದರು. ಆ ಸಂದರ್ಭದಲ್ಲಿ ಸಮ್ಮೇಳನದ ಅಧ್ಯಕ್ಷರಾಗಿದ್ದ ಗಾಂಧೀಜಿಯವರಿಗೆ ಬಸವಣ್ಣನವರನ್ನು ಪರಿಚಯಿಸಿದವರು, ಅವರಿಗೆ ಬಸವಣ್ಣನವರ ವಚನಗಳನ್ನು ಓದಿ ತೋರಿಸಿ, ಅರ್ಥ ವಿವರಿಸಿದವರು ಮಂಜಪ್ಪನವರು. ಜೊತೆಗೆ ಕರ್ನಾಟಕದ ಏಕೀಕರಣದ ವಿಚಾರವನ್ನು ಪ್ರಸ್ತಾಪಿಸಿ, ಗಾಂಧೀಜಿಯವರಿಂದ ಕನ್ನಡದಲ್ಲಿ ಅಂಕಿತ ಹಾಕಲು ಪ್ರಯತ್ನಿಸಿದವರು ಮಂಜಪ್ಪನವರು. ಇವರ ಮತ್ತೊಂದು ಮಹತ್ವದ ಸಾಧನೆ ಎಂದರೆ ಇಂದು ಜನಜನಿತವಾಗಿರುವ 'ಬಸವ ಜಯಂತಿ'ಯನ್ನು ಆಚರಿಲು ಮೊದಲು ಕರೆ ಕೊಟ್ಟವರು ಇವರೇ. ಹೀಗೆ ಹಲವಾರು ಐತಿಹಾಸಿಕ ಘಟನೆಗಳಿಗೆ ಕಾರಣರಾದ ಮಂಜಪ್ಪನವರ ವ್ಯಕ್ತಿತ್ವವನ್ನು ಪ್ರೊ. ಎಂ. ಎಸ್. ಇಂಚಲ ಅವರು ತುಂಬ ಸೊಗಸಾಗಿ ಈ ಸಂಚಿಕೆಯಲ್ಲಿ ಪರಿಚಯಿಸಿದ್ದಾರೆ.

ಎಂದಿನಂತೆ ಪೂಜ್ಯರ 'ವಚನಾರ್ಥ ಚಿಂತನ'ವು ವಿಚಾರ ಪ್ರಚೋದಕವಾಗಿದೆ. ಕಿನ್ನರಿ ಬೊಮ್ಮಯ್ಯ ಕುರಿತು ಲೇಖನ, 'ಲಿಂಗನೆಡೆಗೆ ಅಂಗನ ಯಾತ್ರೆ' ಪುಸ್ತಕ ಪರಿಚಯ ಈ ಸಂಚಿಕೆಯ ಮಹತ್ವ ಹೆಚ್ಚಿಸಿವೆ. ಲೇಖಕರಿಗೆಲ್ಲ ಧನ್ಯವಾದಗಳು. ಇತ್ತೀಚೆಗೆ ಅಗಲಿದ ಹಿರಿಯ ಸಂಶೋಧಕ ಡಾ. ಎಂ. ಚಿದಾನಂದಮೂರ್ತಿ ಅವರಿಗೆ ಪತ್ರಿಕೆ ಗೌರವ ಶ್ರದ್ಧಾಂಜಲಿ ಅರ್ಪಿಸುತ್ತದೆ.

**ಡಾ. ರಾಮಕೃಷ್ಣ ಮರಾಠೆ**

# ವಚನಾರ್ಥ–ಚಿಂತನ

● ಡಾ. ಸಿದ್ಧರಾಮ ಸ್ವಾಮಿಗಳು

**ದಯವಿಲ್ಲದ ಧರ್ಮವದೇವುದಯ್ಯ**
**ದಯವೇ ಬೇಕು ಸಕಲ ಪ್ರಾಣಿಗಳೆಲ್ಲರಲ್ಲಿ**
**ದಯವೇ ಧರ್ಮದ ಮೂಲವಯ್ಯ**
**ಕೂಡಲಸಂಗಯ್ಯನಂತಲ್ಲದೊಲ್ಲನಯ್ಯ**

ಪ್ರತಿಯೊಬ್ಬ ಮನುಷ್ಯ ಇಹದಲ್ಲಿ ಸುಖ, ಪರದಲ್ಲಿ ಶಾಂತಿಯನ್ನು ಪಡೆದು ಪರಮಾತ್ಮನಿಗೆ ಒಪ್ಪಿತವಾದ ಬದುಕನ್ನು ಸಾಗಿಸಲು ಧರ್ಮವನ್ನು ಆಚರಿಸಬೇಕಾದುದು ಅತ್ಯವಶ್ಯ. ಆ ಧರ್ಮಕ್ಕೆ ದಯವೇ ಮೂಲ ಎಂಬುದನ್ನು ಸ್ಪಷ್ಟಪಡಿಸುವ ಈ ವಚನ ಭಕ್ತಿಭಂಡಾರಿ ಬಸವಣ್ಣನವರದು.

ವೈಜ್ಞಾನಿಕ ಪ್ರಗತಿಯ ಇಂದಿನ ದಿನಮಾನಗಳಲ್ಲಿ ಧರ್ಮವನ್ನು ಕುರಿತು ವಿಶ್ಲೇಷಿಸುವುದು ಬಹುಕಷ್ಟದ ಕೆಲಸ. ವಿಜ್ಞಾನದ ಮಹತ್ವ ಏನೇ ಇರಲಿ ಮಾನವ ಬದುಕಿನಲ್ಲಿ ಧರ್ಮದ ಮಹತ್ವವನ್ನು ಅಲ್ಲಗಳೆಯುವಂತಿಲ್ಲ. ಧರ್ಮ ಅಷ್ಟು ವ್ಯಾಪಕ ಹಾಗು ಪ್ರಭಾವಶಾಲಿಯಾದುದು.

'ಧರ್ಮ' ಎಂಬ ಪದಕ್ಕೆ ಕನಿಷ್ಠ ಎರಡು ಅರ್ಥಗಳಿವೆ. ಒಂದರ್ಥದಲ್ಲಿ, ಧರ್ಮವೆಂದರೆ, ನೀತಿ, ಭಿಕ್ಷುಕರು ಧರ್ಮ ಮಾಡಿರಿ ಎಂದು ಕೇಳುವಾಗ ನನಗೆ ಭಿಕ್ಷೆ ಹಾಕಿರಿ (ಭಿಕ್ಷೆ ಕೊಡುವುದು ಒಂದು ನೈತಿಕ ಕ್ರಿಯೆ) ಎಂಬರ್ಥವಿದೆ. ಮತ್ತೊಂದರ್ಥದಲ್ಲಿ ಧರ್ಮವೆಂದರೆ ನೀತಿಯನ್ನೂ, ಪೂಜೆ, ಧ್ಯಾನ, ಮುಂತಾದ ಧಾರ್ಮಿಕ ಕಾರ್ಯಗಳನ್ನೂ ಒಳಗೊಳ್ಳುವ ಸಂಪುಟ. ಆದರೆ ಧರ್ಮವನ್ನು ಯಾವ ಅರ್ಥದಲ್ಲಿ ತೆಗೆದುಕೊಂಡರೂ, ದಯೆಯನ್ನು ಒಳಗೊಳ್ಳುವ ಅದು ಮಾನವ ಜೀವನಕ್ಕೆ ಅಡಿಗಲ್ಲು ಎಂಬುದನ್ನು ಯಾರೂ ಅಲ್ಲಗಳೆಯುವಂತಿಲ್ಲ. ಮನುಷ್ಯ ಸ್ವಭಾವತಃ ಸ್ವಾರ್ಥಿಯಾಗಿದ್ದರೂ ಧಾರ್ಮಿಕ ಭಾವದಿಂದ ಪ್ರೇರಿತನಾದಾಗ ತನ್ನ ನಡೆನುಡಿಗಳನ್ನು ಪವಿತ್ರಗೊಳಿಸಿಕೊಳ್ಳುತ್ತಾನೆ; ಪರೋಪಕಾರಕ್ಕೆ ಮುಂದಾಗುತ್ತಾನೆ; ಅಸಹಾಯಕರಿಗೆ ಸಹಾಯ ಮಾಡುವುದಲ್ಲದೆ ದೀನದಲಿತರನ್ನು ಸಂರಕ್ಷಿಸುತ್ತಾನೆ. ಹಾಗೆಯೇ ಅವನು ಆದರ್ಶ ಹಾಗು ಮೌಲ್ಯಗಳ ರಕ್ಷಣೆಗಾಗಿ ಸರ್ವಸ್ವವನ್ನು ತ್ಯಾಗ ಮಾಡುತ್ತಾನೆ. ಆದರೆ ಅದೇ ವ್ಯಕ್ತಿ ದಯೆ ಇಲ್ಲದೆ, ಕೇವಲ ಧಾರ್ಮಿಕ ಉನ್ಮಾದಕ್ಕೊಳಗಾಗಿ ಧರ್ಮಾಂಧನಾದಾಗ ಹಿಂಸಾಚಾರ ಹಾಗು ರಕ್ತಪಾತಗಳಲ್ಲಿ ತೊಡಗುತ್ತಾನೆ. ಇದರಿಂದಾಗಿ "ಧರ್ಮವು ಮಾನವನ ಏಕತೆ ಹಾಗು ಶಾಂತಿಯ ಪ್ರಯತ್ನದಲ್ಲಿ ಅತ್ಯಂತ ಅಪಾಯಕಾರಿ" ಎಂದು ಹೇಳಿ ಧರ್ಮದ ಬಗ್ಗೆ ತಿರಸ್ಕಾರದ ಭಾವನೆ ಹೊಂದಿದವರೂ ಸಾಕಷ್ಟಿದ್ದಾರೆ. "ಧರ್ಮವು ಒಂದು ಅಫೀಮು" ಎಂದು ಕಾರ್ಲಮಾರ್ಕ್ಸ ಹೇಳಬೇಕಾದರೆ ವ್ಯಕ್ತಿಯ ಧರ್ಮಾಂಧತೆಯಿಂದಾದ ಹಿಂಸಾಚಾರವೇ ಕಾರಣವಾಗಿರಬಹುದು. ಇದೆಲ್ಲವೂ ದಯೆಯನ್ನೊಳಗೊಳ್ಳುವ ಧರ್ಮವಷ್ಟೇ ಧರ್ಮ, ಎಂಬ ಧರ್ಮದ ವ್ಯಾಖ್ಯೆಯನ್ನು ಸರಿಯಾಗಿ ಅರಿತುಕೊಳ್ಳದ ಕಾರಣದಿಂದಾದುದು. ಧರ್ಮವು ಸಂಪ್ರದಾಯ, ಸ್ವಾರ್ಥ, ಪೂರ್ವಾಗ್ರಹ ಹಾಗು ಬಾಹ್ಯಾಡಂಬರಗಳಿಂದ ಕೂಡಿದಾಗ ಶೋಷಣೆಗೆ ಅವಕಾಶ ಮಾಡಿಕೊಡುತ್ತದೆ. ಸಮಾಜದಲ್ಲಿ ವಿಷಮತೆ ಹಾಗು ವರ್ಗವರ್ಣಗಳ ಭೇದಭಾವಗಳಿಗೆ ಕಾರಣವಾಗುತ್ತದೆ.

ವಾಸ್ತವವಾಗಿ ಧರ್ಮವು ಸದಾ ಪರಿವರ್ತನಶೀಲ ಹಾಗು ಪ್ರಗತಿಪರವಾದುದು. ಹಾಗೆಯೇ ನಿರಂತರ ವಿಕಾಸಕ್ಕೆ ಕಾರಣೀಭೂತ–ವಾದುದು. ಮಾನವ ಸಮಾಜದ ಎಲ್ಲ ದೋಷಗಳನ್ನು ನಿವಾರಿಸಿ ಅದನ್ನು ಮುನ್ನಡೆಸುವ ಅಪರಿಮಿತವಾದ ಶಕ್ತಿ ಧರ್ಮಕ್ಕಿದೆ. ಧರ್ಮವನ್ನು ಸರಿಯಾಗಿ ಅರ್ಥೈಸಿ ಆಚರಿಸಿದಾಗ ಅದುವೆ ವಿಶ್ವಶಾಂತಿಗೆ ಪೂರಕವಾಗುತ್ತದೆ. ಧರ್ಮದ ಮಹತ್ವ ಹಾಗು ಬಹುಮುಖಿ ಉಪಯೋಗವನ್ನು ಕುರಿತು ಭಾರತೀಯ ತತ್ವಜ್ಞಾನಿ ಡಾ. ಎಸ್. ರಾಧಾಕೃಷ್ಣನ್ ಅವರು Religion is the discipline which touches the conscience and helps us to struggle with evil and sordidness, saves

ನಾಗನೂರು ಶ್ರೀ ರುದ್ರಾಕ್ಷಿಮಠ, ಬೆಳಗಾವಿ

us from greed, lust and hated and releases moral power and imparts courage in the enterprise of saving the world.''(Religion and Society) ಎಂದು ಹೇಳಿರುವುದು ಅತ್ಯಂತ ಅರ್ಥಪೂರ್ಣವಾಗಿದೆ.

ಈ ಮೇಲಿನ ವಿಶ್ಲೇಷಣೆಯಿಂದ ಧರ್ಮವು ದಯೆ, ಕರುಣೆ, ಮಿತ್ರತ್ವ, ಭ್ರಾತೃತ್ವ, ಸೇವೆ, ತ್ಯಾಗ, ಶಾಂತಿ, ಸದ್ಭಾವ, ಬಂಧುತ್ವ ಹಾಗು ಪರಸ್ಪರ ಪ್ರೀತಿ ವಿಶ್ವಾಸಕ್ಕೆ ದಾರಿ ಮಾಡಿಕೊಡುತ್ತದೆ ಎಂಬುದು ಅತ್ಯಂತ ಸ್ಪಷ್ಟವಾಗುತ್ತದೆ. ಧರ್ಮದಲ್ಲಿ ದ್ವೇಷಾಸೂಯೆ ಹಾಗು ಹಿಂಸೆಗೆ ಕಿಂಚಿತ್ತೂ ಸ್ಥಾನವಿಲ್ಲ. "ಹಿಂಸೆ ಪಶುಗಳ ಧರ್ಮ, ಅಹಿಂಸೆ ಮಾನವನ ಧರ್ಮ" ಎಂದು ಗಾಂಧೀಜಿ ಪದೇ ಪದೇ ಹೇಳುತ್ತಿದ್ದರು. 'ಅಹಿಂಸಾ ಪರಮೋ ಧರ್ಮಃ' ಎಂದು ಭಗವಾನ್ ಮಹಾವೀರ ಹೇಳಿದರು. ಈ ಅಹಿಂಸೆಯೆ ಬಸವಣ್ಣನವರಲ್ಲಿ ಮತ್ತಷ್ಟು ಉದಾತ್ತೀಕರಣಗೊಂಡ 'ದಯೆ' ಎಂದರೆ ಅತಿಶಯೋಕ್ತಿಯಲ್ಲ. 'ದಯೆ' ಎಂದರೆ ಪ್ರಾಣಿಗಳ ಮೇಲೆ ನಾವು ತೋರುವ ಅನುಕಂಪೆ ಅಥವಾ ಕರುಣೆ. ಇದು ಧರ್ಮದ ಸ್ಥಾಯೀಭಾವ. ಸತ್ಯ, ಅಸ್ತೇಯ (ಕಳ್ಳತನ ಮಾಡದಿರುವುದು), ಅಕ್ರೋಧ (ಸಿಟ್ಟು ಇಲ್ಲದಿರುವುದು), ಕ್ಷಮೆ, ಇಂದ್ರಿಯ ನಿಗ್ರಹ ಮುಂತಾದವುಗಳು ಧರ್ಮದ ಲಕ್ಷಣಗಳಾಗಿದ್ದರೂ ಇವುಗಳಲ್ಲಿ 'ದಯೆ' ಅತ್ಯಂತ ಪ್ರಮುಖವಾದುದು. ದಯೆ ಇಲ್ಲದೇ ಧರ್ಮವಿಲ್ಲ. ದಯವಿಲ್ಲದ ಧರ್ಮ ಧರ್ಮವೇ ಅಲ್ಲ. ಧರ್ಮಿ ಎನ್ನಿಸಿಕೊಳ್ಳುವವನು ಕೇವಲ ಮನುಷ್ಯರಲ್ಲಿ ಮಾತ್ರವಲ್ಲ, ಸಕಲ ಪ್ರಾಣಿಗಳಲ್ಲಿಯೂ ಕರುಣೆಯುಳ್ಳವನಾಗಬೇಕು. ಸಕಲ ಜೀವಾತ್ಮರಿಗೆ ಲೇಸನ್ನು ಬಯಸುವುದು, ಮಾತು, ಮನಸ್ಸು ಮತ್ತು ನಮ್ಮ ಕ್ರಿಯೆಗಳಿಂದ ಯಾರಿಗೂ ನೋವನ್ನುಂಟು ಮಾಡದಿರುವುದು ನಿಜವಾದ ಧರ್ಮ. ಅದು ದಯೆಯಿಂದ ಯುಕ್ತವಾದ ಧರ್ಮ. 'ದಯವೇ ಧರ್ಮದ ಮೂಲ' ದಯೆಯನ್ನು ಅಂದರೆ ಮಾನವೀಯ ಅನುಕಂಪೆಯನ್ನು ಬದುಕಿನಲ್ಲಿ ಅಳವಡಿಸಿಕೊಂಡ ವ್ಯಕ್ತಿಗಳು ಇಹದಲ್ಲಿ ಸುಖವನ್ನು, ಪರದಲ್ಲಿ ಶಾಂತಿಯನ್ನು ಪಡೆವುದಲ್ಲದೆ ಪರಮಾತ್ಮನ ಪ್ರೀತಿಗೂ ಪಾತ್ರರಾಗುತ್ತಾರೆ. ಹಾಗೆಯೆ 'ದಯೆ' ಇಲ್ಲದ ವ್ಯಕ್ತಿಗಳು ಅಧರ್ಮಿಗಳೆನಿಸಿ ಸಮಾಜದ ಹಾಗು ಪರಮಾತ್ಮನ ತಿರಸ್ಕಾರಕ್ಕೆ ಗುರಿಯಾಗುತ್ತಾರೆ ಎಂಬುದು ಬಸವಣ್ಣನವರ ಸ್ಪಷ್ಟ ಅಭಿಮತವಾಗಿದೆ.

ಆದರೆ ಇಂದು ಮನುಷ್ಯ ಧರ್ಮದ ಮೂಲವನ್ನು (ದಯೆ) ಮರೆತು ಆಶೆ ಆಮಿಷಗಳಿಗೆ ಬಲಿಯಾಗಿ ಹಿಂಸಾಚಾರದಲ್ಲಿ ಮಗ್ನನಾಗಿದ್ದಾನೆ. ಸಂಸ್ಕೃತಿಯಿಂದ ವಿಕೃತಿಯತ್ತ ಮುಖಮಾಡಿರುವುದು ಮನುಕುಲ ವಿನಾಶದ ಸಂಕೇತ. ದೇವರು ಧರ್ಮದ ಹೆಸರಿನಲ್ಲಿ ಪ್ರಾಣಿವಧೆ ಮಾಡುವುದು ಮತ್ತು ಮಾಂಸಭಕ್ಷಣೆಗಾಗಿ ಗೋಹತ್ಯೆ ಮಾಡುವ ಮೂಲಕ ರೈತನ ಬೆನ್ನೆಲುಬಾದ ಗೋವಂಶವನ್ನೇ ನಾಶಗೊಳಿಸುತ್ತಿರುವುದು ಘೋರಪಾತಕ. ಇಂಥ ಪಾಪಕೃತ್ಯಗಳಿಗೆ, ಹಿಂಸಾಚಾರಕ್ಕೆ ಪ್ರಚೋದನೆ ನೀಡುವ ರಾಜಕಾರಣಿಗಳನ್ನು ಈ ಸಮಾಜ ತಿರಸ್ಕರಿಸಬೇಕಾದುದು ಅತ್ಯವಶ್ಯ. 'ಇಲ್ಲಿ ಸಲ್ಲದವರು ಅಲ್ಲಿಯೂ ಸಲ್ಲರು' ಎಂಬ ಬಸವಣ್ಣನವರ ವಾಣಿಯಂತೆ ಅವರು ಪರಮಾತ್ಮನಿಗೂ ಸಲ್ಲದವರಾಗಿ ನರಕಕ್ಕೆ ಭಾಜನರಾಗುತ್ತಾರೆ. ಆದ್ದರಿಂದ ಪ್ರತಿಯೊಬ್ಬರೂ ದಯೆಯಿಂದ ಕೂಡಿದ ಧರ್ಮದಲ್ಲಿ ಶ್ರದ್ಧೆ ವಿಶ್ವಾಸಗಳನ್ನಿಟ್ಟು ಆಚರಣೆಯ ಮೂಲಕ ಪರಮಾತ್ಮನ ಒಲುಮೆಗೆ ಪಾತ್ರರಾಗಬೇಕೆಂಬುದೇ ಈ ವಚನದ ಅಭಿಪ್ರಾಯ.

■■

### ಬಸವತತ್ತ್ವಗಳ ಶ್ರೇಷ್ಠ ಪ್ರತಿಪಾದಕ

# ಡಾ. ತೋಂಟದ ಸಿದ್ಧಲಿಂಗ ಶ್ರೀಗಳು

● ಡಾ. ಎಸ್. ಎಂ. ಜಾಮದಾರ

ಲಿಂಗಾಯತ ಸಮಾಜದಲ್ಲಿ ಇರುವಷ್ಟು ಸ್ವಾಮಿಗಳು ಮತ್ತು ಮಠಗಳು ಭಾರತದಲ್ಲಿರುವ ಇನ್ನಾವುದೇ ಧರ್ಮದಲ್ಲಿ ಇರಲಿಕ್ಕಿಲ್ಲ. ಬಸವತತ್ತ್ವಗಳ ಬೋಧನೆ, ಪ್ರಚಾರ ಮತ್ತು ಪ್ರಸಾರಕ್ಕಾಗಿ ಹುಟ್ಟಿಕೊಂಡಿರುವ ೩೦೦೦ಕ್ಕೂ ಹೆಚ್ಚು ಲಿಂಗಾಯತ ಮಠಗಳ ಬಹುತೇಕ ಮಠಾಧೀಶರು ಇಂದು ಬಸವ ಧರ್ಮದಿಂದ ವಿಮುಖರಾಗಿದ್ದಾರೆಂದರೆ ಅತಿಶಯೋಕ್ತಿಯಲ್ಲ. ಇಂತಹ ಸನ್ನಿವೇಶದಲ್ಲಿ ಅತ್ಯಂತ ಅಪರೂಪದ ಮಠಾಧೀಶರಾಗಿ, ಬಸವ ತತ್ವಗಳಿಗಾಗಿ ತಮ್ಮ ಜೀವನವನ್ನೇ ಮುಡುಪಾಗಿಟ್ಟು ದುಡಿದ ಅಗ್ರಗಣ್ಯರಲ್ಲಿ ತೋಂಟದ ಪೂಜ್ಯ ಲಿಂಗೈಕ್ಯ ಡಾ. ಸಿದ್ಧಲಿಂಗ ಸ್ವಾಮಿಗಳು ಒಬ್ಬರು. ಅವರ ಅಕಾಲಿಕ ಅಗಲಿಕೆಯಿಂದ ಲಿಂಗಾಯತ ಸಮಾಜಕ್ಕೆ ತುಂಬಲಾರದ ನಷ್ಟವಾಗಿದೆ. ಅವರನ್ನು ಕುರಿತು ಬರೆಯಲು ಹೊರಟರೆ ನೂರೊಂದು ನೆನಪುಗಳು ಧುತ್ತನೆ ಎದ್ದು ನಿಲ್ಲುತ್ತವೆ. ಶ್ರೀಗಳೊಂದಿಗೆ ನಿರಂತರ ಮೂರು ದಶಕಗಳ ನಿಕಟ ಸಂಪರ್ಕ ಹೊಂದಿದವರಲ್ಲಿ ನಾನೂ ಒಬ್ಬ ಎಂದು ಹೇಳಿಕೊಳ್ಳುವ ಭಾಗ್ಯ ನನ್ನದಾಗಿದೆ.

ಅವರಾಡುವ ಪ್ರತಿಯೊಂದು ಮಾತುಗಳಲ್ಲಿ ಸ್ಪಷ್ಟವಾದ ವೈಚಾರಿಕತೆ ಇರುತ್ತಿತ್ತು. ಅವರ ಮಾತು ನೇರ, ನಿಲುವು ದಿಟ್ಟ, ಅವರ ಎದೆಗಾರಿಕೆ ಯಾರಿಗೂ ಹೆದರದ್ದು. ನೀಟಾದ ಮೂಗು, ಅಗಲವಾದ ಹಣೆ, ಆಳವಾದ ಕಣ್ಣುಗಳು, ಎತ್ತರದ ನಿಲುವು, ದಷ್ಟಪುಷ್ಟವಾದ ದೇಹ ಹೀಗೆ ದೈವದತ್ತವಾದ ಅವರ ವ್ಯಕ್ತಿತ್ವ ಆಕರ್ಷಕವಾಗಿತ್ತು. ಆದ್ದರಿಂದಲೇ ಅವರು ಭಾಗವಹಿಸುವ ಯಾವುದೇ ಕಾರ್ಯಕ್ರಮದಲ್ಲಿ ಮಂತ್ರಮುಗ್ಧರಾಗಿ ಅವರ ಪ್ರವಚನಗಳನ್ನು, ಭಾಷಣಗಳನ್ನು ಕೇಳಲು ಹತ್ತಾರು ಸಾವಿರ ಜನರು ಬರುತ್ತಿದ್ದರು.

ಅಪ್ಪಟ ಬಸವವಾದಿಗಳಾಗಿದ್ದ ಶ್ರೀಗಳು ಕೇವಲ ಬರೀ ಭಾಷಣಕಾರರಾಗಿರಲಿಲ್ಲ. ತಾವು ಹೇಳುವ ಪ್ರತಿಮಾತಿಗೂ ಅವರು ಬದ್ಧರಾಗಿರುತ್ತಿದ್ದರು ಮತ್ತು ಕೊಟ್ಟ ಮಾತಿನಂತೆ ನಡೆದುಕೊಳ್ಳುತ್ತಿದ್ದರು. ಅದೇ "ನುಡಿದಂತೆ ನಡೆಯುವ" ಬಸವ ಪಥ. ಸಾರ್ವಜನಿಕ ಹಿತಕ್ಕೆ ಧಕ್ಕೆ ತರುವಂತಹ ಯಾವುದೇ ಸಮಸ್ಯೆ ಇದ್ದರೆ ಅದನ್ನು ಎದುರಿಸಲು ಶ್ರೀಗಳು ಎಂತಹದೇ ಉಗ್ರ ಹೋರಾಟದಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿದ್ದರು ಮತ್ತು ಧೈರ್ಯವಾಗಿ ಅಂತಹ ಹೋರಾಟಗಳ ಮುಂಚೂಣಿಯಲ್ಲಿರುತ್ತಿದ್ದರು. ಜಪಾನ ಮೂಲದ ಪೋಸ್ಕೊ ಉದ್ಯಮಕ್ಕೆ ನಾಲ್ಕಾರು ಸಾವಿರ ಎಕರೆ ಜಮೀನನ್ನು ಸ್ವಾಧೀನ ಪಡಿಸಿಕೊಳ್ಳಲು ರಾಜ್ಯ ಸರ್ಕಾರ ಮುಂದಾದಾಗ ಅದನ್ನು ವಿರೋಧಿಸಿ ನಡೆದ ಚಳುವಳಿಯ ಮುಂದಾಳುತನವನ್ನು ಪೂಜ್ಯರು ವಹಿಸಿದ್ದರು. ಆದ್ದರಿಂದ ಸರ್ಕಾರ ಆ ಯೋಜನೆಯನ್ನು ಕೈ ಬಿಟ್ಟಿತು. ನಾಡನುಡಿಯ ಉಳಿವಿಗಾಗಿ ನಡೆದ ಗೋಕಾಕ ಚಳುವಳಿಯಲ್ಲಿ ಶ್ರೀಗಳು ಸಕ್ರಿಯರಾಗಿದ್ದರು. ಆ ಚಳುವಳಿ ಸಫಲವಾಯಿತು. ಮಹಾದಾಯಿ ನದಿ ನೀರಿನ ಬೇಡಿಕೆ ಮುಂದಿಟ್ಟು ರೈತರು ನಡೆಸಿದ ಚಳುವಳಿಗೆ ಅವರು ಬೆಂಬಲಿಗರಾಗಿದ್ದರು. ಸುದೈವದಿಂದ ಕರ್ನಾಟಕಕ್ಕೆ ಅಲ್ಪಪ್ರಮಾಣದ ನೀರಾದರೂ ದೊರೆಯಿತು. ಅದೇ ರೀತಿ ಬಸವ ಸ್ಥಾಪಿತ ಲಿಂಗಾಯತ ಧರ್ಮದ ಮಾನ್ಯತೆಗಾಗಿ ನಡೆದ ಬಹುವ್ಯಾಪಕ ಚಳುವಳಿಗೆ ಪೂಜ್ಯರು ಬೆನ್ನೆಲುವಾಗಿ ನಿಂತಿದ್ದರು.

ತಮಗೆ ಮಾರ್ಗದರ್ಶನ ಮಾಡುತ್ತಿದ್ದ ಪೂಜ್ಯರಿಗೆ ಸಹಾಯ ಮಾಡುವ ಉದ್ದೇಶದಿಂದ ಶ್ರೀ ಶ್ರೀರಾಮುಲು ಅವರು ಪೂಜ್ಯರನ್ನು ಕಂಡಾಗ ಶ್ರೀಗಳು ಅವರಿಗೆ ಹೇಳಿದ್ದ ಮಾತು: "ನನಗೇನೂ ಬೇಡ, ಆದರೆ ನಿಮಗೆ ಸಾಧ್ಯವಾದರೆ ೧೧೦೮ ಅಡಿಯ ಬಸವಣ್ಣನವರ ಬೃಹತ್ ಮೂರ್ತಿಯನ್ನು ಭೀಷ್ಮಕೆರೆ ದಂಡೆಯ ಮೇಲೆ ನಿರ್ಮಿಸಬಹುದು" ಎಂದಿದ್ದರು. ಅದನ್ನೇ ಆಶೀರ್ವಾದವೆಂದು ಭಾವಿಸಿದ ಶ್ರೀರಾಮುಲು ಅವರು ಶ್ರೀಗಳ ಮಾತನ್ನು ನಡೆಸಿಕೊಟ್ಟರು. ಅದರಿಂದಾಗ ಗದಗ ನಗರದಲ್ಲಿ ಸುಂದರ ಉದ್ಯಾನವನದೊಂದಿಗೆ ನಿರಂತರ

ನಿವೃತ್ತ ಐ. ಎ. ಎಸ್. ಎಫ್ 1, 1 ಸಿ, ಮೇನ್ ರೋಡ್ ಸೆ-6, ಬ್ಲಾಕ್-7, ಹೆಚ್.ಆರ್.ಎಸ್. ಲೇಔಟ್ ಬೆಂಗಳೂರು-102, 9742802111

ನೀರಿನಿಂದ ತುಂಬಿದ ಭೀಷ್ಮಕೆರೆಯ ದಂಡೆಯ ಮೇಲೆ ಇಂದು ಬಸವಣ್ಣನವರ ಬೃಹತ್ ಮೂರ್ತಿ ದೇಶ ವಿದೇಶಗಳ ಪ್ರವಾಸಿಗರನ್ನು ಆಕರ್ಷಿಸುತ್ತಿದೆ.

ವರ್ಗರಹಿತ, ಜಾತಿರಹಿತ, ಲಿಂಗಭೇದವಿಲ್ಲದ ಸಮಾನ ಸಮಾಜವನ್ನು ಕಟ್ಟುವ ಬಸವಣ್ಣನವರ ಕನಸಿನ ಕೂಸನ್ನು ಸಾಕಾರಗೊಳಿಸುವುದು ಡಾ. ಸಿದ್ಧಲಿಂಗ ಸ್ವಾಮಿಗಳ ಧ್ಯೇಯವಾಗಿತ್ತು. ಆ ದಿಶೆಯಲ್ಲಿ ಅವರು ಇಟ್ಟ ಮೊದಲ ಹೆಜ್ಜೆಯೆಂದರೆ ತಮ್ಮ ಮಠದ ವತಿಯಿಂದ ನಡೆಯುವ ಜಾತ್ರೆಯನ್ನು ಜಾತ್ಯಾತೀತವಾಗಿ ನಡೆಸಲು ಜಾತ್ರೆಯ ಸಂಘಟನಾ ಸಮಿತಿಯಲ್ಲಿ ಎಲ್ಲ ಜಾತಿಯ ಮತ್ತು ಧರ್ಮಗಳ ಉತ್ಸಾಹಿಗಳನ್ನು ಸೇರಿಸಿಕೊಳ್ಳುತ್ತಿದ್ದರು. ಕೆಲವು ಧರ್ಮಾಂಧರು ಶ್ರೀಗಳ ಈ ನಿಲುವನ್ನು ವಿರೋಧಿಸಿ ಶಾಶ್ವತವಾಗಿ ಅವರ ಶತ್ರುಗಳಾದರು. ಆದರೆ ಅಂತಹ ವಿರೋಧಕ್ಕೆ ಜಪ್ಪೆನ್ನದ ಎದೆಗಾರಿಕೆ ಶ್ರೀಗಳಿಗೆ ಇತ್ತು. ಅದೇ ದಿಶೆಯಲ್ಲಿ ಸರ್ವಧರ್ಮ ಸಮನ್ವಯತೆ, ಸಮಾನತೆ ಮತ್ತು ಸೌಹಾರ್ದತೆಗಾಗಿ ಅನೇಕ ಕಾರ್ಯಕ್ರಮಗಳನ್ನು ರೂಪಿಸಿ ನಡೆಸುತ್ತಿದ್ದರು. ಅದನ್ನು ಗುರುತಿಸಿದ ಭಾರತ ಸರ್ಕಾರವು ಶ್ರೀಗಳಿಗೆ ರಾಷ್ಟ್ರೀಯ ಭಾವೈಕ್ಯತೆಗೆ ಮೀಸಲಿಟ್ಟ ಅತ್ಯುನ್ನತ ಸನ್ಮಾನವನ್ನು ನೀಡಿ ಗೌರವಿಸಿತ್ತು. ಲಿಂಗಾಯತ ಸಮಾಜದಲ್ಲಿ ಈಗ ಅಸ್ತಿತ್ವದಲ್ಲಿರುವ ವಿವಿಧ ಜಾತಿಗಳ ಜನರನ್ನು ಒಂದುಗೂಡಿಸಿ, ಬಸವಣ್ಣನವರ ಕನಸನ್ನು ಸಾಕಾರಗೊಳಿಸುವ ಉದ್ದೇಶ ಅವರಿಗಿತ್ತು. ಅಂತರ್–ಜಾತಿಯ ವಿವಾಹಗಳನ್ನು ಅವರು ಪ್ರೋತ್ಸಾಹಿಸುತ್ತಿದ್ದರು. ಆಡಂಬರದ ಮದುವೆಗಳನ್ನು ಸರಳಗೊಳಿಸಿ, ಬಡವರಿಗೆ ಸಹಾಯ ಮಾಡಲು ಶ್ರೀಗಳು ಶಾಸಕ ಮತ್ತು ಸಂಸದ ಶ್ರೀರಾಮುಲು ಅವರನ್ನು ಪ್ರೇರೇಪಿಸಿ ಅವರ ಮೂಲಕ ನಾಲ್ಕಾರು ಬಾರಿ ಸಾವಿರಾರು ವಧುವರರ ಸಾಮೂಹಿಕ ವಿವಾಹಗಳನ್ನು ನೆರವೇರಿಸುವಂತೆ ಮಾಡಿದ್ದರು. ಬಸವ ಧರ್ಮದ ಪ್ರಸಾರದ ಅಂಗವಾಗಿ ಉತ್ತರ ಪ್ರದೇಶದ ದಲಿತ ಜಾಟವ ಸಮಾಜದ ಸಾವಿರಾರು ಜನರಿಗೆ ಲಿಂಗಾಯತ ಧರ್ಮದ ದೀಕ್ಷೆ ನೀಡಿದ್ದರು. ಪ್ರತಿವರ್ಷ ನಡೆಯುವ ತೋಂಟದಾರ್ಯ ಮಠದ ಜಾತ್ರೆಗೆ ನೂರಾರು ಜಾಟವ ಲಿಂಗಾಯತರು ಭಾಗವಹಿಸುತ್ತಿದ್ದುದನ್ನು ನಾನು ಕಣ್ಣಾರೆ ಕಂಡಿದ್ದೇನೆ.

ಬಸವ ತತ್ವಗಳನ್ನು ಶಬ್ದಶಃ ಪಾಲಿಸುತ್ತಿದ್ದ ಪೂಜ್ಯರು ತರುಣ ಪೀಳಿಗೆಯಲ್ಲಿ ಬಸವ ತತ್ವಗಳನ್ನು ಅನೇಕ ರೀತಿಯಲ್ಲಿ ಬಿಂಬಿಸಲು ಹೆಣಗುತ್ತಿದ್ದರು. ಅದೇ ತತ್ವಗಳಿಗೆ ಮಾರುಹೋಗಿ ಬ್ರಾಹ್ಮಣ್ಯವನ್ನು ತೊರೆದು, ಲಿಂಗದೀಕ್ಷೆ ಪಡೆದು, ಹತ್ತಾರು ಸಮಾಜ ಸುಧಾರಣೆ ಕಾರ್ಯಗಳನ್ನು ಮಾಡುತ್ತಿದ್ದ ಪ್ರಖರ ವಾಗ್ಮಿ, "ಬುಲೆಟ್ ಸ್ವಾಮಿ" ಎನಿಸಿಕೊಂಡಿರುವ ತರುಣ ಶ್ರೀ ನಿಜಗುಣ ಸ್ವಾಮಿಗಳನ್ನು ತೋಂಟದಾರ್ಯ ಪರಂಪರೆಯ ಡಂಬಳ ಶಾಖಾ ಮಠಕ್ಕೆ ಮಠಾಧೀಶರನ್ನಾಗಿ ವಿಧಿಯುಕ್ತವಾಗಿ ಪೂಜ್ಯರು ನೇಮಿಸಿಕೊಂಡರು.

ಬಸವತತ್ತ್ವಗಳ ನಿಷ್ಠುರ ಮತ್ತು ಪ್ರಖರ ಪ್ರತಿಪಾದಕರಾಗಿದ್ದ ಪೂಜ್ಯ ಶ್ರೀ ಸಿದ್ಧಲಿಂಗ ಶ್ರೀಗಳು ಆ ತತ್ವಗಳನ್ನು ಅಷ್ಟೇ ಪ್ರಖರವಾಗಿ ವಿರೋಧಿಸುತ್ತಿರುವ ವೀರಶೈವ ಪಂಚಪೀಠಗಳನ್ನು ನೇರವಾಗಿಯೇ ಖಾರವಾಗಿ ಟೀಕಿಸುತ್ತಿದ್ದರು. ಹಾಗಾಗಿ ಅವರ ವಿರುದ್ಧ ಅನೇಕ ಶತ್ರುಗಳು ಹುಟ್ಟಿಕೊಂಡಿದ್ದರು. ಈ ಪಂಚಪೀಠಗಳು ಬಸವಣ್ಣನ ಚಾರಿತ್ರೆ ವಧೆಮಾಡಿ, ವಚನ ಸಾಹಿತ್ಯವನ್ನು ಸದೆಬಡಿದು, ಅಲ್ಲಲ್ಲಿ ವಚನಗಳನ್ನು ಪ್ರಕ್ಷಿಪ್ತಗೊಳಿಸಿ ತಮ್ಮ ಸ್ವಾರ್ಥವನ್ನು ಕಾಪಾಡಿಕೊಂಡಿದ್ದಾರೆ. ಸೊಲ್ಲಾಪುರದ "ಲಿಂಗೀಬ್ರಾಹ್ಮಣ ಗ್ರಂಥಮಾಲೆ" ಮೈಸೂರಿನಿಂದ ಪ್ರಕಟವಾಗುತ್ತಿದ್ದ "ಪಂಚಾಚಾರ್ಯ ಪ್ರಭೆ" ಮತ್ತು ಅದೇ ಸಂಸ್ಥೆಯಿಂದ ರಚಿಸಲ್ಪಟ್ಟ "ಕಾಶಿನಾಥ ಗ್ರಂಥಮಾಲೆ"ಯಿಂದ ಸೃಷ್ಟಿಸಿದ ಕೃತಕ ಸಾಹಿತ್ಯವನ್ನು ಚೆನ್ನಾಗಿ ತಿಳಿದುಕೊಂಡಿದ್ದ ಬೆರಳೆಣಿಕೆಯಷ್ಟು ತಜ್ಞರಲ್ಲಿ ಶ್ರೀಗಳು ಒಬ್ಬರಾಗಿದ್ದರು. ಅದೇ ಕಾರಣದಿಂದ ಗುರುಮಠ–ವಿರಕ್ತಮಠಗಳ ನಡುವಿನ ಶಾಶ್ವತ ತಿಕ್ಕಾಟ, ವೈರುದ್ಧ್ಯ, ಸೈದ್ಧಾಂತಿಕ ಕಲಹಗಳಿಂದ ಲಿಂಗಾಯತ ಸಮಾಜದಲ್ಲಿ ಒಕ್ಕಟ್ಟು ಮರೀಚಿಕೆಯಾಗಿದೆ. ಈ ಯಾದವೀ ಕಲಹವನ್ನು ಪರಿಹರಿಸಲು ೨೦೦೩ರಲ್ಲಿ ಅಖಿಲ ಭಾರತ ವೀರಶೈವ ಮಹಾಸಭೆ, ಬಸವ ಸಮಿತಿ ಮತ್ತು ಕೂಡಲ ಸಂಗಮ ಅಭಿವೃದ್ಧಿ ಮಂಡಳಿ ಸೇರಿಕೊಂಡು ಕೂಡಲಸಂಗಮದಲ್ಲಿ ಸಂಘಟಿಸಿದ್ದ ೯೦೦ ಮಠಾಧೀಶರ ಬೃಹತ್ ಸಮಾವೇಶ ಐತಿಹಾಸಿಕ ಮಹತ್ವ ಪಡೆದಿದೆ. (ಆ ಬಗ್ಗೆ ಗೋರುಚ ಅವರು ಬರೆದ 'ಅಪೂರ್ವ ಸಂಗಮ' ಗ್ರಂಥವನ್ನು ನೋಡಬಹುದು). ಅದರಲ್ಲಿ ಶ್ರೀ ಸಿದ್ಧಲಿಂಗ ಶ್ರೀಗಳು ಆಡಿದ ಮಾತುಗಳು ತುಂಬ ಮಹತ್ವ ಪಡೆದಿವೆ. ಬಸವತತ್ತ್ವಗಳ ನಾಶಕ್ಕಾಗಿ ಪಂಚಪೀಠಗಳು ನಿರಂತರವಾಗಿ ನಡೆಸಿದ ಕುತಂತ್ರಗಳನ್ನು ಕಣ್ಣಾರೆ ಕಂಡ ಅವರು "ಈ ವರೆಗೆ ಹೊರಗಿನಿಂದ ಬಸವಣ್ಣನನ್ನು ಮುಗಿಸಲು ನೀವೆಲ್ಲ ಸಾಕಷ್ಟು ಪ್ರಯತ್ನಿಸಿ ದಣಿದು ಸೋತಿದ್ದೀರಿ, ಇನ್ನು ಒಳಗೆ ಬಂದು ಅದೇ ಕಾರ್ಯವನ್ನು ಮಾಡಲು ಹೇಸದವರು ನೀವಾಗಿದ್ದೀರಿ, ಅದನ್ನೇ ಮುಂದುವರೆಸುವುದಾದರೆ ನೀವು

ಒಳಗೆ ಬರುವ ಅಗತ್ಯವಿಲ್ಲ, ಬಸವಣ್ಣನನ್ನು ಒಪ್ಪಿ, ಅವನ ತತ್ವಗಳನ್ನು ಪಾಲಿಸುವುದಾದರೆ ನಿಮ್ಮನ್ನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತೇವೆ, ಇಲ್ಲದಿದ್ದರೆ ನಿಮ್ಮ ದಾರಿ ನಿಮಗೆ ನಮ್ಮ ದಾರಿ ನಮಗೆ" ಎಂದು ನೇರವಾಗಿ ಹೇಳಿಬಿಟ್ಟರು. ಅದೇ ಧಾಟಿಯಲ್ಲಿ ಚಿತ್ರದುರ್ಗದ ಮುರುಘಾಶರಣರು, ಇಳಕಲ್ಲಿನ ಪೂಜ್ಯ ಮಹಾಂತಪ್ಪನವರು ಮಂಡಿಸಿದ ವಿಚಾರಗಳನ್ನು ತಿರಸ್ಕರಿಸಿ ಹೊರಟು ಹೋದ ಪಂಚಾಚಾರ್ಯರು ಇಂದು ಲಿಂಗಾಯತ ಹೋರಾಟದ ವೈರಿಗಳಂತೆ ವರ್ತಿಸುತ್ತಿದ್ದಾರೆ.

ತದನಂತರ ಶಿವಯೋಗ ಮಂದಿರದಲ್ಲಿ ನಡೆದ ಅಖಿಲ ಭಾರತ ವೀರಶೈವ ಮಹಾಸಭೆಯ ಅಧಿವೇಶನದಲ್ಲಿ ಪಂಚಾಚಾರ್ಯರ ಪರವಾಗಿದ್ದ ವೀರಶೈವರ ಒಂದು ಗುಂಪು ಶ್ರೀಗಳ ಮೇಲೆ ಹಲ್ಲೆ ನಡೆಸಿತು. ಆದರೂ ಅವರು ಜಗ್ಗಲಿಲ್ಲ, ಬಗ್ಗಲಿಲ್ಲ. ಯಾವುದೇ ಇತಿಹಾಸವಿಲ್ಲದ ಪಂಚಾಚಾರ್ಯರು ಬಸವತತ್ತ್ವಗಳಿಗೆ ಹಿನ್ನೆಡೆಯಾದಾಗ ಒಳಸೇರಿಕೊಂಡು ತಾವೇ ಲಿಂಗಾಯತದ ಸ್ಥಾಪಕರೆಂಬ ಹುಸಿಯನ್ನು ಬಿತ್ತಿಬೆಳೆಸಿದ್ದು ಶ್ರೀಗಳಿಗೆ ಚೆನ್ನಾಗಿ ಗೊತ್ತಿತ್ತು. ಆದ್ದರಿಂದಲೇ ಪಂಚಾಚಾರ್ಯರನ್ನು ಅವರು "ಹೈಜಾಕ್ ಕಂಪನಿ" ಎಂದು ಮೂದಲಿಸುತ್ತಿದ್ದರು! ಆ ಶಬ್ದಗಳು ಪಂಚಾಚಾರ್ಯರ ಅತೀವ ಕೋಪಕ್ಕೆ ಗುರಿಯಾಗಿದ್ದವು.

ಬಸವಣ್ಣನವರ ನಂತರ ಲಿಂಗಾಯತ ಧರ್ಮವನ್ನು ದೊಡ್ಡ ಪ್ರಮಾಣದಲ್ಲಿ ಬೆಳೆಸಿ ಉಳಿಸಿದವರಲ್ಲಿ ತೋಂಟದಾರ್ಯ ಮಠದ ಪಾತ್ರ ಬಹುದೊಡ್ಡದು. ತೋಂಟದಾರ್ಯರನ್ನು ತುಂಬ ಪೂಜ್ಯಭಾವನೆಯಿಂದ ಗೌರವದಿಂದ ಕಾಣುತ್ತಿದ್ದ ಕೆಳದಿಯ ಅರಸರು ಮಠಕ್ಕೆ ನೀಡಿದ್ದ ಬಂಗಾರದ ಕಿರೀಟ, ಬಂಗಾರ ಮತ್ತು ಬೆಳ್ಳಿಯ ಕೈಬಡಿಗೆ, ಬಂಗಾರದಲ್ಲಿ ಮಾಡಿದ ನೂರಾರು ಪೂಜಾ ಸಾಮಗ್ರಿಗಳು, ಆಸನಗಳು ಮಠದಲ್ಲಿವೆ. ಅಡ್ಡಪಲ್ಲಕ್ಕಿಯ ಅಧಿಕಾರವೂ ಈ ಮಠಕ್ಕಿತ್ತು. ಆದರೆ ಅವೆಲ್ಲವನ್ನೂ ಭದ್ರವಾಗಿ ತೆಗೆದಿಟ್ಟು ಅತ್ಯಂತ ಸರಳವಾದ ಕಾವಿಬಟ್ಟೆ, ಕಟ್ಟಿಗೆಯ ಕೈಬಡಿಗೆ, ಸಾದಾ ಆಸನಗಳು, ಅಡ್ಡಪಲ್ಲಕ್ಕಿಯನ್ನು ನಿಲ್ಲಿಸಿದ್ದು ಅವರ ಶರಣ ಜೀವನಕ್ಕೆ ಹಿಡಿದ ಕನ್ನಡಿಯಾಗಿದ್ದವು. ಅವರು ನಡೆ ಮತ್ತು ನುಡಿಯಲ್ಲೂ ಅಪ್ಪಟ ಶರಣ ಜೀವಿಗಳಾಗಿದ್ದರು.

ಶರಣರ ಸ್ಮಾರಕಗಳನ್ನು ಸಂರಕ್ಷಿಸುವುದು ಮತ್ತು ಬೆಳೆಸುವುದು ಅವರ ಇನ್ನೊಂದು ಕನಸಾಗಿತ್ತು. ಸುದೈವದಿಂದ ಕೂಡಲ ಸಂಗಮ ಮತ್ತು ಬಸವ ಕಲ್ಯಾಣ ಅಭಿವೃದ್ಧಿ ಮಂಡಳಿಗಳಲ್ಲಿ ಶ್ರೀಗಳು ಸದಸ್ಯರಾಗಿದ್ದು ಅತ್ಯಂತ ಸೂಕ್ತವಾದ ಮತ್ತು ಮಹತ್ವದ ಸಲಹೆ ಸೂಚನೆ ಮತ್ತು ವಿಚಾರಗಳನ್ನು ಮಂಡಿಸಿದ್ದರಿಂದ ಆ ಸ್ಥಳಗಳಲ್ಲಿನ ಸ್ಮಾರಕಗಳನ್ನು ಚೆನ್ನಾಗಿ ಸಂರಕ್ಷಿಸಲು ಸಾಧ್ಯವಾಗಿದೆ.

ಡಾ. ಸಿದ್ಧಲಿಂಗ ಶ್ರೀಗಳು ಕಾಯಕ ಜೀವಿಗಳು. ಯಾವಾಗಲೂ ಒಂದಿಲ್ಲೊಂದು ಕಾರ್ಯಗಳಲ್ಲಿ ನಿರತರಾಗಿರುತ್ತಿದ್ದರು. ಕೃಷಿ ಅವರ ಅಚ್ಚುಮೆಚ್ಚಿನ ಕಾಯಕವಾಗಿತ್ತು. ಅದರ ಗುರುತಾಗಿ ಅವರ ಮಠಕ್ಕೆ ಸೇರಿದ ಡಂಬಳ ಮತ್ತು ಗದುಗಿನ ಬರಡಾಗಿ ಬಿದ್ದಿದ್ದ ಜಮೀನುಗಳು ಇಂದು ಆಧುನಿಕ ಕೃಷಿಯ ಅನುಕರಣೆಯಿಂದ ಹಚ್ಚಹಸಿರಾಗಿ ಕಂಗೊಳಿಸುತ್ತಿವೆ.

ಶ್ರೀಗಳನ್ನು ಕೆಲವರು "ಪುಸ್ತಕದ ಸ್ವಾಮಿಗಳು" ಎಂದು ಕರೆಯುತ್ತಾರೆ. ಅದು ಶಬ್ದಶಃ ಸತ್ಯ! ಕನ್ನಡ ಸಾಹಿತ್ಯದಲ್ಲಿ ಅವರು ಡಾಕ್ಟರೇಟ ಪದವಿ ಪಡೆದಿದ್ದರು. ಶರಣ ಸಾಹಿತ್ಯದಲ್ಲಿ ಆಳವಾದ ಪಾಂಡಿತ್ಯವನ್ನು ಹೊಂದಿದ್ದರು. ತುಲನಾತ್ಮಕವಾಗಿ ಜಗತ್ತಿನ ಬಹುತೇಕ ಧರ್ಮಗಳನ್ನು ಆಳವಾಗಿ ಅಧ್ಯಯನ ಮಾಡಿದ್ದರು. ಬಸವಣ್ಣನವರು, ನೂರಾರು ಶರಣರು, ಲಿಂಗಾಯತ ಧರ್ಮ, ಲಿಂಗಾಯತ ನಾಯಕರು, ಬುದ್ಧಿಜೀವಿಗಳು, ಸಮಾಜ ಸುಧಾರಕರ ಬಗ್ಗೆ ಇಂದಿನ ಜನರಿಗೆ ಗೊತ್ತಿಲ್ಲದ ಮತ್ತು ಮುಂದಿನ ಪೀಳಿಗೆಗಳು ಮರೆತುಬಿಡಬಹುದಾದ ಅನೇಕ ಮಹತ್ವದ ಸಂಗತಿಗಳು ಅವರಿಗೆ ಗೊತ್ತಿದ್ದವು. ಅವುಗಳನ್ನು ಪ್ರಕಟಿಸಿ ಪ್ರಚಾರಗೊಳಿಸುವ ಉದ್ದೇಶದಿಂದ ನಾಲ್ಕಾರು ಪ್ರಕಟನಾ ಮಾಲಿಕೆಗಳನ್ನು ಆರಂಭಿಸಿದ್ದರು. ಲಿಂಗಾಯತ ಪುಣ್ಯಪುರುಷ ರತ್ನಮಾಲಿಕೆ, ಅಪ್ರಕಟಿತ ಗ್ರಂಥಮಾಲಿಕೆ, ಲಿಂಗಾಯತವನ್ನು ಕುರಿತು ಡಾಕ್ಟರೇಟ ಪ್ರಬಂಧಗಳ ಪ್ರಕಟಣೆ ಇತ್ಯಾದಿಗಳ ಮೂಲಕ ಸುಮಾರು ಒಂದು ಸಾವಿರಕ್ಕೂ ಹೆಚ್ಚು ಗ್ರಂಥಗಳನ್ನು ಪ್ರಕಟಿಸಿದ್ದಾರೆ. ಸಮಾಜಕ್ಕೆ ಗಣನೀಯ ಸೇವೆ ಸಲ್ಲಿಸಿದ ಮಹತ್ವದ ವ್ಯಕ್ತಿಗಳನ್ನು ಲೇಖಕರನ್ನು ಪ್ರತಿವರ್ಷ ಶ್ರೀಮಠದ ವತಿಯಿಂದ ಜಾತ್ರಾ ಕಾರ್ಯಕ್ರಮದಲ್ಲಿ ಸನ್ಮಾನಿಸುತ್ತಿದ್ದರು. ಬಸವ ಪ್ರಶಸ್ತಿಯನ್ನು ನೀಡುತ್ತಿದ್ದರು. ಅದನ್ನು ನನಗೆ ನೀಡಿದಾಗ ನಾನು ನಯವಾಗಿಯೇ ಅದನ್ನು ಸ್ವೀಕರಿಸಲು ಒಪ್ಪಲಿಲ್ಲ. ಆದರೂ ಅವರು ಒತ್ತಾಯ ಮಾಡಿದಾಗ ಅವರ ಮನಸ್ಸನ್ನು ನೋಯಿಸಬಾರದೆಂದು ಬಸವ ಪ್ರಶಸ್ತಿಯನ್ನು ಸ್ವೀಕರಿಸಿ ಅದರ ಸನ್ಮಾನ ಪತ್ರ ಮತ್ತು ಅದಕ್ಕೆ ಕೊಡಲ್ಪಡುವ ಹಣದ ಚೆಕ್‌ನ್ನು ಪೂಜ್ಯರ ಪಾದಗಳಿಗೆ ಅರ್ಪಿಸಿದೆ. ಅವರು ಆ ಹಣಕ್ಕೆ ದುಪ್ಪಟ್ಟು ಹಣ ಸೇರಿಸಿ ಒಂದು ದತ್ತಿಯನ್ನು ರಚಿಸಿಬಿಟ್ಟರು. ಆ ದತ್ತಿಯ ಮೂಲಕ ಈ ವರೆಗೆ ನಾಲ್ಕಾರು ಪುಸ್ತಕಗಳು ಪ್ರಕಟಗೊಂಡಿವೆ.

ಮೂಢನಂಬಿಕೆಗಳ ಗೂಡಾಗಿದ್ದ ವಾರ್ಷಿಕ ಜಾತ್ರೆಗಳನ್ನು ಸಾಮಾಜಿಕ, ಆರ್ಥಿಕ, ಕೃಷಿ, ಉದ್ಯೋಗ ಇತ್ಯಾದಿಗಳ ಕ್ಷೇತ್ರಗಳಿಗೆ ಉಪಯೋಗವಾಗುವಂತೆ ಮಾರ್ಪಡಿಸಿ ನಡೆಸುವ ಯೋಜನೆಯನ್ನು ಶ್ರೀಗಳು ಪ್ರತಿವರ್ಷವೂ ನಡೆಸುತ್ತ ಬಂದರು. ಇಂದು ತೋಂಟದಾರ್ಯ ಜಾತ್ರೆಯೆಂದರೆ ಅದೊಂದು ಶೈಕ್ಷಣಿಕ ಪ್ರವಾಸದಂತೆ ಭಾಸವಾಗುತ್ತದೆ. ಲಕ್ಷೋಪಲಕ್ಷ ಜನರು ಅವುಗಳಲ್ಲಿ ಭಾಗವಹಿಸುತ್ತಾರೆ.

ನಾನು ಭಾಗವಹಿಸಿದ ಅವರ ಒಂದು ವರ್ಷದ ಜಾತ್ರೆಯ ಸಂದರ್ಭದಲ್ಲಿ ಆಶೀರ್ವಾದ ಭಾಷಣ ಮಾಡುತ್ತ ಶ್ರೀಗಳು ಆಡಿದ ಮಾತುಗಳು ನನ್ನನ್ನು ಬಹುದಿನಗಳವರೆಗೆ ನಿದ್ದೆಗೆಡಿಸಿದ್ದವು. ಅವರು ಮಾತನಾಡುತ್ತ "ಸನ್ಯಾಸಿ ಜೀವನ ಏಕತಾನತೆ ಒಂದು ಸತ್ವಪರೀಕ್ಷೆ! ಸನ್ಯಾಸಿಯಾದವನು ತನ್ನ ವೈಯಕ್ತಿಕ ಜೀವನವನ್ನು ಸಾಮಾಜಿಕೀಕರಣಗೊಳಿಸದಿದ್ದರೆ ಆ ಸಾಮಾಜೀಕರಣದಲ್ಲಿ ಆಧ್ಯಾತ್ಮಿಕತೆ ಇಲ್ಲದಿದ್ದರೆ ಅದು ಮಹಾ ಅನಾಹುತಕ್ಕೆ ಕಾರಣವಾಗುತ್ತದೆ. ಅವೆರಡರ ಸಾಧನೆಯಲ್ಲಿಯೇ ಸನ್ಯಾಸಿ ಜೀವನದ ಸಾರ್ಥಕತೆ ಇದೆ" ಎಂದಿದ್ದರು. ಈ "ಏಕತಾನತೆ" ಎಲ್ಲರನ್ನೂ ಕಾಡುವ ಬೇತಾಳ. ಅದು ಹೊಸ ಹೊಸ ಅನ್ವೇಷಣೆಗಳಿಗೆ ಕಾರಣವಾಗಬಹುದು, ಅದ್ಭುತ ಸಾಹಿತ್ಯಕ್ಕೆ ಆಧಾರವಾಗಬಹುದು, ಮಹಾತತ್ತ ಜ್ಞಾನಿಗಳನ್ನು ಸೃಷ್ಟಿಸಬಹುದು ಇಲ್ಲವೆ ಮಹಾ ಅಪರಾಧಿಗಳನ್ನು, ವಿಷಯ ಲಂಪಟರನ್ನು, ಕುತಂತ್ರಿಗಳನ್ನು ದೇಶದ್ರೋಹಿಗಳನ್ನು ನಿರ್ಮಿಸಬಲ್ಲದು. ಅದೇ ಒಬ್ಬ ಸಾದಾ ಸನ್ಯಾಸಿಯನ್ನು ಮಹಾಪುರುಷನನ್ನಾಗಿಸಬಹುದು. ಆ ಕ್ರಿಯೆಯನ್ನು ನಾನು ಪೂಜ್ಯ ಸಿದ್ಧಲಿಂಗ ಶ್ರೀಗಳಲ್ಲಿ ಕಣ್ಣಾರೆ ಕಂಡೆ ಮತ್ತು ನಾಲ್ಕಾರು ಬಾರಿ ಅದೇ ವಿಷಯವನ್ನು ಅವರೊಂದಿಗೆ ಚರ್ಚಿಸಿದೆ.

ಲಿಂಗಾಯತ ಸ್ವತಂತ್ರ ಧರ್ಮದ ಹೋರಾಟ ಪ್ರಾರಂಭವಾಗುತ್ತಿದ್ದಂತೆ ಪ್ರಥಮ ರ‍್ಯಾಲಿಯನ್ನು ಸಂಘಟಿಸಿದ್ದ ಸಂದರ್ಭದಲ್ಲಿ ಶ್ರೀಗಳು ನನ್ನನ್ನು ದೂರವಾಣಿಯಲ್ಲಿ ಸಂಪರ್ಕಿಸಿ ಈ ರ‍್ಯಾಲಿಯಿಂದ ಏನು ಪ್ರಯೋಜನವಾಗುತ್ತದೆ ಹಾಗೂ ಅದರ ಉದ್ದೇಶವೇನು ಎಂದು ಪ್ರಶ್ನಿಸಿದರು. ನಾನು ಅವರಿಗೆ ಹೀಗೆ ಹೇಳಿದೆ: ಲಕ್ಷಾನುಲಕ್ಷ ಜನರು ರ‍್ಯಾಲಿಗಳಲ್ಲಿ ಸೇರುತ್ತಾರೆ. ಅಲ್ಲಿ ನಡೆಯುವ ಚರ್ಚೆಗಳಿಂದ, ತಜ್ಞರ ಭಾಷಣಗಳಿಂದ ತಮ್ಮ ಧರ್ಮದ ಬಗ್ಗೆ, ಅದರ ಮೂಲ ಸ್ವರೂಪದ ಬಗ್ಗೆ, ಈಗಿನ ಅದರ ಸಮಸ್ಯೆಗಳ ಬಗ್ಗೆ ಸ್ವಲ್ಪಾದರೂ ಸಾಮಾನ್ಯ ಜನರಲ್ಲಿ ಅರಿವು ಉಂಟಾಗುತ್ತದೆ. ಅಷ್ಟೊಂದು ದೊಡ್ಡ ಪ್ರಮಾಣದಲ್ಲಿ ಸೇರುವ ಜನರಲ್ಲಿ ತಮ್ಮ ಸಮಾಜದ ಬಗ್ಗೆ ಹೆಚ್ಚು ಏಕತೆ, ಜಾಗ್ರತೆ, ಮತ್ತು ಅರಿವು ಉಂಟಾದರೆ ಮುಂದಿನ ಹೋರಾಟಕ್ಕೆ ಸಹಾಯವಾಗುತ್ತದೆ. ಅವರೆಲ್ಲರೂ ಪಂಡಿತರಾಗಲಾರರು, ಎಲ್ಲರೂ ಒಂದೇ ಉದ್ದೇಶದಿಂದ ಬಂದಿರಲಿಕ್ಕಿಲ್ಲ, ಒಂದೇ ತರಹದ ವಿಚಾರ ಎಲ್ಲರಿಗೂ ಇರಲಿಕ್ಕಿಲ್ಲ, ಅಲ್ಲಿ ನಡೆವ ಚರ್ಚೆಯ ಎಲ್ಲ ಅಂಶಗಳನ್ನು ಎಲ್ಲರೂ ಒಪ್ಪಬಹುದೆಂದು ನಾವು ಭಾವಿಸುವುದಿಲ್ಲ. ಆದರೆ ಬಹುಜನರಲ್ಲಿ ಏನೋ ನಡೆಯಿತಿದೆ, ಏನೊ ಇದೆ ಇತ್ಯಾದಿ ಕುತೂಹಲ ಉಂಟಾಗಿ ಬಹುತೇಕ ಜನರು ತಮ್ಮ ತಮ್ಮಲ್ಲಿ ಚರ್ಚಿಸುವಂತಾಗುತ್ತದೆ. ಆ ಚರ್ಚೆಯನ್ನು ಪ್ರಾರಂಭಿಸುವುದೆ ಮತ್ತು ಕೆಲವು ಸಮಸ್ಯೆಗಳ ಬಗ್ಗೆ ಅರಿವು ಮೂಡಿಸುವುದೇ ಈ ರ‍್ಯಾಲಿಗಳ ಮೂಲ ಉದ್ದೇಶ" ಎಂದು ಹೇಳಿದೆ. ಅದನ್ನು ಅವರು ಒಪ್ಪಿಕೊಂಡರು ಮತ್ತು ನಮ್ಮೆಲ್ಲ ರ‍್ಯಾಲಿಗಳಲ್ಲಿ ಭಾಗವಹಿಸಿ ಅದ್ಭುತವಾಗಿ ಮಾತನಾಡಿದರು.

ಬಸವತತ್ತ್ವಗಳನ್ನು ಆಳವಾಗಿ ತಿಳಿದಿದ್ದ ಶ್ರೀಗಳು ಇಂದಿನ ಲಿಂಗಾಯತ ಸಮಾಜದ ಸ್ಥಿತಿಗತಿಗಳಿಂದ ಬಹಳಷ್ಟು ನೊಂದುಕೊಂಡಿದ್ದರು. ಬಹುತೇಕ ಮಠಾಧೀಶರು ಬಸವ ಪಥದಿಂದ ವಿಮುಖರಾಗಿ ಕರ್ಮಠತನದ ಗುಲಾಮರಾಗಿ, ಬಸವ ತತ್ವಗಳಿಗೆ ವಿರುದ್ಧವಾಗಿ ವರ್ತಿಸುತ್ತಿದ್ದುದನ್ನು ಕಂಡು ಚಿಂತಿತರಾಗಿದ್ದರು. ಒಂದುಕಡೆ ಬಸವ ವಿರೋಧಿಗಳಾದ ಪಂಚಾಚಾರ್ಯರು ಅವರನ್ನು ಬೆಂಬಲಿಸುವ ವೀರಶೈವ ಮಹಾಸಭೆ, ಇವರೊಂದಿಗೆ ಕೈಜೋಡಿಸಿ ಲಿಂಗಾಯತ ಧರ್ಮವನ್ನು ಹಾಳುಮಾಡುವ ಹೊಂಚುಹಾಕುತ್ತಿರುವ ಸನಾತನ ಶಕ್ತಿಗಳು ಈ ಚಳುವಳಿಗೆ ಹೇಗೆ ಸ್ಪಂದಿಸಬಹುದೆಂಬ ಬಗ್ಗೆ ಅವರು ನನ್ನೊಂದಿಗೆ ಬಹಳಷ್ಟು ಸಲ ಆಳವಾಗಿ ಚರ್ಚಿಸುತ್ತಿದ್ದರು ಮತ್ತು ಅತ್ಯಂತ ಸೂಕ್ತವಾದ ಮಾರ್ಗದರ್ಶನ ಮಾಡುತ್ತಿದ್ದರು.

ಶಿವಯೋಗ ಮಂದಿರ ಸ್ಥಾಪನೆ, ಕಾಶಿಯಲ್ಲಿ ಅಧ್ಯಯನ ಮಾಡಿದ ಸ್ವಾಮಿಗಳ ವರ್ತನೆ, ವೀರಶೈವ ಮಹಾಸಭೆಯ ವೈರುಧ್ಯ ನೀತಿ, ಶಿವಯೋಗಮಂದಿರದಲ್ಲಿ ನೀಡಿದ ತರಬೇತಿ ಯಾವ ರೀತಿಯಾಗಿ ಹೊಸ ಹೊಸ ಮಠಾಧೀಶರಲ್ಲಿ ತಪ್ಪು ಕಲ್ಪನೆ ಮತ್ತು ವಿಚಾರಗಳನ್ನು ಬೆಳೆಸಿ ಬಸವತತ್ವಗಳನ್ನು ಹಿಂದೆ ತಳ್ಳಲು ಉದ್ದೇಶಪೂರ್ವಕವಾಗಿ ನಿರ್ಲಕ್ಷಿಸಲು, ಕರ್ಮಠರಾಗಲು, ವೈದಿಕತನಕ್ಕೆ ಜಾರಲು, ಸಂಸ್ಕೃತಕ್ಕೆ ಮಣೆಹಾಕಲು ಕಾರಣವಾಯಿತೆನ್ನುವ ಬಗ್ಗೆ ಅನೇಕ ಘಟನೆಗಳನ್ನು ಸ್ವಾಮಿಗಳನ್ನು ಉದಾಹರಿಸುತ್ತ ಶ್ರೀಗಳು ನನ್ನೊಂದಿಗೆ ನಡೆಸಿದ ಚರ್ಚೆ ಹಾಗೂ ಅವರು ನನಗೆ ಆ

ಸಂಗತಿಗಳ ಬಗ್ಗೆ ಕಳಿಸಿದ ಪುಸ್ತಕಗಳು ಲಿಂಗಾಯತ ಹೋರಾಟದಲ್ಲಿ ಬಹಳಷ್ಟು ಉಪಯೋಗವಾಗಿವೆ.

ಶಾಶ್ವತವಾಗಿ ಬಸವ ತತ್ವಗಳನ್ನು ಉಳಿಸಿ ಬೆಳೆಸಬೇಕಾದ ವಿರಕ್ತ ಮಠಾಧೀಶರೇ ಇಂದು 'ವೀರಶೈವ' ಎಂಬ ಹಿಂದೂಮಯ ಪಂಥಕ್ಕೆ ಬೆಂಬಲ ನೀಡಲು ಅವರ ಜಾತಿ ಜಂಗಮತ್ವವೆ ಮತ್ತು ಅದರ ದುರಭಿಮಾನವೆ ಕಾರಣವೆಂದು ಅನೇಕ ಸಲ ನನಗೆ ಶ್ರೀಗಳು ಹೇಳಿದ್ದುಂಟು. ಅದನ್ನು ನಾನು ಕಣ್ಣಾರೆ ಕಂಡಿದ್ದೇನೆ. ಆದ್ದರಿಂದ ಈಗ ಶ್ರೀ ಸಿದ್ಧಲಿಂಗ ಶ್ರೀಗಳ ವಾರಸುದಾರರಾಗಿ ಬಂದಿರುವ ಶ್ರೀಸಿದ್ಧರಾಮ ಶ್ರೀಗಳು "ಬಸವಪರ ಮಠಾಧೀಶರ ವೇದಿಕೆ"ಯನ್ನು ನಿರ್ಮಾಣ ಮಾಡಲು ಯತ್ನಿಸುತ್ತಿರುವಂತಹ ಸ್ಥಿತಿ ಲಿಂಗಾಯತ ಸಮಾಜಕ್ಕೆ ಬಂದಿದೆ.

ಬಸವತತ್ವಗಳನ್ನೇ ಉಸಿರಾಡಿಸಿ, ಅವುಗಳಿಗಾಗಿಯೇ ತಮ್ಮ ಸಂಪೂರ್ಣ ಜೀವನವನ್ನು ಸವೆಸಿದ ಶ್ರೀ ಸಿದ್ಧಲಿಂಗ ಶ್ರೀಗಳ ಪ್ರಯತ್ನ ವ್ಯರ್ಥವಾಗಲಾರದು. ಇಂದು ಜಗತ್ತು ಬಹಳಷ್ಟು ಬದಲಾಗಿದೆ. ವೈಜ್ಞಾನಿಕ ಯುಗ ಇದಾಗಿದೆ. ಗೊಡ್ಡು ಪುರಾಣಗಳನ್ನು, ಅತಾರ್ಕಿಕ ಅಸಂಬದ್ಧ ಆಚರಣೆಗಳನ್ನು, ಮೂಢನಂಬಿಕೆಗಳನ್ನು ಒಪ್ಪುವ ಕಾಲ ಇದಲ್ಲ, ಈಗಿನ ಪೀಳಿಗೆ ತಾರ್ಕಿಕ, ವೈಜ್ಞಾನಿಕ ವಿಚಾರಗಳಿಗೆ, ಆಚಾರಗಳಿಗೆ ತಲೆಬಾಗುತ್ತದೆ. ಲಿಂಗಭೇದ, ಅಸಮಾನತೆ, ಜಾತೀಯತೆಯಂತಹ ಸಂಗತಿಗಳು ತಮ್ಮ ಅರ್ಥ ಕಳೆದುಕೊಂಡಿವೆ. ಬಸವ ಧರ್ಮ ವೈಜ್ಞಾನಿಕ, ತಾರ್ಕಿಕ ವಿಚಾರಗಳ ಆಚಾರಗಳ ಸಂಹಿತೆಯಾಗಿದೆ. ಇಂದಿಲ್ಲ ನಾಳೆಯಾದರೂ ಯಶಸ್ವಿಯಾಗುವುದು ವಿಶ್ವಮಾನವೀಯ ಬಸವ ಧರ್ಮವೇ ಹೊರತು ಗೊಡ್ಡ ಕಂದಾಚಾರಗಳಲ್ಲ. ಆ ಕಾಲ ಬೇಗ ಬರುತ್ತದೆ. ಆಗ ಪೂಜ್ಯ ಸಿದ್ಧಲಿಂಗ ಶ್ರೀಗಳು ಕಂಡ ಬಸವನ ಕನಸುಗಳು ನನಸಾಗುತ್ತವೆ. ಅವರು ಶಾಶ್ವತವಾಗಿ ನಮಗೆ ಆದರ್ಶ ಪುರುಷರಾಗಿ, ಮಾರ್ಗದರ್ಶಕರಾಗಿ, ಶಕ್ತಿಯಾಗಿ, ಧೈರ್ಯದ ಖಣಿಯಾಗಿ ನಮ್ಮೆಲ್ಲರ ಸ್ಮೃತಿಪಟಲದಲ್ಲಿರುತ್ತಾರೆ.

■■

---

**ತೋಂಟದ ಸಿದ್ಧಲಿಂಗ ಶ್ರೀಗಳು**

ನಿಂತ ನಿಲುವಿಗಿಂತ ನಡೆದ ನಿಲುವೆತ್ತರ
ಶಿವೋಹಂ ದಾಸೋಹಂ ಮಂತ್ರವ ಪಠಿಸುsತ
ಶಿವಯೋಗಿ ಸಿದ್ಧಲಿಂಗ ಬಂದಾನ । ಗದುಗಿsನ
ತೋಂಟದ ಮಠದಾಗ ನಿಂದಾನ

ಗುರುಸೇವೆ ಹರಸೇವೆ, ಹಗಲಿರುಳು ಜನಸೇವೆ
ನನಪಾಲಿಗಿರಲಿ ಎಂದಾನ । ಗುರುವರ
ನಿದ್ದಿ ನೀರಡಿಕಿ ಮರತಾನ

ಭಕ್ತರೆ ಸಂಪದವು ಭಕ್ತರೆ ಸರ್ವವು
ಭಕ್ತರಿಂದಲೆ ಮಠ ಮಾನ್ಯಗಳು । ಎನ್ನುsತ
ಭಕ್ತರುದ್ಧಾರ ಜಪಿಸ್ಯಾನ

ಆ ಲೋಕ ಈ ಲೋಕ, ಸ್ವರ್ಗ ಮರ್ತ್ಯಲೋಕ
ಕಾಯಕವೊಂದೇ ತಾರsಕ । ತೋಂಟದ
ಮಠದ ಅಪ್ಪನ ಮಂತ್ರ ಕಾಯಕ

ಭೂಮ್ಯಾಗ ದುಡದಾನ, ಸೀಮೀಯ ದಾಟ್ಯಾನ
ಬಂಧನ ಹರಿದು ಒಗೆದಾನ । ಬೆವರೀಲೆ
ಭೂಮಿ ತಾಯಿಯ ಉಡಿ ತುಂಬ್ಯಾನ

ನಿಂತ ನಿಲುವಿಗಿಂತ ನಡೆದ ನಿಲುವೆತ್ತರ
ಸಾವಿರದ ಒಗಟೀಗೆ ಉತ್ತರ । ನೀಡುsತ
ಎತ್ತರೆತ್ತರ ಬೆಳದು ನಿಂತಾನ

ನಿಂತಲ್ಲೆ ನೋಡುತ, ನಗೆ ಮದ್ದು ನೀಡುsತ
ನಡೆವವರ ಹಾದೀ ಬೆಳಕಾಗ್ಯಾನ । ಗುರುವರ
ನಮ್ಮೊಳಗಿನ ವಾಣಿ ಆಗ್ಯಾನ

**ಪ್ರೊ. ಬಿ. ಆರ್. ಪೋಲಿಸ್‌ಪಾಟೀಲ**
ಬನಹಟ್ಟಿ

# ಅಪ್ಪಟ ಭಾರತೀಯ ಹರ್ಡೇಕರ ಮಂಜಪ್ಪ

● ಶ್ರೀ ಎಂ. ಎಸ್. ಇಂಚಲ

'ಜನನೀ ಜನ್ಮಭೂಮಿಶ್ಚ ಸ್ವರ್ಗಾದಪಿ ಗರಿಯಸಿ' ಎಂಬ ಆರ್ಯೋಕ್ತಿಯನ್ನು ತಮ್ಮ ನಿತ್ಯ ಬದುಕಿನ ಉಸಿರನ್ನಾಗಿ ಮಾಡಿಕೊಂಡಿದ್ದರು ಹರ್ಡೇಕರ ಮಂಜಪ್ಪನವರು. ನಮ್ಮ ದೇಶದ ಆಸ್ತಿಯಾದ ನವತರುಣರನ್ನು ಕುರಿತು 'ಧೀರರಾಗಿರಿ, ಪವಿತ್ರರಾಗಿರಿ, ಸ್ವತಂತ್ರರಾಷ್ಟ್ರದ ವೀರರಾಗಿರಿ' ಎಂಬ ಸಂದೇಶವನ್ನು ಯುವ ಜನಾಂಗಕ್ಕೆ ಕೊಡಮಾಡಿದ ಪುಣ್ಯಪುರುಷರು.

**ಅಜ್ಞಾತ–ಮಹಾತ್ಮನೆ ನಿನಗಿದೋ ನಮಸ್ಕಾರ**
**ಲೋಕದ ಕಣ್ಣಿಗೆ ನೀ ಬೀಳದಿರಬಹುದು**
**ಲೋಕ ನಿನ್ನನ್ನು ಲೆಕ್ಕಿಸದಿರಬಹುದು**
**ಆದರೆ ಜಗದೀಶನ ಕಣ್ಣನೆಲ್ಲ ನೀನೆ ತುಂಬಿರುವೆ**
**ಆತನ ಎದೆಯನೆಲ್ಲ ನೀನೆ ಆವರಿಸಿರುವೆ**

ರಾಷ್ಟ್ರಕವಿ ಕುವೆಂಪು ಅವರು ಕರ್ನಾಟಕದ ಗಾಂಧಿ ಹರ್ಡೇಕರ ಮಂಜಪ್ಪನವರನ್ನು ಕುರಿತು ಹಾಡಿದುದು ಅವರ ವ್ಯಕ್ತಿತ್ವಕ್ಕೆ ಕನ್ನಡಿ ಹಿಡಿದಂತಿದೆ. ಮಹಾದೇಶಭಕ್ತ, ನಾಡಭಕ್ತ, ಬಸವಭಕ್ತ, ಗಾಂಧೀಜಿಯ ಆತ್ಮೀಯ ಸ್ನೇಹಿತ, ಕನ್ನಡ ನಾಡು ನುಡಿಗಳ ಹಾಗು ಉತ್ಕಟ ದೇಶಪ್ರೇಮಿಯಾದ, ನಮ್ಮ ಸಂಸ್ಕೃತಿಯ ಸುಂದರ ಮೂರ್ತಿ ಮಂಜಪ್ಪನವರನ್ನು ಸ್ಮರಿಸಿಕೊಂಡರೆ ಸಾಕು ಮನಸ್ಸು–ಹೃದಯ ಹಸನವಾಗುತ್ತದೆ. ಸ್ಫೂರ್ತಿಯಿಂದ ಎದೆನವಿಲು ಕುಣಿದಾಡುತ್ತದೆ. ಅವರು ಕೇವಲ ವ್ಯಕ್ತಿಯಾಗಿರದೆ ಆದರ್ಶ ರಾಷ್ಟ್ರಪ್ರೇಮಿಯಾಗಿದ್ದರು. ಅವರ ತಾತ್ವಿಕ ಬದುಕು, ಅವರ ಸಾಧನೆ ಹಾಗು ಅವರ ರಾಷ್ಟ್ರೀಯ ಹೋರಾಟ ನಿಜವಾಗಿ ಇಂದಿನ ಹೊಸ ಪೀಳಿಗೆಗೆ ಚೈತನ್ಯಮಯವಾಗಿದೆ.

ಬನವಾಸಿಯಲ್ಲಿ ಪಂಪನು ವಿದ್ಯಾಭ್ಯಾಸ ಮಾಡಿ ಮುಂದೆ ಪ್ರಸಿದ್ಧ ಆದಿಕವಿಯಾಗಿ ಹೊರಹೊಮ್ಮಿದುದು ಕನ್ನಡಿಗರ ಭಾಗ್ಯ. ಹೀಗಾಗಿ ಬನವಾಸಿ ದೇಶದ ಜನರ ಸಂಸ್ಕೃತಿಯನ್ನು ಬಹಳ ಸುಂದರವಾಗಿ ಬಣ್ಣಿಸಿದ್ದಾನೆ.

**ಚಾಗದ ಭೋಗದ ಅಕ್ಕರದ ಗೇಯದ**
**ಗೊಬ್ಬಿಯಲಂಪಿನಿಂಪುಗ**
**ಳ್ಗಾಗರಮಾದ ಮಾನಸರೇ ಮಾನಸರಂತವರಾಗಿಪುಟ್ಟಲೇ**
**ನಾಗಿಯು ಮೇಣೊ ತೀರ್ದಪುದೆ ತೀರದೊಡಂ**
**ಮಱಿದುಂಬಿಯಾಗಿ ಮೇಣ್**
**ಕೋಗಿಲೆಯಾಗಿ ಪುಟ್ಟುವುದು ನಂದನ ವನದೊಳ್**
**ಬನವಾಸಿ ದೇಶದೊಳ್ ॥**

ತ್ಯಾಗಿಗಳೂ, ಭೋಗಿಗಳೂ ಸುಶಿಕ್ಷಿತರೂ, ಸಂಗೀತಪ್ರಿಯರೂ ಭಾಷಣಕಾರರೂ ಆದ ಮನುಜರಿಂದ ಕಂಗೊಳಿಸುತ್ತದೆ. ಹುಟ್ಟಿದರೆ ಬನವಾಸಿ ದೇಶದಲ್ಲಿ ಹುಟ್ಟಬೇಕು ಇಲ್ಲವೆ ಮರಿದುಂಬಿಯಾಗಿ ಕೋಗಿಲೆಯಾಗಿ ಹುಟ್ಟಬೇಕು ಎಂಬಲ್ಲಿ ಪಂಪನ ಉತ್ಕಟ ನಾಡಪ್ರೇಮ ವ್ಯಕ್ತವಾಗುತ್ತದೆ. ಬನವಾಸಿ, ಅಲ್ಲಮಪ್ರಭುಗಳು ಹುಟ್ಟಿದ ನಾಡು. ಇದು ಕದಂಬರ ರಾಜಧಾನಿಯಾಗಿತ್ತು. ಅಕ್ಕಮಹಾದೇವಿ ಸುಳಿದಾಡಿದ ಪುಣ್ಯಭೂಮಿ. ಕನ್ನಡಿಗರ ಸಾಂಸ್ಕೃತಿಕ ನೆಲೆಬೀಡು ಇದಾಗಿತ್ತು.

ಇಂತಹ ಸುಂದರ ನಿಸರ್ಗ ತಾಣದಲ್ಲಿ ಕಾರವಾರ ಜಿಲ್ಲೆಯ ಶಿರಸಿ ತಾಲೂಕಿನ ಬನವಾಸಿಯಲ್ಲಿ ೧೮೮೬ ಫೆಬ್ರುವರಿ ೧೮ ರಂದು ಮಂಜಪ್ಪನವರು ಜನ್ಮವೆತ್ತಿದರು. ಮಧುಕೇಶ್ವರ ದೇವಾಲಯ ಪರಿಚಾರಿಕೆಯಾದ ತಾಯಿ ಮಂಜಮ್ಮನ ಕಂದ 'ಮಂಜು' ತಾಯಿಯ ಮಡಿಲಲ್ಲಿ ಪ್ರೇಮದ ಪುತ್ಥಳಿಯಾಗಿ ಬೆಳೆದ. ಮುಂದೆ ಅಣ್ಣ ಮಧುಲಿಂಗಪ್ಪನ ಆಶ್ರಯದಲ್ಲಿ ಪ್ರಾಥಮಿಕ ಶಿಕ್ಷಣವನ್ನು ಬನವಾಸಿಯಲ್ಲಿ ಪಡೆದ ಮಂಜು ಕಂದಾಯ ಇಲಾಖೆಯಲ್ಲಿ ಕಾರಕೂನನಾಗಿ ಸೇವೆ ಸಲ್ಲಿಸುತ್ತಿದ್ದ ಅಣ್ಣ. ಆಗ ಮಂಜಪ್ಪನವರು ಏಳು ರೂಪಾಯಿ ಸಂಬಳ ಪಡೆವ ಶಿಕ್ಷಕರಾದರು.

ಮಂಜಪ್ಪ ಮಾಸ್ತರರೆಂದು ವಿದ್ಯಾರ್ಥಿಪ್ರಿಯ, ಜನಪ್ರಿಯ ಗುರುಗಳಾದರು. ಮಕ್ಕಳ ಮೇಲೆ ಪರಿಣಾಮ ಬೀರುವಂತೆ,

# ೨ 'ಸ್ನೇಹ ಸೌರಭ' ಸದಾಶಿವನಗರ ೨ನೇ ಮುಖ್ಯರಸ್ತೆ, ೧೦ನೇ ಅಡ್ಡರಸ್ತೆ ಬೆಳಗಾವಿ–೧೯

ಅಂತಃಕರಣದಿಂದ ಕಲಿಸುತ್ತಿದ್ದರು. ವಿದ್ಯಾರ್ಥಿಗಳನ್ನು ತಮ್ಮ ಆತ್ಮವಿಶ್ವಾಸಕ್ಕೆ ತೆಗೆದುಕೊಂಡು ಶಿಸ್ತು, ಶಿಕ್ಷಣ ಹಾಗು ಮಕ್ಕಳ ಹಾಡುಗಳನ್ನು ಹಾಡಿ ಹಾಡಿ ಕಲಿಸುತ್ತಿದ್ದರು. ಮಕ್ಕಳು ದೇಶದ ಸಂಪತ್ತೆಂದು ಭಾವಿಸಿ ಎಲ್ಲರ ಬೆಳವಣಿಗೆಗೆ ಗಮನ ಹರಿಸುತ್ತಿದ್ದರು.

ಸಂಸ್ಕೃತ ಕಲಿತು 'ಶಾಸ್ತ್ರಿ' ಆಗಬೇಕೆಂದು ಕನಸು ಕಾಣುತ್ತಿದ್ದರು. ಆದರೆ ಕನಸು ನುಚ್ಚುನೂರಾಯಿತು. ಮಂಗೇಶ ರಾಯರಿಂದ 'ಅಮರಕೋಶ'ದ ಅಧ್ಯಯನ ಆರಂಭಿಸಿದ್ದರು. ಆದರೆ ಕೆಲವು ಬ್ರಾಹ್ಮಣರು ಶೂದ್ರನಿಗೆ ಸಂಸ್ಕೃತ ಕಲಿಸಕೂಡದೆಂದು ನಿರ್ಬಂಧ ಹಾಕಿದರು. ಮಂಗೇಶರಾಯರು ಬ್ರಾಹ್ಮಣರ ಈ ಕಟ್ಟಪ್ಪಣೆಯನ್ನು ಮಂಜಪ್ಪನವರಿಗೆ ತಿಳಿಸಿ ಸಂಸ್ಕೃತ ಕಲಿಸುವುದನ್ನು ಅನಿವಾರ್ಯವಾಗಿ ನಿಲ್ಲಿಸಬೇಕಾಯಿತು.

ಕೋಮು ಭಾವನೆಗಳು ಭಾವೈಕ್ಯತೆಗೆ ಕುಂದು ಬರುವ ಪ್ರಸಂಗದಲ್ಲಿ ಮಂಜಪ್ಪನವರು ಮರಾಠಿ ಕೇಸರಿ ಪತ್ರಿಕೆಯನ್ನು ಆಸಕ್ತಿಯಿಂದ ಓದುತ್ತಿದ್ದರು. ಭಾರತ ಸ್ವಾತಂತ್ರ್ಯಕ್ಕಾಗಿ ದೇಶಾಭಿಮಾನವನ್ನು ಬೆಳೆಯಿಸಿಕೊಳ್ಳಲು ಹಾತೊರೆಯುತ್ತಿದ್ದರು. ಪತ್ರಿಕಾರಂಗದೆಡೆ ಉತ್ಕಟ ಆಸಕ್ತಿ ಬೆಳೆದು, ಅಣ್ಣ ಮಧುಲಿಂಗಪ್ಪ ಹಾಗು ಮಂಜಪ್ಪ ಇಬ್ಬರೂ ಕೂಡಿಕೊಂಡು ಪತ್ರಿಕೆ ಪ್ರಕಟಿಸಬೇಕೆಂದು ತೀರ್ಮಾನ ಮಾಡಿ ಇಬ್ಬರೂ ನೌಕರಿಗೆ ರಾಜಿನಾಮೆ ಕೊಟ್ಟು ದಾವಣಗೆರೆಗೆ ನಡದೇ ಬಿಟ್ಟರು.

೧೯೦೬ ರಲ್ಲಿ 'ಧನುರ್ಧಾರಿ' ವಾರ ಪತ್ರಿಕೆಯನ್ನು ಮುದ್ರಿಸಲು ಆರಂಭಿಸಿದರು. ಅಣ್ಣ ಪ್ರೆಸ್ಸಿನ ಉಸ್ತುವಾರಿಯನ್ನು ನೋಡಿದರೆ ತಮ್ಮ ಮಂಜಪ್ಪ ಹರಿತವಾದ ಲೇಖನಗಳನ್ನು ಬರೆಯಲು ಆರಂಭಿಸಿದರು. ಮರಾಠಿ 'ಕೇಸರಿ' ಪತ್ರಿಕೆ, 'ಜ್ಞಾನ ಪ್ರಕಾಶಿಕಾ' ಪತ್ರಿಕೆಗಳಲ್ಲಿನ ಬಿಸಿಬಿಸಿ ಸುದ್ಧಿಗಳನ್ನು ಕನ್ನಡದಲ್ಲಿ ಅನುವಾದಿಸಿ ಪ್ರಕಟಿಸುವುದನ್ನು ಆರಂಭಿಸುತ್ತಾರೆ. ದೇಶಾಭಿಮಾನವನ್ನು ಯುವಕರಲ್ಲಿ ಬಿಂಬಿಸುತ್ತ, ತಮ್ಮ ಇಚ್ಛೆಯನ್ನು ಅಭಿವ್ಯಕ್ತಪಡಿಸುತ್ತಿದ್ದರು. ಬಂಗ್ಲಾ ವಿಭಜನೆ ದಂಗೆಯಿಂದ ಜನ ಕಂಗಾಲಾಗಿದ್ದರು. ಲಾಲಾ ಲಜಪತರಾಯರು, ಬಾಲಗಂಗಾಧರ ತಿಲಕ, ಬಿಪಿನ ಚಂದ್ರಪಾಲ್ ಇವರ ಹೋರಾಟದ ಕಿಡಿನುಡಿಗಳಿಂದ ಪ್ರಭಾವಿತರಾಗಿ 'ಧನುರ್ಧಾರಿ' ಪತ್ರಿಕೆಯಲ್ಲಿ ಲೇಖನ ಪ್ರಕಟಿಸಿ ಜನರನ್ನು ಹುರಿದುಂಬಿಸಿದರು.

೧೯೧೩ ರಲ್ಲಿ ಹಣದ ಅಡಚಣೆಯಿಂದಾಗಿ 'ಧನುರ್ಧಾರಿ' ಪತ್ರಿಕೆಯನ್ನು ನಿಲ್ಲಿಸಬೇಕಾಯಿತು. 'ಸ್ವಕರ್ತವ್ಯ ಸಿದ್ಧಾಂತ', 'ಬುದ್ಧಿಯ ಮಾತು' ಪುಸ್ತಕಗಳನ್ನು ಪ್ರಕಟಿಸಿದರು. ಅವರ ಬುದ್ಧಿಯ ಮಾತು ಯುವಕರಿಗೆ ಹೇಳಿಮಾಡಿಸಿದ ಪುಸ್ತಕ. ತರುಣರೆಲ್ಲ ಓದಲೇಬೇಕಾದ ನೀತಿ ಪುಸ್ತಕ. ಗುರುವು ಶಿಷ್ಯರಿಗೆ ಬೋಧಿಸಿದಂತೆ ಬರೆದುದು. ಸ್ವಲ್ಪ ಕೃತಿಯೊಳಗೆ ಪ್ರವೇಶಿಸಿ ನೋಡೋಣ. ಯುವಕರಿಗೆ ಕಿವಿಮಾತು ಹೀಗೆ ಹೇಳಿದ್ದಾರೆ:

ಲಗ್ನವಾಗುವುದಕ್ಕೆ ಪ್ರಾಯವೊಂದೇ ಸಾಲದು. ಅನೇಕ ಸಂಗತಿಗಳ ಕಡೆಗೆ ಲಕ್ಷಕೊಡಬೇಕಾಗುತ್ತದೆ. ಬೇಗನೆ ಲಗ್ನವಾಗಬೇಕೆಂದು ಆತುರ ಪಡಬೇಡ ನಿನ್ನ ತಾಯಿ, ತಂದೆ, ಗುರುಹಿರಿಯರ ಮಾತಿಗೆ ಕಿವಿಗೊಡು ನೀನು ಕೈಹಿಡಿಯುವ ಕನ್ನೆಯ ನಡೆ–ನುಡಿ, ಗುಣ–ಸ್ವಭಾವ ಮತ್ತು ದೇಹಾರೋಗ್ಯ ಮೊದಲಾದವುಗಳನ್ನು ಚೆನ್ನಾಗಿ ತಿಳಿದುಕೊ ಎಂದು ಉಪದೇಶ ಮಾಡುತ್ತಾರೆ ಮಂಜಪ್ಪನವರು. ಅಷ್ಟೆ ಅಲ್ಲ ಜೂಜಾಡುವ ಕೆಟ್ಟ ಚಟಕ್ಕೆ ಬೀಳಬೇಡ, ಕುಡಿಯುವುದರಿಂದ ಮನೆ ಹಾಳಾಗುತ್ತದೆ. ಜೀವನವೇ ಅಲ್ಲೋಲ ಕಲ್ಲೋಲವಾಗುತ್ತದೆ. ತಂಬಾಕು ಸೇದುವುದು ಕೆಟ್ಟ ಚಟ. ಕಾಫಿ, ಚಹಾ, ಕೋಕೋ ಕುಡಿಯುವುದು, ಸಿಕ್ಕ ಸಿಕ್ಕ ಅಂಗಡಿಗಳಲ್ಲಿ ತಿಂಡಿತಿನಿಸುಗಳನ್ನು ತಿನ್ನುವುದನ್ನು ಬಿಟ್ಟು ಬಿಡು, ಅಶ್ಲೀಲ ನಾಟಕಗಳನ್ನು ನೋಡಬೇಡ, ಹಾಳು ಹರಟೆ ಹೊಡೆಯಬೇಡ, ಒಕ್ಕಲುತನ ಮಾಡುವುದಾದರೆ ಸುಧಾರಿಸುವ ಪದ್ಧತಿಗಳನ್ನು ತಿಳಿದಕೊ, ವ್ಯಾಪಾರ ಮಾಡುವುದಾದರೆ ಕಲಬೆರಿಕೆ ಮಾಡಿ ಜನರಿಗೆ ಮೋಸ ಮಾಡಬೇಡ, ಪ್ರಾಮಾಣಿಕವಾಗಿ ದುಡಿ ಎಂದು ತರುಣರಿಗೆ ಬೋಧಿಸಿ ಅವರ ಮನ ಪರಿವರ್ತನೆ ಮಾಡಿದ್ದಾರೆ. ರಾಷ್ಟ್ರಭಕ್ತಿ, ದೇಶಾಭಿಮಾನವನ್ನು ತಲೆಯಲ್ಲಿ ತುಂಬಿದ್ದಾರೆ. ಅವರ 'ಬುದ್ಧಿಯ ಮಾತು' ಇಂದಿಗೂ ಪ್ರಸ್ತುತವಾಗಿದೆ. ಯುವಕರಿಗೆ ದಾರಿದೀಪವಾಗಿದೆ ಎಂದು ಹೇಳಬೇಕಾಗುತ್ತದೆ.

ಗಾಂಧೀಜಿಯವರ ಜೀವನ ಕುರಿತು 'ಮಹಾತ್ಮಾ ಗಾಂಧೀಯವರ ಈಗಿನ ಚರಿತ್ರೆ' ಪ್ರಕಟಿಸಿದರು. ಕನ್ನಡದಲ್ಲಿ ಗಾಂಧೀಜಿ ಕುರಿತು ಬರೆದ ಪ್ರಥಮ ಕೃತಿಯಾಗಿದೆ. ೧೯೨೦ ರಲ್ಲಿ ಖಾದಿಧಾರಿಗಳಾಗಿ, ಗಾಂಧಿ–ಬಸವೇಶ್ವರ ತೌಲನಿಕ ಅಧ್ಯಯನ ಮಾಡಿದರು. ಅಪ್ಪಟ ರಾಷ್ಟ್ರೀಯವಾದಿ ಮಂಜಪ್ಪನವರು ನಮ್ಮ ನಾಡಿನಲ್ಲಿ ರಾಷ್ಟ್ರೀಯ ಚಟುವಟಿಕೆಗಳಿಗೆ ಹೊಸ ದಿಕ್ಕನ್ನು ತೋರಿಸಿದರು.

೧೯೨೪ ರಲ್ಲಿ ಹರಿಹರದ ತುಂಗಭದ್ರಾ ನದಿ ದಂಡೆಯಲ್ಲಿ ಸತ್ಯಾಗ್ರಹ ಆಶ್ರಮವನ್ನು ಸ್ಥಾಪಿಸಿ, ರಾಷ್ಟ್ರೀಯ ಧರ್ಮ ಮತ್ತು ಸತ್ಯಾಗ್ರಹ ತತ್ತ್ವಗಳನ್ನು ಪ್ರಚಾರಮಾಡಲು

ಪ್ರಾರಂಭಿಸಿದರು. ಅದೇ ವರುಷ ಹಾವೇರಿಯಲ್ಲಿ ನಡೆದ ರಾಷ್ಟ್ರೀಯ ಸಭೆಯ ಅಧ್ಯಕ್ಷರಾಗಿ ಮಾತನಾಡಿದರು. ಅಲ್ಲದೆ ವಿಜಾಪುರದಲ್ಲಿ ಶ್ರೀ ರಾಜಾಜಿಯವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಭಾಷಣ ಮಾಡಿ ಜನರನ್ನು ಬಡಿದೆಬ್ಬಿಸಿದರು.

ಆಲಮಟ್ಟಿಯಲ್ಲಿ ಶರಣ ಜೀವನ ಸಾಗಿಸುತ್ತಿದ್ದ ಸಮಯ ತುಂಗಭದ್ರಾ ನದಿಗೆ ಮಹಾಪೂರ ಬಂದು ಇವರ ಆಶ್ರಮ ನೀರಲ್ಲಿ ತೇಲಿತು. ಅದೇ ವೇಳೆ ತಾಯಿ ಉಸಿರೆಳೆದರು. ಅನಂತರ ಉತ್ತರ ಕರ್ನಾಟಕದ ತುಂಬೆಲ್ಲ ಸಂಚರಿಸಿ ಉಪನ್ಯಾಸ ನೀಡುತ್ತ ಜನತಾ ಜನಾರ್ಧನನ ಸೇವೆ ಮಾಡಿದರು. ತುಂಗಭದ್ರಾ ತೀರದಿಂದ ಕೃಷ್ಣಾ ತೀರಕ್ಕೆ ಬಂದು ನೆಲೆಸಿದರು. ಅಲ್ಲಿ ಗಾಂಧೀಜಿಯವರ ಅಪೇಕ್ಷೆಯಂತೆ ವೃತ್ತಿ ಪ್ರಧಾನವಾದ ವಿದ್ಯಾಲಯವನ್ನು ಸ್ಥಾಪಿಸಿದರು. ೧೯೨೮-೧೯೩೦ ನೇ ಸಾಲಿನಲ್ಲಿ 'ಖಾದಿ ವಿಜಯ' ಹಾಗು 'ಉದ್ಯೋಗ' ಮಾಸ ಪತ್ರಿಕೆಯನ್ನು ಹೊರಡಿಸಿದರು. ೧೯೩೬ ರಲ್ಲಿ ಕಳೆದ ಮೂವತ್ತು ವರ್ಷಗಳ ನನ್ನ ಕಾಣಿಕೆ' ಎಂಬ ಆತ್ಮಚರಿತ್ರೆಯನ್ನು ಪ್ರಕಟಿಸಿದರು. ಯುವಕ-ಯುವತಿಯರು ಓದಲೇಬೇಕಾದ ಗುರುತರವಾದ ಕೃತಿಯಾಗಿದೆ. ಅವರ ಬದುಕಿನ ಅನಂತ ಮುಖಗಳನ್ನು ಚಿತ್ರಿಸುವ ಪುಸ್ತಕವಾಗಿದೆ. ಆಲಮಟ್ಟಿ ಆಶ್ರಮದಲ್ಲಿದ್ದಾಗಲೇ 'ಸುಬೋಧಸಾರ' 'ಶುದ್ಧಿ ಸಂಘಟನೆ' 'ವಚನಕಾರರ ಸಮಾಜರಚನೆ' ಮೊದಲಾದ ಕೃತಿಗಳನ್ನು ರಚಿಸುತ್ತಾರೆ. ೧೯೪೬ ರಲ್ಲಿ 'ಎಚ್ಚತ್ತ ಹಿಂದುಸ್ಥಾನ' ಪುಸ್ತಕ ಪ್ರಕಟಿಸಿದರು. ಪ್ರಗತಿ ಗ್ರಂಥಮಾಲೆಯನ್ನು ಆರಂಭಿಸುತ್ತಾರೆ. ಇಂತಹ ಮಹಾಶರಣ ೧೯೪೭ ಜನೆವರಿ ಮೂರರಂದು ಪರಮಾತ್ಮನಲ್ಲಿ ಲೀನವಾದರು. ಮಂಜಪ್ಪನವರನ್ನು ಕುರಿತು 'ಕರ್ನಾಟಕ ಗಾಂಧಿ' ಮಹಾಪ್ರಬಂಧವನ್ನು ಡಾ. ಮಲ್ಲಿಕಾರ್ಜುನ ಮೇತ್ರಿ ಕನ್ನಡಿಗರಿಗೆ ಓದಲು ರಚಿಸಿ ಕೊಟ್ಟಿದ್ದಾರೆ. ಕರ್ನಾಟಕ ಗಾಂಧಿಯಾಗಿ, ರಾಷ್ಟ್ರಧರ್ಮ ದ್ರಷ್ಟಾರರಾಗಿ, ಸಾಮಾಜಿಕ-ಧಾರ್ಮಿಕ ಚಿಂತಕರಾಗಿ, ಲೋಕಮಾನ್ಯ ತಿಲಕ, ಮಹಾತ್ಮಾಗಾಂಧಿ, ಬಸವಣ್ಣ ಮೊದಲಾದವರ ಪರಮಭಕ್ತರಾಗಿ ಯುಗಪುರುಷರೆನಿಸಿದ್ದಾರೆ. ಹರ್ಡೇಕರ ಮಂಜಪ್ಪನವರು ಪ್ರಾತಃಸ್ಮರಣೀಯರಾಗಿದ್ದಾರೆ.

■■

## ವಚನಜ್ಯೋತಿ

**ಭೂಮಿಯ ಮೇಲೆ ಹುಟ್ಟಿದ ಕಲ್ಲ ತಂದು**
**ಭೂತದೇಹಿಗಳ ಕೈಯಲ್ಲಿ ಕೊಟ್ಟು**
**ಕೊಟ್ಟ ಕೂಲಿಯ ತಕ್ಕೊಂಡು ಹೊಟ್ಟೆಯ ಹೊರೆವ ಭ್ರಷ್ಟರಿಗೆ**
**ಪ್ರಸಾದವೆಲ್ಲಿಯದೋ?**
**ನಾದಂ ಲಿಂಗಮಿತಿ ಜ್ಞೇಯಂ ಬಿಂದು ಪೀಠಮುದಾಹೃತಂ।**
**ನಾದಬಿಂದುಯುತಂ ರೂಪಂ ಲಿಂಗಾಕಾರಮಿಹೋಚ್ಯತೇ॥**
**ಎಂದುದಾಗಿ, ಇಷ್ಟಲಿಂಗದಾದಿಯನಿವರೆತ್ತ ಬಲ್ಲರು?**
**ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ.**

**-ತೋಂಟದ ಸಿದ್ಧಲಿಂಗಯತಿ**

ಭೂಮಿಯಲ್ಲಿರುವ ಯಾವುದೋ ಕಲ್ಲನ್ನು ಲಿಂಗವಾಗಿಸಿ, ಅದನ್ನು ಸಂಸ್ಕಾರ ಹೀನರಾದ ಬದ್ಧಜೀವಿಗಳ ಕೈಯಲ್ಲಿ ಕೊಟ್ಟು ಅವರು ಕೊಡುವ ದಕ್ಷಿಣೆ (ಕೂಲಿ)ಯಿಂದ ಹೊಟ್ಟೆ ತುಂಬಿಕೊಳ್ಳುವವರಿಗೆ ಪ್ರಸಾದವಿಲ್ಲ. ನಾದವೇ ಲಿಂಗ, ಬಿಂದುವೇ ಪೀಠ, ನಾದಬಿಂದುಗಳ ರೂಪವೇ ಲಿಂಗಾಕಾರವಾಗಿರುವುದರಿಂದ ಹೊಟ್ಟೆ ಹೊರೆವ ಇಂತವರು ಇಷ್ಟಲಿಂಗದ ಮೂಲವನ್ನರಿಯರು ಎಂಬ ಭಾವ.

# ಸಿದ್ಧರಾಮೇಶ್ವರರ ವಚನದೊಂದು ತಾತ್ಪರ್ಯ

● ನದಾಫ ಎಚ್. ಹತ್ತಿಮತ್ತೂರು

ಶರಣರ ವಚನಗಳು ಬಹುಮೌಲ್ಯಯುತವಾಗಿದ್ದು ಒಳ್ಳೆಯ ಆಲೋಚನೆಯನ್ನು ಬಿಂಬಿಸುತ್ತವೆ. ಒಂದೊಂದು ವಚನಗಳು ಅಗಾದ ಮೌಲ್ಯವನ್ನು ಪ್ರಸಾರ ಮಾಡುತ್ತಿದ್ದು, ಅವುಗಳ ಅರಿವು ಪ್ರತಿಯೊಬ್ಬ ಭಾರತೀಯ ನಾಗರಿಕನಲ್ಲಿ ಇರಬೇಕಾಗುತ್ತದೆ. ಈ ನೆಲದ ಸಾಂಸ್ಕೃತಿಕ ಬದುಕಿಗೆ ಅವುಗಳ ಪಾತ್ರ ಅತ್ಯಂತ ಮಹತ್ವದೆನಿಸಿವೆ. ಯಾರ ಹಂಗಿಗೂ ಒಳಗಾಗದ ಶರಣರು ತಾವು ಕಂಡುಂಡ ಅನುಭವಗಳನ್ನು ಇಟ್ಟುಕೊಂಡೆ ಮಾನವ ಲೋಕವನ್ನು ಬೆಳಗಿಸಲು ಹಾತೊರೆದವರು. ಅವರ ಒಂದೊಂದು ಮಾತುಗಳು ಸಹ ಸಮಾಜದ ಅಂಕುಡೊಂಕುಗಳಿಗೆ ಬ್ರಹ್ಮಾಸ್ತ್ರಗಳಾಗಿದ್ದು, ಮೌಢ್ಯವನ್ನು ಸರ್ವನಾಶಮಾಡುವಲ್ಲಿ ಸೆಣಸಿವೆ. ದಾಸೋಹವನ್ನು ಪ್ರತಿಪಾದನೆ ಮಾಡುವುದರೊಂದಿಗೆ ಅವರು ಸಮಾಜದಲ್ಲಿಯ ಉತ್ಪನ್ನಗಳ ಸಮಪಾಲು ಧೋರಣೆಗೆ ನಾಂದಿಹಾಡಿದವರು. ಮೌಢ್ಯವನ್ನು ಬಿತ್ತಿ ಮತ್ತೊಬ್ಬರ ದುಡಿಮೆಯಲ್ಲಿಯೇ ಸುಖ ಬದುಕನ್ನು ನಡೆಸುತ್ತಿದ್ದ ಸ್ವಾರ್ಥ ಧರ್ಮಿಷ್ಠರ ಪಾಲಿಗೆ ಶರಣರು ಖಳನಾಯಕರು. ಆದರೆ ದುಡಿದು ಉಣ್ಣುವವರ ಪಾಲಿಗೆ ಇವರೇ ನಿಜವಾದ ನಾಯಕರು. ದೇವರು ಎನ್ನುವುದಕ್ಕೆ ಹೊಸ ವಾಖ್ಯಾನ ನೀಡಿದ ಶರಣರು ಕಾಯಕದಲ್ಲಿಯೇ ದೇವರನ್ನು ಕಂಡವರು. ಅದಕ್ಕಾಗಿಯೇ ಕಾಯಕವೇ ಕೈಲಾಸ ಎಂಬುದು ಅವರ ಆದ್ಯ ಸೊಲ್ಲಾಯಿತು. ಆತ್ಮಶುದ್ಧಿ ಮತ್ತು ಕಾಯಕ ಮಹತ್ವವನ್ನು ಜಗತ್ತಿಗೆ ತಿಳಿ ಹೇಳಿದ ಶರಣರು ಬಂಡಾಯಗಾರರೆಂದೆ ಗುರುತಿಸಿಕೊಂಡವರು. ಜಗತ್ತಿನಲ್ಲಿಯೇ ಪ್ರಪ್ರಥಮ ಬಂಡಾಯಗಾರರು ಎಂಬ ಅರ್ಹತೆಗೆ ಒಳಗಾದ ಇವರು ಮಾನವತ್ವದ ತತ್ವವನ್ನು ಎತ್ತಿಹಿಡಿದವರು. ಇವರ ಬಂಡಾಯದ ಧ್ವನಿ ಎಷ್ಟು ಖಾರವಾಗಿತ್ತೆಂಬುದನ್ನು ಸಿದ್ಧರಾಮೇಶ್ವರರ ಒಂದು ವಚನದ ಮುಖಾಂತರ ನಾವು ಅರಿಯಬಹುದು.

**'ಎಮ್ಮ ವಚನದೊಂದು ಪಾರಾಯಣಕ್ಕೆ**
**ವ್ಯಾಸನದೊಂದು ಪುರಾಣ ಸಮಬಾರದಯ್ಯಾ**
**ಎಮ್ಮ ವಚನದ ನೂರೆಂಟರಧ್ಯಯನಕ್ಕೆ**
**ಶತರುದ್ರೀ(ಯಾಗ)ಸಮ ಬಾರದಯ್ಯಾ**
**ಎಮ್ಮ ವಚನದ ಸಾಸಿರ ಪಾರಾಯಣಕ್ಕೆ**
**ಗಾಯತ್ರಿ ಲಕ್ಷ ಜಪ ಸಮ ಬಾರದಯ್ಯಾ**
**ಕಪಿಲಸಿದ್ದಮಲ್ಲಿಕಾರ್ಜುನ'**

ದುಡಿಮೆ ಮಾಡದೆ ನೇಮ ನಿತ್ಯಗಳ ಹಿನ್ನೆಲೆಯಲ್ಲಿ ಜೀವಿಸುವವರನ್ನು ಗುರಿಯಾಗಿಟ್ಟುಕೊಂಡು ಹೇಳಿರುವುದನ್ನು ನಾವು ಇಲ್ಲಿ ಕಾಣುತ್ತೇವೆ. ವೇದ ಪುರಾಣಗಳನ್ನು ಹೇಳಿ ಜನರನ್ನು ಧರ್ಮದ ಬಂಧನದಲ್ಲಿರಿಸಿ. ತಾವು ಮಾತ್ರ ಅದರಿಂದ ಆದಾಯ ಪಡೆದು ವಂಚಿಸುವವರ ಆತ್ಮ ವಿಮರ್ಶೆಗೆ ಈ ವಚನ ಸಾಕ್ಷಿಯಾಗಿದೆ. ವ್ಯಾಸ ಮಹರ್ಷಿ ಬರೆದ 'ಮಹಾಭಾರತ' ಪುರಾಣ ಕೃಷ್ಣನ ಕಾರ್ಯಭಾರವನ್ನು ತಿಳಿಸುವಂತಹದ್ದು. ಮಹಾಭಾರತದುದ್ದಕ್ಕೂ ಕೃಷ್ಣನ ಪಾತ್ರ ಅತೀಮುಖ್ಯವಾಗಿದ್ದು, ಏನೇ ಆದರೂ ಅದು ಒಳ್ಳೆಯದಕ್ಕೆ ಮಾಡಿದ್ದಾನೆ ಎಂಬುವ ಚಿಂತನೆ ನಮ್ಮಲ್ಲಿದೆ. ಇಲ್ಲಿ ಕೃಷ್ಣ ಅನ್ಯಾಯ ಮಾಡಿದರೂ ಅದು ಧರ್ಮಿಷ್ಠರ ಉಳಿವಿಗಾಗಿ ಎನ್ನುವ ಮಾತು ಅಷ್ಟೇ ಸತ್ಯತನದಿಂದ ಕೂಡಿದೆ. ಆದರೆ ವಚನಕಾರರ ನೋಟ ನಮಗಿಂತ ಭಿನ್ನವಾಗಿದೆ. ವಾಸ್ತವ ಬದುಕಿನ ಹಿನ್ನೆಲೆಯಲ್ಲಿ ಇಟ್ಟುಕೊಂಡು ಅದನ್ನು ವಿಮರ್ಶಿಸಿದ್ದಾರೆ. ಹೇಳುವುದೊಂದು ಮಾಡುವುದೊಂದು ಎನ್ನುವ ಟೀಕೆಯ ಹಿನ್ನೆಲೆಯಲ್ಲಿ ನೋಡಿದವರು. ಮೋಸ ಮಾಡುವವನು ದೇವರು ಎನಿಸಿಕೊಳ್ಳುತ್ತಾನೆಯೇ ಎಂಬುದು ಅವರ ಬಲವಾದ ಪ್ರಶ್ನೆ. ದೇವರು ಎಂಬವನಿಗೆ ಅಗಾಧವಾದ ಶಕ್ತಿ ಇರುತ್ತದೆ. ಆ ಶಕ್ತಿಯನ್ನು ಬಳಸಿಕೊಂಡೆ ಎದುರಿಸಿಬೇಕಾಗಿತ್ತು ಹೊರತು, ಒಳ್ಳೆಯದನ್ನು ಸಾಬೀತು ಪಡಿಸಲು ಮೋಸ ಮಾಡಬಾರದು ಎನ್ನುವುದು ಅವರ ನಿಜವಾದ ಕಳಕಳಿ. ಅದಕ್ಕಾಗಿಯೇ ಸಿದ್ದರಾಮೇಶ್ವರನು ಶರಣರ ಒಂದು ವಚನದ ಪಾರಾಯಣಕ್ಕೆ ವ್ಯಾಸನ ಪುರಾಣ ಸಮಬಾರದಯ್ಯಾ ಎಂದಿರುವರು.

**ಪ್ಲಾ. ನಂ-೧, ವೀರಭದ್ರೇಶ್ವರ ಕಾಲನಿ, ಉಣಕಲ್ಲ, ಹುಬ್ಬಳ್ಳಿ (ತಾ) ಧಾರವಾಡ (ಜಿ) ಮೊ-೮೮೬೧೫೨೬೮೨೫**

ನುಡಿದಂತೆ ನಡೆಯುವ ಪ್ರಕ್ರಿಯೆ ಆ ಪುರಾಣದಲ್ಲಿಲ್ಲ. ಶರಣರ ತತ್ವ ನುಡಿದಂತೆ ನಡೆಯಬೇಕು ಎಂಬುದು. ಪ್ರಾಣ ಹೋದರೂ ಪರವಾಗಿಲ್ಲ ನಡೆ-ನುಡಿ ಒಂದೇ ಆಗಿರಬೇಕು ಎನ್ನುವುದೇ ಅವರ ನಿಷ್ಠೆ.

ಯಾಗಗಳನ್ನು ಮಾಡುವುದರಿಂದ ಪುಣ್ಯ ಪ್ರಾಪ್ತಿಯಾಗುತ್ತದೆ ಮತ್ತು ಜಯ ಯಾವಾಗಲೂ ಲಭ್ಯವಾಗುತ್ತದೆ ಎಂಬ ನಂಬಿಕೆ ಹರಿಬಿಟ್ಟಿರುವುದನ್ನು ಪ್ರಶ್ನಿಸಿ ಎಚ್ಚರಿಸುವ ಮಾನದಂಡ ಅವರ ಎರಡನೇ ಮಾತಿನಲ್ಲಿದೆ. ಯಾಗಗಳನ್ನು ಮಾಡುವ ಸಂದರ್ಭದಲ್ಲಿ ಅನೇಕ ಆಹಾರ ಪದಾರ್ಥಗಳನ್ನು ಹಾಳುಮಾಡುವುದು, ಬಲಿ ಕೊಡುವುದರ ಹಿನ್ನೆಲೆಯಲ್ಲಿ ರಾಜ-ಮಹಾರಾಜರಂತೂ ಯಾಗಕ್ಕಾಗಿಯೇ ಲೆಕ್ಕವಿಲ್ಲದಷ್ಟು ಖರ್ಚು ಮಾಡುತ್ತಿದ್ದರು. ಇದರಿಂದ ಕೆಲವೇ ಕೆಲವು ಜನರಿಗೆ ಲಾಭವಾಗುತ್ತಿತ್ತು. ಇದನ್ನು ಕಂಡ ಶರಣರು ಇದು ಅಸಮಾನತೆಯ ಮಾನದಂಡವಾಗಿದ್ದರಿಂದ ಇದರಿಂದ ಸಮಸಮಾಜವನ್ನು ಕಟ್ಟಲು ಸಾಧ್ಯವಿಲ್ಲ ಎಂದು ಒತ್ತಿ ಹೇಳುತ್ತಿದ್ದರು. ಆದರೆ ಕೆಲವು ಪಟ್ಟಭದ್ರ ಹಿತಾಸಕ್ತಿಗಳು ಅದಕ್ಕಾಗಿಯೇ ರಾಜರಿಗೆ ಪ್ರೋತ್ಸಾಹಿಸುತ್ತಿದ್ದರು. ಈ ಲೂಟಿಕೋರತನವನ್ನು ಕಂಡು ಸಿದ್ದರಾಮೇಶ್ವರರು 'ಎಮ್ಮ ವಚನದ ನೂರೆಂಟರಧ್ಯಯನಕ್ಕೆ ಶತರುದ್ರೀ(ಯಾಗ)ಸಮ ಬಾರದಯ್ಯಾ' ಎಂದು ಹೇಳುವುದರ ಮುಖಾಂತರ ಯಾಗ ಮಾಡುವುದು ವ್ಯರ್ಥ ಎಂದು ಹೇಳುವುದರೊಂದಿಗೆ ಜನರ ಮನೋದೌರ್ಬಲ್ಯವನ್ನು ಜಾಲಾಡಿದ್ದಾರೆ. ಯಾಗ ಮಾಡುವುದರಿಂದಲೇ ಎಲ್ಲ ಸುಖವು ಸಿಗುವುದಾದರೆ ಯಾರು ದುಡಿಯಲಿಕ್ಕೆ ಹೋಗುತ್ತಿರಲಿಲ್ಲ. ಎಲ್ಲರೂ ಮನೆಯಲ್ಲಿಯೇ ಕುಳಿತು ಯಾಗ ಮಾಡುತ್ತಾ ಸುಖದಿಂದ ಇರುತ್ತಿದ್ದರು. ಯಾರಿಗೂ ಬೆವರು ಸುರಿಸುವ ಪ್ರಶ್ನೆಯೇ ಬರುತ್ತಿರಲಿಲ್ಲ. ಇದರ ಮರ್ಮ ಅರಿತ ಸಿದ್ಧರಾಮೇಶ್ವರನು ಇಂತಹ ಪೊಳ್ಳು ಆಶ್ವಾಸನೆಯ ಕ್ರಿಯೆಗಳಿಗಿಂತ ನಮ್ಮ ಕಾಯಕ ಬೋಧನೆಯ ವಚನಗಳೇ ಶ್ರೇಷ್ಠ ಎನ್ನುವ ಆತ್ಮ ಪ್ರಶಂಸೆ ಅವರ ನುಡಿಯಲ್ಲಿದೆ.

ಮನುಸ್ಮೃತಿಯಲ್ಲಿ ತಿಳಿಸಿರುವಂತೆ ಗಾಯತ್ರಿ ಮಂತ್ರವು ಸಕಲ ವೇದಗಳ ಸಾರವಾಗಿದ್ದು, ಪರಬ್ರಹ್ಮ ಸ್ವರೂಪಮಯವಾಗಿದೆ. ಓಂಕಾರ ಪೂರ್ವಕ ಸಂಧ್ಯಾಕಾಲದಲ್ಲಿ ವೇದಾಮೃತವಾದ ಈ ಮಂತ್ರವನ್ನು ಜಪಿಸುವುದರಿಂದ ವೇದಪಠನ ಪುಣ್ಯ ಲಭಿಸಿ ಮಹಾಪಾತಕಗಳು ನಾಶವಾಗುತ್ತವೆ ಎಂಬುದು ಭಕ್ತರ ನಂಬಿಕೆಯಾಗಿದೆ. ಗಾಯತ್ರಿ ಮಂತ್ರ ಉಚ್ಚರಿಸುತ್ತಾ ತುಪ್ಪದ ಹೋಮ ಮಾಡಿದರೆ ಆಯುಸ್ಸು ಹೆಚ್ಚಾಗುವುದು, ದಧಿ(ಮೊಸರು)ಯಿಂದ ಹೋಮ ಮಾಡಿದರೆ ಮಕ್ಕಳಾಗುತ್ತಾರೆ, ಸಮಿತ್ತಿ(ಅತ್ತಿ, ಅರಳಿ, ಮೊದಲಾದ ಮರಗಳ ಸಣ್ಣ ಕಡ್ಡಿ-ಪುರಳೆ)ನಿಂದ ಹೋಮ ಮಾಡಿದರೆ ಗ್ರಹಪೀಡೆ ತೊಲಗುತ್ತದೆ, ಇದು ಸರ್ವಾಭೀಷ್ಟ ಸಿದ್ಧಿಕರ ಮಂತ್ರವಾಗಿದ್ದು, ಇದನ್ನು ಜಪಿಸಿದವರಿಗೆ ಯಾವುದೇ ರೀತಿಯ ಭಯ ಇರುವದಿಲ್ಲ. ಹಾಗಾಗಿ ಶ್ರಾವಣ ಮಾಸದ ಕೃಷ್ಣಪಕ್ಷದ ಪಾಡ್ಯದ ದಿವಸ ದೋಷ ಪ್ರಾಯಶ್ಚಿತ್ತಕ್ಕಾಗಿ ಒಂದು ಸಾವಿರ ಸಂಖ್ಯೆಯಲ್ಲಿ ಗಾಯತ್ರಿ ಜಪದೊಂದಿಗೆ ಹೋಮ ಮಾಡುವ ಪದ್ಧತಿ ಆ ತತ್ವ ನಂಬಿದ ಭಕ್ತರಲ್ಲಿದೆ. ಇಂತಹ ಆರ್ಥಿಕ ವೆಚ್ಚದಾಯಕ ಕ್ರಿಯೆ ಸರ್ವರಿಗೂ ಸಾಧ್ಯವಾಗಲಾರದು ಮತ್ತು ಇದರಲ್ಲಿ ಅಂಥಹ ಪುಣ್ಯ ಲಭ್ಯವಾಗುತ್ತದೆ ಎಂಬುದು ಇವರಲ್ಲಿ ಪ್ರಶ್ನಾರ್ಥಕ ಚರ್ಚೆಯಾಗಿದೆ. ಇದನ್ನು ವಾಸ್ತವ ನಿಟ್ಟಿನಲ್ಲಿ ನಾವುಗಳೂ ಸಹ ಆಲೋಚಿಸಿದರೆ 'ಮಂತ್ರಕ್ಕೆ ಮಾವಿನ ಕಾಯಿ ಉದರಲಾರದು' ಎಂಬುದು ಸ್ಪಷ್ಟವಾಗುತ್ತದೆ. ಮೇಲಾಗಿ ಇದು ಕೊಲೆ-ಸುಲಿಗೆ, ಮೋಸ-ವಂಚನೆ ಮುಂತಾದ ಅಮಾನವೀಯ ಕಾರ್ಯಕ್ಕೆ ಪ್ರಚೋದನೆ ಒದಗಿಸುತ್ತದೆ. ಹೇಗೆಂದರೆ ಅಮಾನವೀಯ ಕಾರ್ಯಗಳನ್ನು ಮಾಡಿ ಅವುಗಳಿಂದ ಮುಕ್ತಿ ಪಡೆಯಲು ಇಂತಹ ಮಂತ್ರ-ಯಾಗಗಳನ್ನು ಮಾಡಿದರಾಯಿತು ಎಂಬ ಭಾವನೆ ಭಕ್ತರಲ್ಲಿ ಮೂಡುತ್ತದೆ. ಇದನ್ನು ಕಂಡ ವಚನಕಾರರು ಇದಕ್ಕೆ ಪರ್ಯಾಯವಾಗಿ ಕಾಯಾ-ವಾಚಾ-ಮನಸ್ಸುಗಳನ್ನು ಶುದ್ಧದತ್ತ ತೆಗೆದುಕೊಂಡು ಹೋಗುವ ಮತ್ತು ಮಾನವೀಯ ಮಮಕಾರವನ್ನು ಪ್ರತಿಪಾದಿಸುವಂತಹ ವಚನಗಳನ್ನು ಪಾರಾಯಣ ಮಾಡಿದರೆ ಮನಸ್ಸು ಸ್ವಚ್ಛವಾಗಿ ಮಾನವ ಲೋಕೋದ್ಧಾರಕ್ಕೆ ನೀವು ಸದೃಢರಾಗುತ್ತಿರಿ ಎಂಬ ಬಲವಾದ ನಂಬಿಕೆ ಅವರಲ್ಲಿದೆ. ಈ ರೀತಿ ಕಾರ್ಯ ನಿರತನಾದರೆ ಪಾಪದ ಪ್ರಾಯಶ್ಚಿತ ಎನ್ನುವ ಪರಿಕಲ್ಪನೆಯೇ ಬರುವದಿಲ್ಲ. ಇದೇ ನಿಜವಾದ ಭಕ್ತಿ. ಇದೇ ದೇವರಿಗೆ ಇಷ್ಟವಾಗುವ ಪರಿ. ಹಾಗಾಗಿಯೇ ಅವರು 'ಎಮ್ಮ ವಚನದ ಸಾಸಿರ ಪಾರಾಯಣಕ್ಕೆ ಗಾಯತ್ರಿ ಲಕ್ಷ ಜಪ ಸಮ ಬಾರದಯ್ಯಾ' ಎಂದಿರುವರು. ಇದನ್ನು ನಂಬುವುದು ಬಿಟ್ಟಿದ್ದು ಅವರವರ ತಾರ್ಕಿಕ ಆಲೋಚನೆಗೆ ಬಿಟ್ಟಿದ್ದು. ಸಿದ್ದರಾಮೇಶ್ವರರಂತೂ ಕಡಾಖಂಡಿತವಾಗಿಯೂ ತಮ್ಮ ನಿಲುವನ್ನು ಸ್ಪಷ್ಟಪಡಿಸಿದ್ದು ಅರಿತುಕೊಳ್ಳುವ ಪರಿಯನ್ನು ಓದುಗರ ಮೇಲೆ ಬಿಟ್ಟಿದ್ದಾರೆ.

■■

# ಕೂಡಲಸಂಗಮ ಹಾಗು ಶರಣರು

● ಎಂ. ಎಂ. ಗೊರಚಿಕ್ಕನ್ನವರ

ಶರಣಸಂಸ್ಕೃತಿ ಹಾಗೂ ಬಸವಾದಿ ಶಿವಶರಣರಿಗೆ ಸಂಬಂಧಿಸಿದಂತೆ ಕೂಡಲಸಂಗಮ ಮಹತ್ವದ ಸ್ಥಾನವನ್ನು ಹೊಂದಿದ ತಾಣವಾಗಿದೆ. ಬಸವಣ್ಣನವರು ಈ ಪವಿತ್ರ ನೆಲದಲ್ಲಿ ವಿದ್ಯಾರ್ಜನೆಗೈದು ಜೀವನದ ಕೊನೆಯ ದಿನಗಳನ್ನು ಇಲ್ಲಿಯೇ ಕಳೆದಿದ್ದಾರೆ. ಅವರ ವಚನಾಂಕಿತವೂ ಕೂಡಲಸಂಗಮದೇವಾ ಆಗಿದೆ. ಈ ನೆಲೆಯಲ್ಲಿ ನಾಡಿನ ಹಲವಾರು ವಿದ್ವಾಂಸರು ಸಂಶೋಧಕರು ಕೂಡಲಸಂಗಮ ಹಾಗೂ ಶರಣರನ್ನು ಕುರಿತಂತೆ ಹಲವಾರು ಆಯಾಮದ ಸಂಶೋಧನೆ ಕೈಗೊಂಡು ಕೃತಿ ಹಾಗೂ ಲೇಖನಗಳನ್ನು ಪ್ರಕಟಿಸಿರುವದನ್ನು ಕಾಣುತ್ತೇವೆ. ಸಾಹಿತ್ಯಿಕ ಹಾಗೂ ಪ್ರಾಕ್ತನ ಆಧಾರದ ಉಲ್ಲೇಖಗಳನ್ನು ಹಾಗೂ ಕ್ಷೇತ್ರಕಾರ್ಯ, ಸಂದರ್ಶನಗಳ ನೆಲೆಯಲ್ಲಿ ಹಲವಾರು ಆಯಾಮದ ಅಂಶಗಳನ್ನು ಪರಿಚಯಿಸಿರುವದನ್ನು ಕಾಣುತ್ತೇವೆ. ಪ್ರಸ್ತುತ ಈ ಲೇಖನದಲ್ಲಿ ಅಂತಹ ಎಲ್ಲಾ ಅಧ್ಯಯನ ಸಂಗತಿಗಳತ್ತ ಗಮನಹರಿಸಿ; ಇವುಗಳಾಚೆಗೆ ಕೂಡಲಸಂಗಮದ ಜನತೆ ಇಲ್ಲಿನ ಪರಂಪರೆ, ಶರಣರನ್ನು ಕಂಡ ಬಗೆ ಇಂದಿಗೂ ಶರಣರ ಬದುಕಿನ ಸಂಗತಿಗಳನ್ನು ಸ್ಮರಿಸುತ್ತಾ ಬಂದಿರುವ ಅಂಶಗಳ ಹಾಗೂ ವಿಶೇಷವಾಗಿ ಶರಣರನ್ನು ಸಾಂಪ್ರದಾಯಿಕ, ಧಾರ್ಮಿಕ, ಸಾಂಸ್ಕೃತಿಕ ನೆಲೆಯಲ್ಲಿ ಕಾಣುತ್ತಾ ಬಂದಿರುವ ಪದ್ಧತಿ, ಆಚರಣೆಗಳ ಬಗ್ಗೆ ತಿಳಿಯುವದು ಅವಶ್ಯಕ ಎನಿಸುತ್ತದೆ. ಪ್ರಸ್ತುತ ಲೇಖನದಲ್ಲಿ ಬಸವಣ್ಣನವರು, ಅಲ್ಲಮಪ್ರಭು ಹಾಗೂ ನೀಲಮ್ಮನವರ ಬಗ್ಗೆ ಕೂಡಲಸಂಗಮ ಭಾಗದ ಜನತೆ ಹೊಂದಿರುವ ಭಕ್ತಿ ಭಾವದ ನೆಲೆಯ ಆಚರಣೆಗಳನ್ನು ತಿಳಿಸುವ ಪ್ರಯತ್ನ ಮಾಡಲಾಗುವದು ಜಾಗತಿಕಮಟ್ಟದಲ್ಲಿ ಶರಣರನ್ನು, ವಚನಸಾಹಿತ್ಯವನ್ನು, ವೈಜ್ಞಾನಿಕ ವೈಚಾರಿಕ ನೆಲೆಯಲ್ಲಿ ಕಾಣುತ್ತಿರುವ ಈ ಸಂದರ್ಭದಲ್ಲಿ ಕೂಡಲಸಂಗಮದ ಭಕ್ತ ಸಮೂಹ ಪರಂಪರೆಯ ನಂಬಿಕೆ, ಉತ್ಸವ, ಆಚರಣೆಗಳ ಮೂಲಕ ಶರಣರನ್ನು ಕಾಣುವ ಬಗೆ ಹೊಸ ಚಿಂತನೆಗಳಿಗೆ, ವಿಶ್ಲೇಷಣೆಗಳಿಗೆ ಅವಕಾಶ ಮಾಡಿಕೊಡುತ್ತದೆ. ಇಲ್ಲಿ ಉತ್ಪ್ರೇಕ್ಷೆ, ಭಾವಾತಿರೇಕ, ಸಂಪ್ರದಾಯ ನಿಷ್ಠತೆ, ನಂಬಿಕೆ, ಆಚರಣೆಗಳಲ್ಲಿನ ವೈವಿಧ್ಯತೆ, ಶ್ರದ್ಧೆ ಮುಂತಾದ ಅಂಶಗಳು ಕಂಡುಬಂದರು; ಇಲ್ಲಿ ಶರಣ ಸಮೂಹವನ್ನು ಗೌರವಿಸುವ, ಪೂಜಿಸುವ, ಆರಾಧಿಸುವ, ಸಂಗತಿಗಳು ಪ್ರಧಾನವಾಗಿ ಕಂಡುಬರುತ್ತವೆ. ಈ ಬಗೆಯ ಸಾಂಪ್ರದಾಯಿಕ ಸಂಗತಿಗಳು ನಾಡಿನ ವಿವಿಧ ಶರಣ ಪರಂಪರೆಯ ಭೂಮಿಗಳಲ್ಲಿ ಕಂಡುಬರುತ್ತಿವೆ ಎಂಬುದನ್ನು ಅವಲೋಕಿಸಲಾಗಿ ಅಂತಹ ಆಚರಣೆಗಳನ್ನು ಯಥಾವತ್ತಾಗಿ ದಾಖಲಿಸುವ, ಸಂಗ್ರಹಿಸುವ ಅವುಗಳ ಹಿನ್ನಲೆಯನ್ನು ಅರಿಯುವ ಪ್ರಯತ್ನ ನಡೆಯಲಿ ಎಂಬ ಸದಾಶಯ ಹಾಗೂ ಕೂಡಲಸಂಗಮದ ಜನತೆ ಪರಂಪರಾಗತವಾಗಿ ಶರಣರನ್ನು ಕಾಣುತ್ತಾ ಬಂದಿರುವ ಬಗ್ಗೆ ತಿಳಿಯುವ ಪ್ರಯತ್ನ ಈ ಲೇಖನದಲ್ಲಿ ಮಾಡಲಾಗುವದು.

ಕೂಡಲಸಂಗಮ ಹಾಗೂ ಶರಣರ ಬಗ್ಗೆ ಅರಿಯುವಾಗ ಇಲ್ಲಿನ ಕೆಲವೊಂದಿಷ್ಟು ಜಾತ್ರೆ, ಉತ್ಸವಗಳು, ದೈನಂದಿನ ಆಚರಣೆಗಳು, ಸಾಂಪ್ರದಾಯಿಕ ಹಾಡುಗಳು, ಜನಪದ ಹೇಳಿಕೆ, ದಂತಕಥೆಗಳು, ಐತಿಹ್ಯಗಳು, ಸಂದರ್ಶನದ ವಿವರಗಳು ವಿಭಿನ್ನ ಆಯಾಮದ ಸಂಗತಿಗಳನ್ನು ತಿಳಿಯಲು ಸಹಾಯಕ ಎನಿಸುತ್ತವೆ.

ವ್ಯಕ್ತಿಗಳನ್ನು ದೇವರಂತೆ ಪೂಜಿಸುವದು ಭಾರತದಂತಹ ಸಂಪ್ರದಾಯನಿಷ್ಠ ರಾಷ್ಟ್ರದಲ್ಲಿ ವಿಶೇಷವೆಂಬಂತೆ ಕಾಣುವುದು. ವ್ಯಕ್ತಿ ದೈವದಸ್ಥಾನಕ್ಕೆ ಏರಲು ಇಂತಹದೇ ನಿರ್ದಿಷ್ಟ ಕಾರಣ, ಮಾನದಂಡಗಳು ಇಲ್ಲವಾದರು ಆಯಾ ಕಾಲಘಟ್ಟದಲ್ಲಿ ಅವರು ತೋರಿದ ಸಾಧನೆ, ಸಿದ್ಧಿ, ಕಾರ್ಯವೈಖರಿ, ಸಮಾಜ ಸೇವಾಕಾರ್ಯ, ಅಚ್ಚರಿ ಎನಿಸುವ ಕಾರ್ಯಗಳು, ಮಾನವ ಮಾತ್ರರಿಂದ ಮಾಡಲು ಅಸಾಧ್ಯ ಎನಿಸುವ ಕಾರ್ಯಗಳನ್ನು ಸಾಧ್ಯವೆನಿಸಿದ ಘಟನಾವಳಿಗಳು ಹೀಗೆ ಹಲವು ಸಂಗತಿಗಳು ವ್ಯಕ್ತಿಗಳನ್ನು ದೈವತ್ವದ ಸ್ಥಾನಕ್ಕೆ ಏರಿಸಿ ಪೂಜ್ಯನೀಯ ಸ್ಥಾನ ಪಡೆಯುವಂತೆ ಮಾಡುತ್ತವೆ. ಈ ವಿಧಾನವಾಗಿ ಬಸವಾದಿ

ಸಂಶೋಧನಾ ವಿದ್ಯಾರ್ಥಿ ಕನ್ನಡ ವಿಶ್ವವಿದ್ಯಾಲಯ ಹಂಪಿ, ಮೊ: ೯೪೮೨೮೯೬೦೮

ಶಿವಶರಣರು ತೋರಿದ ಸಾಧನೆ, ಮಾನವ ಪ್ರೇಮದ ಕಾರ್ಯಗಳು, ಜಗತ್ತಿನ ಒಳಿತನ್ನು ಬಯಸಿದ ಸಂಗತಿಗಳು, ಸಮಾನತೆ ತರುವ ಸಲುವಾಗಿ ಕೈಗೊಂಡ ಕ್ರಮಗಳು ಚರಿತ್ರೆಯಲ್ಲಿ ಶಾಶ್ವತ ಸ್ಥಾನ ಪಡೆಯುವಂತಹುಗಳಾಗಿವೆ. ಅಂತೆಯೇ ಜನಪದರು, ಮುಗ್ಧಭಕ್ತರು, ಸಂಪ್ರದಾಯನಿಷ್ಠರು ಈ ಶರಣರನ್ನು ದೇವರಂತೆ ಪೂಜಿಸುವ ಬಗೆ ಇಂದಿಗೂ ಕಂಡು ಬರುತ್ತಲಿದ್ದು, ಇದಕ್ಕೆ ಕೂಡಲಸಂಗಮವು ಹೊರತಾಗಿಲ್ಲ. ಇಲ್ಲಿ ಮೌಖಿಕ ಪರಂಪರೆ, ಕೃಷಿಸಂಸ್ಕೃತಿಯ ಪ್ರಭಾವ, ಜಾತ್ರೆ, ಉತ್ಸವ, ಹಬ್ಬ-ಹರಿದಿನಗಳಲ್ಲಿ ಈ ಶರಣಸಂಕುಲಕ್ಕೆ ಗೌರವ, ಭಕ್ತಿಯನ್ನು ಸಲ್ಲಿಸಬೇಕೆಂಬ ಹಂಬಲ ಹಾಗೂ ನಮ್ಮ ಹಿರಿಯ ತಲೆಮಾರು ರೂಢಿಸಿಕೊಂಡು ಬಂದ ಆಚರಣೆಗಳನ್ನು ಯಥಾವತ್ತಾಗಿ ಚಾಚುತಪ್ಪದೇ ಮುಂದುವರೆಸಿಕೊಂಡು ಬರಬೇಕೆಂಬಲ್ಲಿ ತೋರುವ ಶ್ರದ್ಧೆ, ಭಕ್ತಿ, ಭಾವಗಳು ಇಂದಿಗೂ ಕೂಡಲಸಂಗಮದ ಜನರೊಟ್ಟಿಗೆ ಈ ಭಾಗದ ಸುತ್ತಮುತ್ತಲಿನ ಜನತೆ ಶರಣರನ್ನು ದೈವಾರಾಧನೆಯ ಬಹುಮುಖ್ಯ ಭಾಗವೆಂದು ಭಾವಿಸಿರುವದಕ್ಕೆ ಕಾರಣ ಎನಿಸಿವೆ.

ವಿಶ್ವವಿದ್ಯಾಲಯದ ಹಂತದಲ್ಲಿ ಶರಣರನ್ನು ವೈಚಾರಿಕ, ವೈಜ್ಞಾನಿಕ ನೆಲೆಯಲ್ಲಿ ಕಾಣುವ, ಸಮೂಹ ಸೇರಿದಂತೆ ಇತರೆ ಕೆಲವರಿಗೆ ಈ ಬಗೆಯ ಸಂಪ್ರದಾಯದ ನೆಲೆಯ ಸಂಗತಿಗಳು ಕೆಲವೊಮ್ಮೆ ಒಪ್ಪಿತವಲ್ಲವೆಂಬಂತೆ ತೋರಬಹುದು. ಆದರೆ ಭಕ್ತಸಮೂಹ, ಜನಸಾಮಾನ್ಯರಿಗೆ ಶರಣರನ್ನು ಅವರ ಕಾರ್ಯಗಳನ್ನು ವಿಭಿನ್ನ ಆಯಾಮಗಳಲ್ಲಿ ಅಧ್ಯಯನ ಮಾಡುವದಕ್ಕೆ ಯಾವುದೇ ರೀತಿಯ ಪ್ರತಿರೋಧ ಇಲ್ಲವೆನ್ನಬಹುದು. ಇದ್ದರೂ ಅದು ವ್ಯಕ್ತಿಗತ ನೆಲೆಯಲ್ಲಿ ಕಾಣುತ್ತವೆ ಹೊರತು ಇಡಿ ಸಮೂಹ ಇಂತಹ ಕಾರ್ಯಗಳಿಗೆ ಒಪ್ಪಿತವಲ್ಲದ ಧೋರಣೆ ತೋರಿಲ್ಲ ಎನ್ನಬಹುದು. ಈ ವಿಧಾನವಾಗಿ ಕೂಡಲಸಂಗಮ ಶರಣರನ್ನು ಸಂಪ್ರದಾಯ ಹಾಗೂ ಪರಂಪರೆಯ ನೆಲೆಯಲ್ಲಿ ಕಾಣುತ್ತಾ ಬಂದಿರುವ ಸಂಗತಿಗಳ ಬಗ್ಗೆ ತಿಳಿಯುವದು ಮಹತ್ವಪೂರ್ಣ ಎನಿಸುತ್ತದೆ.

**ಬಸವಣ್ಣನವರು ಹಾಗೂ ಕೂಡಲಸಂಗಮ:**

ಮಹಾಮಹಿಮ ಸಂಗನಬಸವಣ್ಣನು ಪಾದವಿಟ್ಟಿದು ಅವಿಮುಕ್ತ ಕ್ಷೇತ್ರ ಎಂದು ಜಗನ್ಮಾತೆ ಅಕ್ಕಮಹಾದೇವಿ ಹೇಳಿದ ಪ್ರಕಾರ ಕೂಡಲಸಂಗಮ ಬಸವಣ್ಣನವರ ವಿದ್ಯಾಭೂಮಿ, ತಪೋಸ್ಥಾನ, ಐಕ್ಯಕ್ಷೇತ್ರವೆನಿಸಿದ ಈ ತಾಣ ಇಂದು ಧರ್ಮಕ್ಷೇತ್ರವೆನಿಸಿದೆ.

ಕೂಡಲಸಂಗಮದ ಸಾಂಪ್ರದಾಯಿಕ ಪರಂಪರೆ ಬಸವಣ್ಣನವರನ್ನು ಕಾಣುತ್ತಾ ಬಂದಿರುವ ಬಗೆ ನಿಜಕ್ಕೂ ವಿಶೇಷವೆನಿಸುವಂತಹದ್ದು. ವೈಚಾರಿಕಪುರುಷ, ಕ್ರಾಂತಿಯೋಗಿ ಬಸವಣ್ಣ, ಸಮಾಜ ಸುಧಾರಕ ಬಸವಣ್ಣ, ಅಗ್ರಗಣ್ಯ ವಚನಕಾರ ಬಸವಣ್ಣ ಹೀಗೆ ಹಲವಾರು ಬಗೆಯಲ್ಲಿ ಬಸವಣ್ಣನವರನ್ನು ಜಗತ್ತು ಕಾಣುತ್ತಿರುವಂತೆ ಸ್ಥಳೀಯ ಜನತೆ ಬಸವಣ್ಣನವರನ್ನು ದೈವಿಪುರುಷ, ಶಿವನವಾಹನ ನಂದಿಯ ಅವತಾರ, ಸಂಗಮನಾಥನ ಪರಮಭಕ್ತ, ಸಂಗಮಕ್ಷೇತ್ರದ ಪುಣ್ಯನೆಲದಲ್ಲಿ ಕುಳಿತು ವಚನಗಳನ್ನು ರಚಿಸಿದ ಶ್ರೇಷ್ಠ ವಚನಕಾರ, ಸ್ವತಃ ಸಂಗಮನಾಥನೇ ಅಪ್ಪಿಕೊಂಡು ಐಕ್ಯಮಾಡಿಕೊಂಡ ಬಸವಣ್ಣ, ಹೀಗೆ ಹಲವು ಬಗೆಯಲ್ಲಿ ಬಸವಣ್ಣನವರನ್ನು ಕಾಣುತ್ತಾ ಬಂದಿರುವದನ್ನು ಗಮನಿಸುತ್ತೇವೆ. ಇಂದಿಗೂ ಈ ಭಾಗದ ಅದೆಷ್ಟೋ ಜನರಿಗೆ ಬಸವಣ್ಣ ಎಂದಾಗ ನೆನಪು ಬರುವದು ಎರಡೇ ಚಿತ್ರಾವಳಿ ಒಂದು ಶಿವನವಾಹನ ನಂದಿಯ ಬಸವಣ್ಣ, ಸಂಗಮೇಶ್ವರ ಉದ್ಭವಲಿಂಗದಿಂದ ಸಂಗಮನಾಥನು ಬಸವಣ್ಣನನ್ನು ಅಪ್ಪಿಕೊಂಡು ಐಕ್ಯಮಾಡಿಕೊಂಡ ಚಿತ್ರ. ಪ್ರಸ್ತುತ ಸಂದರ್ಭದಲ್ಲಿ ಕೃಷಿ ಸಂಸ್ಕೃತಿಯ ಆಚರಣೆಗಳು, ಆಧುನಿಕತೆಯ ಪ್ರಭಾವದಿಂದ ಕ್ಷೀಣಿಸುತ್ತಿವೆ. ಆದರೆ ಒಂದು ಕಾಲಕ್ಕೆ ಈ ಭಾಗದ ರೈತ ಸಮುದಾಯ ಬಸವಣ್ಣ ಹಾಗೂ ಶಿವಶರಣರನ್ನು ತಮ್ಮ ಹಂತಿಪದ, ಇತರೆ ಜನಪದ ಹಾಡುಗಳಲ್ಲಿ ಬಸವಣ್ಣನನ್ನು ವರ್ಣಿಸಿದ ಬಗೆ ನಿಜಕ್ಕೂ ಸ್ಮರಣೀಯ! ಈ ಬಗೆಯಲ್ಲಿ ಕೂಡಲಸಂಗಮದ ಕೂಡ್ಲಯ್ಯ ಕೋಟೂರ ಎಂಬ ಹಿರಿಯ ಕವಿಯೊಬ್ಬರು ತಮ್ಮ ಪದಗಳಲ್ಲಿ ಬಸವಣ್ಣನ ಬಗ್ಗೆ ಈ ರೀತಿ ಹೇಳಿದ್ದಾರೆ.

**ಧರೆಯೊಳು ಮರೆಯುವ ಸಂಗಮದೂರಾ।**
**ಕೃಷ್ಣೆ ಮಲಪ್ರಭ ಹರಿಯುವದು ಜೋರಾ।**
**ಬಸವಣ್ಣನವರ ಐಕ್ಯದ ಸಾರಾ। ವರವನೂ।**
**ಬೇಡುತ**......................................................

ಐದಾರು ದಶಕಗಳ ಹಿಂದೆಯೇ ಮೂಡಿಬಂದ ಈ ಪದದಲ್ಲಿ ಬಸವಣ್ಣನವರ ಐಕ್ಯದ ಸಾರ, ಭಕ್ತ ವೃಂದದಲ್ಲಿ ಶಾಶ್ವತ ಸ್ಥಾನ ಪಡೆದಿದೆ ಎಂದು ತಿಳಿಯಲು ಪೂರಕ ಸಾಹಿತ್ಯವೆನಿಸುತ್ತದೆ. ಈ ಬಗೆಯ ಅನೇಕ ಪದಗಳು ಇಂದಿಗೂ ಈ ಭಾಗದಲ್ಲಿ ಅನೇಕ ಸಂದರ್ಭಗಳಲ್ಲಿ ಕೇಳಿಬರುತ್ತವೆ.

ಮಗುವಿನ ನಾಮಕರಣಕ್ಕೆ ಸಂಬಧಿಸಿದಂತೆ ಗಮನಿಸುವಾಗ ಬಾಲ ಬಸವಣ್ಣನ ಜೀವನದ ಘಟನಾವಳಿಗಳನ್ನು ಸ್ಮರಿಸುವ ಜೋಗುಳ ಪದಗಳು

ಕೇಳಿಬರುತ್ತವೆ. ಬಸವಣ್ಣನವರ ಬಗ್ಗೆ ಇರಲಾದ ಭಕ್ತಿ ಶ್ರದ್ದೆ, ಗೌರವಾಭಿಮಾನದ ಕಾರಣಕ್ಕೆ ಬಸವಣ್ಣನ ಹೆಸರು ಪ್ರತಿನಿಧಿಸುವಂತೆ ಮಕ್ಕಳಿಗೆ ನಾಮಕರಣ ಮಾಡುವುದನ್ನು, ಈ ಭಾಗದ ಜನಸಮುದಾಯದ ಮನೆತನಗಳಿಗೆ ಸಂಬಂಧಿಸಿದ ಹೆಳವರನ್ನು ಸಂಪರ್ಕಿಸಿದಾಗ ಅಲ್ಲಿ ಬಸಪ್ಪ, ಬಸವರಾಜ, ಬಸಯ್ಯಾ, ಬಸನಗೌಡ, ಬಸವಲಿಂಗಪ್ಪ, ಸಂಗನಬಸಪ್ಪ, ಶರಣಬಸವ, ಶಿವಬಸಪ್ಪ, ಕರಿಬಸಪ್ಪ, ಚನ್ನಬಸಪ್ಪ, ಮುದಿಬಸಪ್ಪ, ಹೊಳೆಬಸಪ್ಪ ಎಂಬ ಹೆಸರುಗಳು ಹಲವಾರು ತಲೆಮಾರುಗಳಿಂದ ಪುನರಾವರ್ತನೆಯಾಗುತ್ತಾ ಬಂದಿರುವದನ್ನು ಕಾಣುತ್ತೇವೆ. ಬಸವಣ್ಣ ಸಂಗಮನಾಥನಲ್ಲಿ ಕೂಡಿ ಐಕ್ಯವಾದ ಸಂಗತಿಯನ್ನು ಪೂಜ್ಯನೀಯ ಭಾವದಿಂದ ಗೌರವಿಸುತ್ತಾ ಬಂದ ಕಾರಣಕ್ಕೆ ಕೆಲವು ಹೆಸರುಗಳು ಕೂಡ್ಲಯ್ಯಾ, ಕೂಡ್ಲೆಪ್ಪ, ಕೂಡ್ಲೇಶ, ಸಂಗನಬಸಯ್ಯಾ, ಸಂಗನಬಸಪ್ಪ ಎಂಬ ಹೆಸರುಗಳು ಪ್ರಚಲಿತದಲ್ಲಿ ಇಂದಿಗೂ ಇರುವದನ್ನು ಗಮನಿಸುತ್ತೇವೆ. ಅಂತೆಯೇ ಇಂದು ನಾವು ಬಸವಣ್ಣನವರ ಐಕ್ಯಮಂಟಪವೆಂದು ಕರೆಯುವ ಸ್ಥಳಕ್ಕೆ ಈ ಭಾಗದ ಹಿರಿಯರು ಕೂಡಲಮುಕ್ಕಿ, ಕೂಡಲಮುಕ್ತಿ ಎಂದು ಕರೆಯುತ್ತಾ ಬಂದಿರುವದನ್ನು ಕಾಣುತ್ತೇವೆ. ಇಂದಿಗೂ ಈ ಭಾಗದ ಎಂಭತ್ತರ ಆಸುಪಾಸಿನ ವಯೋವೃದ್ಧರನ್ನು ಕೂಡಲಸಂಗಮ ಈ ಹಿಂದೆ ಹೇಗಿತ್ತು ಎಂದು ಕೇಳಿದಾಗ ಅವರು ವರ್ಣಿಸುವ ಸ್ಥಳಗಳಲ್ಲಿ ಕಾಲುಹೊಳೆಯಲ್ಲಿ ಇರಲಾಗಿದ್ದ ಕೂಡಲಮುಕ್ಕಿ ಹಿಂದಿನ ಐಕ್ಯಮಂಟಪದ ವಿವರಗಳು ರೋಚಕ ಎನಿಸುತ್ತವೆ. ಇದರ ಸಮೀಪದಲ್ಲಿ ಇರಲಾಗಿದ್ದ ಗವಿಗುಂಡಪ್ಪನ ಗುಡಿ ಎಂಬ ಸ್ಥಳದ ವಿವರ ಆದರೆ ಅದು ಇಂದು ಕಾಣಸಿಗುವದಿಲ್ಲ ಇದು ಶ್ರೀಶೈಲಕ್ಕೆ ಹೋಗುವ ದಾರಿಯೆಂದು ಶರಣರು ಈ ತಾಣದಲ್ಲಿ ತಪಸ್ಸನ್ನಾಚಾರಿಸುತ್ತಿದ್ದರೆಂಬ ಹೇಳಿಕೆಗಳು ಕೇಳಿಬರುತ್ತವೆ. ಈ ಗವಿಗುಂಡಪ್ಪನ ಗುಡಿ ಬಗ್ಗೆ ಮತ್ತಷ್ಟು ಆಳವಾದ ಸಂಶೋಧನೆ ಶರಣಪರಂಪರೆಯ ಅಧ್ಯಯನದ ದೃಷ್ಟಿಯಿಂದ ಅವಶ್ಯಕ ಎನಿಸುತ್ತದೆ.

ಕೂಡಲಸಂಗಮೇಶ್ವರ ದೇವಾಲಯದ ಆವರಣದಲ್ಲಿನ ಐಕ್ಯಮಂಟಪ, ಬಸವಣ್ಣನವರ ವಿದ್ಯಾಗುರುಗಳ ಗದ್ದುಗೆ, ಆರಾಧ್ಯ ದೈವ ಸಂಗಮನಾಥನ ಉದ್ಭವಲಿಂಗ ಸೇರಿದಂತೆ ಕೆಲವೊಂದಿಷ್ಟು ಸ್ಥಳಗಳು ಬಸವಣ್ಣನವರಿಗೆ ಸಂಬಂಧಪಟ್ಟಂತಹ ಪ್ರಮುಖ ಸ್ಥಳಗಳಾಗಿ ಕಾಣುತ್ತವೆ. ಶತಮಾನಗಳಷ್ಟು ಹಳೆಯದೆನಿಸುವ ಸ್ಮಾರಕ ಕಟ್ಟಡಗಳು, ಶಿಲಾಮೂರ್ತಿಗಳು, ಬಸವಣ್ಣನವರ ಕಾಲದ ಪರಿಕರಗಳು ಈ ಭಾಗದಲ್ಲಿ ಕಾಣಸಿಗುವದು ವಿರಳ; ಇಲ್ಲಿ ಸಂಶೋಧನೆ, ಅಧ್ಯಯನದ ಅಭಾವ, ನಿರಾಸಕ್ತಿ ಎದ್ದು ತೋರುತ್ತವೆ. ಪ್ರಸ್ತುತ ಕಾಲಘಟ್ಟದಲ್ಲಿ ಬಸವಣ್ಣನವರನ್ನು ಸ್ಮರಿಸುವ, ಗೌರವಿಸುವ ಕಾರ್ಯ ಈ ಕ್ಷೇತ್ರದಲ್ಲಿ ನಡೆಯುತ್ತಾ ಬಂದಿರುವ ಕಾರಣಕ್ಕೆ ಹಲವಾರು ಅಭಿನಂದನಾರ್ಹ ಕಾರ್ಯಗಳು ಇಂದು ಕಂಡುಬರುತ್ತಿದ್ದು, ಕೂಡಲಸಂಗಮ ಅಭಿವೃದ್ಧಿ ಮಂಡಳಿ ಹಾಗೂ ಕೂಡಲಸಂಗಮದ ಬಸವಧರ್ಮಪೀಠ, ಈ ಭಾಗದ ಸಾರಂಗಮಠ ಹಾಗೂ ಪಂಚಮಸಾಲಿ ಶ್ರೀಪೀಠದ ಮಠಾಧೀಶರು ಸೇರಿದಂತೆ ಹಲವಾರು ಶೈಕ್ಷಣಿಕ, ಸಾಂಸ್ಕೃತಿಕ ಸಂಸ್ಥೆಗಳ ಪಾತ್ರ ನಿಜಕ್ಕೂ ಪ್ರಶಂಸನೀಯ! ಈ ಬಗೆಯಲ್ಲಿ ನವೀಕರಣಗೊಂಡಂತಹ ಐಕ್ಯಮಂಟಪ, ಬಸವ ಅಂತರಾಷ್ಟ್ರೀಯ ಕೇಂದ್ರ, ಶರಣಸಾಹಿತ್ಯಭಂಡಾರ, ದಾಸೋಹ ಭವನ, ಬಸವೇಶ್ವರ ವೃತ್ತ, ಶರಣ ವಸ್ತು ಸಂಗ್ರಹಾಲಯ, ಶರಣ ಕಲಾಲೋಕ, ಧ್ಯಾನಮಂಟಪ, ಶರಣರ ಹೆಸರಿನ ವಸತಿಗೃಹಗಳು ಹೀಗೆ ಹಲವಾರು ಗಮನಾರ್ಹ ಕಟ್ಟಡಗಳನ್ನು, ಕಾರ್ಯಗಳನ್ನು ಹೆಸರಿಸಬಹುದಾಗಿದೆ.

ಬಸವಣ್ಣನವರನ್ನು ಪೂಜ್ಯನೀಯ ಭಾವದಿಂದ ಕಾಣುತ್ತಾ ಬಂದಿರುವ ಈ ಭಾಗದ ಜನತೆ ಅದೇರೀತಿ ಶಿವನವಾಹನ ನಂದಿ ಬಸವಣ್ಣ ಬಗ್ಗೆ ಶ್ರದ್ಧೆ ಭಕ್ತಿ ಹೊಂದಿರುವ ಕಾರಣಕ್ಕೆ ಕೂಡಲಸಂಗಮದ ದೇವಾಲಯ ಆವರಣದಲ್ಲಿ ಶ್ರೀ ಸಂಗಮೇಶ್ವರನ ಉದ್ಭವಲಿಂಗದ ಮುಂಭಾಗದಲ್ಲಿ ಎರಡು ವೃಷಭನಂದಿಗಳ ಕಪ್ಪುಶಿಲೆಯ ವಿಗ್ರಹಗಳನ್ನು ಕಾಣುತ್ತೇವೆ. ಈ ಜೋಡಿ ನಂದಿ ವಿಗ್ರಹಗಳ ಬಗ್ಗೆ ಕೆಲವು ನಂಬಿಕೆ ಐತಿಹ್ಯಗಳನ್ನು ಕಾಣುತ್ತೇವೆ. ಚೆನ್ನಬಸವಣ್ಣ, ಬಸವಣ್ಣನವರ ಕುರುಹುಗಳಾಗಿವೆ ಎಂದು ಕೆಲವರ ವಾದ, ಇನ್ನೂ ಕೆಲವರು ಒಂದು ನಂದಿ ಶಿವನಮುಂದೆ ಇರುವ ಸಾಂಪ್ರದಾಯಿಕ ನಂದಿಯಾದರೆ ಇನ್ನೊಂದು ಬಸವಣ್ಣನವರು ಐಕ್ಯವಾಗಿರುವ ಕುರುಹು ಆಗಿ ಮತ್ತೊಂದು ನಂದಿವಿಗ್ರಹ ಪ್ರತಿಷ್ಠಾಪಿಸಿದ್ದಾರೆ ಎನ್ನುವದು ಕೆಲವರ ವಾದ. ಅದೇರೀತಿ ಕೂಡಲಸಂಗಮದಿಂದ ಸಮೀಪ ದೂರದಲ್ಲಿ ಇರುವ ಕಮದತ್ತ ಎಂಬ ಗ್ರಾಮದಲ್ಲಿ ಜೋಡಿನಂದಿ ವಿಗ್ರಹಗಳ ದೇವಾಲಯ ಇರುವದನ್ನು ಕಾಣುತ್ತೇವೆ. ಅದೇರೀತಿ ದೇವಾಲಯದ ಹೊರಭಾಗಕ್ಕೆ ಕೃಷ್ಣಾನದಿ ಭಾಗಕ್ಕೆ ಗರ್ಭಗುಡಿಗೆ ಹೊಂದಿದ ಹೊರಭಾಗದಲ್ಲಿ ನಂದಿವಿಗ್ರಹ ಕಾಣುತ್ತೇವೆ ಹಾಗೂ ದೇವಾಲಯದ ಆವರಣದಲ್ಲಿನ ಶ್ರೀ ಸಿದ್ದೇಶ್ವರ ಗುಡಿಯಲ್ಲಿ ನಂದಿವಿಗ್ರಹ ಇರಲಾಗಿದೆ. ನದಿಗಳು ಸಂಗಮವಾಗುವ ಸ್ಥಳದಲ್ಲಿ

ಬಹಳ ಹಿಂದಿನಿಂದಲೂ ಪೂಜಿಸುತ್ತಾ ಬಂದಿರುವ ಘನಮಂಟೇಶ್ವರ ಗದ್ದುಗೆ ಈ ಸ್ಥಳದಲ್ಲಿ ನಂದಿ ವಿಗ್ರಹ ಇರಲಾಗಿದೆ. ರಥದ ಮನೆಯ ಮುಂಭಾಗದಲ್ಲಿ ತೇರಿನಬಸವಣ್ಣ ಗ್ರಾಮದೊಳಗೆ ನೋಡುವದಾದರೆ ಸಾಲಿಬಸವಣ್ಣ, ಬ್ಯಾಳಿಬಸವಣ್ಣ, ಗ್ರಾಮದೇವತೆ ಆವರಣದ ಬಸವಣ್ಣ, ವಿರಕ್ತಮಠದಲ್ಲಿನ ಬಸವಣ್ಣ, ಊರಿನ ಹಿರೇಮಠದ ಆವರಣದಲ್ಲಿನ ಬಸವಣ್ಣ, ದೇವರಿಗೆ ಬಿಡಲಾದ ಗೂಳಿಯ ಸ್ಮರಣಾರ್ಥವಾಗಿ ಕಟ್ಟಿದ ಗೂಳಿಬಸವಣ್ಣ ದೇವಾಲಯ, ರುದ್ರಪಾದ ಎಂಬಲ್ಲಿನ ಬಸವಣ್ಣ, ಬಾಗಲಕೋಟೆಯಿಂದ ಪಾದಯಾತ್ರೆ ಮೂಲಕ ಬರುವ ರಥೋತ್ಸವದ ಬಂಗಾರದ ಕಳಸ ಕೂರಲು ಇರುವ ಮಾರ್ಗ ಮಧ್ಯದ ಗುರುವಿನಕಟ್ಟೆ ಬಸವಣ್ಣ, ಚವಡಕಮಲದಿನ್ನಿ ಕಳಸದ ಕಟ್ಟೆಯಲ್ಲಿನ ಬಸವಣ್ಣ ಹೀಗೆ ಅನೇಕ ಬಗೆಯ ನಂದಿಬಸವಣ್ಣನ ದೇವಾಲಯ ವಿಗ್ರಹಗಳನ್ನು ಇವುಗಳಿಗೆ ಸಂಬಂಧಿಸಿದ ಸಾಕಷ್ಟು ಸಾಂಪ್ರದಾಯಿಕ ಆಚರಣೆ ಪದ್ಧತಿಗಳನ್ನು ಗಮನಿಸುತ್ತೇವೆ. ಜಾತ್ರಾ ಸಂದರ್ಭದಲ್ಲಿ ಬಸವಪಟ ಕಟ್ಟುವ ಸಂಪ್ರದಾಯ ಇರಲಾಗಿದ್ದು ಇಲ್ಲಿ ಕೂಡಾ ಶಿವನವಾಹನ ನಂದಿಯ ಚಿತ್ತಾರ ಕಾಣುತ್ತೇವೆ.

ಬಸವಜಯಂತಿಯ ಹಿನ್ನಲೆಯಲ್ಲಿ ಗಮನಿಸುವುದಾದರೆ ಸಂಪ್ರದಾಯನಿಷ್ಠರೆನಿಸಿದ ಈ ಭಾಗದ ಜನತೆ ಅಂದು ದೇವಾಲಯದ ಆವರಣದಲ್ಲಿ ಎತ್ತುಗಳನ್ನು ತಂದು ಪೂಜೆ ಸಲ್ಲಿಸುತ್ತಾರೆ. ಬಸವಣ್ಣನವರ ಭಾವಚಿತ್ರವನ್ನು ಸಿಂಗರಿಸಿದ ಕಿರುಬಂಡಿಯಲ್ಲಿ ಇರಿಸಿ ಗ್ರಾಮದ ತುಂಬೆಲ್ಲಾ ವಾದ್ಯ ಮೇಳಗಳೊಂದಿಗೆ ಮೆರವಣಿಗೆ ಹೊರಡುತ್ತಾರೆ. ಗ್ರಾಮದ ಜನತೆ ಈ ಮೆರವಣಿಗೆಯಲ್ಲಿ ಪಾಲ್ಗೊಂಡು ಹಣ್ಣು–ಕಾಯಿ, ಧೂಪ–ದೀಪಗಳನ್ನು ಸಮರ್ಪಿಸಿ ಭಕ್ತಿ ಮೆರೆಯುತ್ತಾರೆ. ಅಂದು ದೇವಸ್ಥಾನದಲ್ಲಿ ಸಂಗಮೇಶ್ವರನ ದರ್ಶನದೊಟ್ಟಿಗೆ ಐಕ್ಯಮಂಟಪದ ದರ್ಶನ ಮಾಡುತ್ತಾರೆ. ಇದು ಹಿಂದಿನಿಂದಲೂ ನಡೆದುಕೊಂಡು ಬಂದ ಸಂಪ್ರದಾಯ ಎನಿಸಿದೆ. ಇತ್ತೀಚಿನ ದಶಕಗಳಲ್ಲಿನ ಬೆಳವಣಿಗೆ ಎಂಬಂತೆ ಬಸವಜಯಂತಿ ಪ್ರಯುಕ್ತ ವಿಶೇಷ ಉಪನ್ಯಾಸ ಸಂಗೀತ ಕಾರ್ಯಕ್ರಮ ಮತ್ತು ನವಜಾತಶಿಶುವಿಗೆ ಬಸವ ಎಂಬ ನಾಮಕರಣ, ಸಿಹಿ ಪದಾರ್ಥ ವಿತರಣೆ, ಅನ್ನಪ್ರಸಾದದ ವ್ಯವಸ್ಥೆ ಇತ್ಯಾದಿ ಕಾರ್ಯಕ್ರಮಗಳು ನಡೆಯುತ್ತಾ ಬರಲಾಗಿದ್ದು ಬಸವಣ್ಣನವರ ಐಕ್ಯ ಭೂಮಿಯಲ್ಲಿ ಬಸವಜಯಂತಿ ಆಚರಣೆ, ಮತ್ತಷ್ಟು ವಿಜೃಂಭಣೆಯ ಅರ್ಥಪೂರ್ಣ ಕಾರ್ಯಕ್ರಮಗಳನ್ನು ರೂಢಿಸಿಕೊಳ್ಳಬೇಕಿದೆ.

**ನೀಲಾಂಬಿಕೆ ಹಾಗೂ ಕೂಡಲಸಂಗಮ :**

ಲಿಂಗನಿಷ್ಠೆ, ಕಾಯಕನಿಷ್ಠೆ, ಜಂಗಮಪ್ರೇಮಿ ಎನಿಸಿದ್ದ ಬಸವಣ್ಣನವರ ಧರ್ಮಪತ್ನಿ ನೀಲಾಂಬಿಕೆ ಶರಣಪರಂಪರೆಯಲ್ಲಿ ಮೇರುಸ್ಥಾನವನ್ನು ಹೊಂದಿದವಳಾಗಿದ್ದಾಳೆ. ಬಸವಣ್ಣನವರು ಕೂಡಲಸಂಗಮದಲ್ಲಿ ಐಕ್ಯರಾದಂತೆ ಲಿಂಗನಿಷ್ಠೆ ನೀಲಮ್ಮನವರು ಕೂಡಲಸಂಗಮದಿಂದ ಕಣ್ಣಳತೆಯ ದೂರದಲ್ಲಿ ಇರುವ ತಂಗಡಗಿಯಲ್ಲಿ ಐಕ್ಯಳಾಗಿದ್ದಾಳೆ. ಈ ಕಾರಣದಿಂದಲೇ ನೀಲಾಂಬಿಕೆಯು ಈ ಭಾಗದಲ್ಲಿ ತಂಗಡಗಿ ನೀಲಮ್ಮಳೆಂದು ಹೆಸರುವಾಸಿಯಾಗಿದ್ದಾಳೆ.

ಶಿವಶರಣೆ ನೀಲಾಂಬಿಕೆಯು ಜೀವನದಲ್ಲಿ ಕೂಡಲಸಂಗಮ ಪುಣ್ಯನೆಲದ ಪಾತ್ರ ಮಹತ್ವದ್ದಾಗಿ ಕಂಡುಬರುತ್ತದೆ. "ಅಲ್ಲಿದ್ದ ಸಂಗಯ್ಯ ಇಲ್ಲಿಲ್ಲವೆ"? ಎನ್ನುತ್ತಾ ನೀಲಾಂಬಿಕೆ ಲಿಂಗೈಕ್ಯಳಾಗುತ್ತಾಳೆ. ಇಲ್ಲಿ ಈ ಶರಣೆಯ ಮೇರು ವ್ಯಕ್ತಿತ್ವ, ವೈಚಾರಿಕ ನಿಲುವು ಕಂಡುಬರುತ್ತದೆ. ಕೂಡಲಸಂಗಮದ ಹಿನ್ನಲೆಯನ್ನು ಗಮನಿಸುವುದಾದರೆ ತಂಗಡಗಿ ನೀಲಮ್ಮಳಿಗೆ ಶ್ರೀ ಸಂಗಮೇಶ್ವರ ಜಾತ್ರಾ ರಥೋತ್ಸವದ ಸಂದರ್ಭದಲ್ಲಿ ಪ್ರಾಧಾನ್ಯತೆಯ ಸ್ಥಾನವನ್ನು ನೀಡುತ್ತಾ ಬಂದಿರುವುದನ್ನು ಕಾಣುತ್ತೇವೆ. ಪಲ್ಲಕ್ಕಿ ಮೆರವಣಿಗೆ ಮೂಲಕ ನೀಲಮ್ಮಳನ್ನು ತಂಗಡಗಿಗೆ ಕಳುಹಿಸಿ ಬರುವ ಜಾತ್ರಾಮಹೋತ್ಸವದ ಆಚರಣೆ ಈ ಭಾಗದ ಧಾರ್ಮಿಕ ಸಂಸ್ಕೃತಿಯ ವಿಶೇಷ ಆಚರಣೆ ಎಂಬಂತೆ ಕಂಡುಬರುತ್ತದೆ.

**ಸಾಕಾಯ್ತೋ ಕಲ್ಯಾಣ ಬಿಟ್ಟು ಹೋಗುವೆ ನಾನಾ।**
**ಶರಣರೆಲ್ಲರು ಕೂಡಿ। ಶೋಕವನು ಮಾಡಿ।**
**ಹೋಗುವ ಬಸವಣ್ಣನ ಪಾದ ಹಿಡಿದಾಳನ್ನಾ।**
**ನೆನೆಯುತ ನೀಲಮ್ಮಾ ಹತ್ಯಾಳ ಬೆನ್ನಾ।**
**ಐಕ್ಯಾ ಹೊಂದ್ಯಾನೆಂದು ಸುದ್ದಿ ತಂಗಡಗಿ ಮುಂದು।**
**ಅಲ್ಲಿದ್ದ ಬಸವಣ್ಣಾ ಇಲ್ಲಿಲ್ಲವೆಂದು।**
**ಧರೆಯೊಳು ಮೆರೆಯುವ ಸಂಗಮ ಎಂಬುವ।**
**ಕೂಡಲರೇಶನೊಳು ಕೂಡಿದವಾ।**
**ಜಗದೊಳು ಬಸವನ ಕೀರ್ತಿಯು ಬೆಳಗುತಾ।**
**ತಂಗಡಗಿ ಮುಂದ ನೀಲಮ್ಮ ಐಕ್ಯಾವ ಹೊಂದುತ॥**

ಹೀಗೆ ನೀಲಮ್ಮಳನ್ನು ಸ್ಮರಿಸುವ ಹಲವಾರು ಭಕ್ತಿಯ ಪದ, ಭಜನಾಪದಗಳು ಕೂಡಲಸಂಗಮದಲ್ಲಿ ಇಂದಿಗೂ ಕಾಣಸಿಗುತ್ತವೆ. ಈಮೇಲಿನ ಪದದಲ್ಲಿ ಅಲ್ಲಿದ್ದ ಬಸವಣ್ಣ ಇಲ್ಲಿಲ್ಲವೆಂದು ಹೇಳಿರುವುದು ವಿಶೇಷವೆಂಬಂತೆ ಕಾಣುತ್ತೇವೆ. ಇತರ ಎಲ್ಲ ಕೃತಿಗಳಲ್ಲಿ ಅಲ್ಲಿದ್ದ ಸಂಗಯ್ಯ ಇಲ್ಲಿಲ್ಲವೇ ಎಂದು

ಹೇಳಿರುವದನ್ನು ಇಲ್ಲಿ ಉಲ್ಲೇಖಿಸಬಹುದಾಗಿದೆ. ಈ ಬಗೆಯ ಅನೇಕ ಪದಗಳನ್ನು ಕೂಡಲಸಂಗಮದ ಕೂಡ್ಲಯ್ಯ ಕೋಟೂರ ಎಂಬುವವರು ಐದಾರು ದಶಕಗಳ ಹಿಂದೆಯೇ ರಚಿಸಿ ಪ್ರಕಟಿಸಿರುವುದನ್ನು ಕಾಣುತ್ತೇವೆ.

ಕೂಡಲಸಂಗಮದಲ್ಲಿ ನೀಲಮ್ಮಳಿಗೆ ಸಂಬಂಧಿಸಿದಂತೆ ಪ್ರತ್ಯೇಕ ದೇವಾಲಯ, ಪೂಜಾಸ್ಥಾನಗಳು, ಇರಲಾಗಿರುವದಿಲ್ಲ. ಶ್ರೀ ಸಂಗಮೇಶ್ವರ ದೇವಾಲಯದ ಗರ್ಭಗುಡಿ ಹೊರಭಾಗದ, ರಂಗಮಂಟಪದ ಸಮೀಪದ ಎಡ–ಬಲಬಾಗದಲ್ಲಿ ವಿಶ್ವಗುರು ಬಸವಣ್ಣನವರ ಹಾಗೂ ಶಿವಶರಣೆ ನೀಲಾಂಬಿಕೆಯವರ ಎರಡು ಕಪ್ಪು ಶಿಲೆಯ ಮೂರ್ತಿಗಳನ್ನು ಕಾಣುತ್ತೇವೆ. ಈ ಮೂರ್ತಿಗಳೂ ಇತ್ತೀಚಿನ ಕೆಲವು ದಶಕಗಳ ಹಿಂದೆ ಭಕ್ತರೊಬ್ಬರು ನೀಡಿದ ಕಾಣಿಕೆ ಎಂದು ಶಿಲಾಮೂರ್ತಿಗಳ ಕೆಳಭಾಗದಲ್ಲಿ ಇದರ ವಿವರಣೆ ಇರುವುದನ್ನು ಕಾಣುತ್ತೇವೆ.

ಕೂಡಲಸಂಗಮದ ಭಕ್ತ ಪರಂಪರೆಯಲ್ಲಿ ಈ ಭಾಗದ ಜನತೆ ಹೇಳುವ ಪ್ರಕಾರ ನೀಲಮ್ಮಳು ಶ್ರೀ ಕೂಡಲಸಂಗಮನಾಥನ ತಂಗಿ ಎಂದು, ಪ್ರತಿ ವರ್ಷ ಜಾತ್ರಾ ರಥೋತ್ಸವಕ್ಕೆ ನೀಲಮ್ಮಳು ಆಗಮಿಸುವ ಹಾಗೂ ರಥೋತ್ಸವದ ತರುವಾಯ ಕಳುಹಿಸಿಬರುವ ಸಾಂಪ್ರದಾಯ ಬಹಳ ಹಿಂದಿನಿಂದಲೂ ನಡೆಕೊಂಡು ಬಂದಿದೆ ಎನ್ನುತ್ತಾರೆ. ಮಕರ ಸಂಕ್ರಮಣದ ದಿನದಂದು ಶ್ರೀ ಸಂಗಮನಾಥ ದೇವಾಲಯದಲ್ಲಿನ ಸಂಗಮೇಶ್ವರ ದೇವರ ಪಲ್ಲಕ್ಕಿಯನ್ನು ಗ್ರಾಮದ ರುದ್ರಪಾದ ಎಂಬ ಸ್ಥಳಕ್ಕೆ ಒಯ್ದು ಪೂಜಾ ಕೈಂಕರ್ಯ ನೆರವೇರಿಸಿ, ವಾದ್ಯಮೇಳ ಗಂಟಾನಾದದೊಂದಿಗೆ ದೇವಾಲಯಕ್ಕೆ ತರುವ ವಾಡಿಕೆ ಹಿಂದಿನಿಂದಲೂ ಬರಲಾಗಿದೆ. ಅಣ್ಣನ ಜಾತ್ರೆ, ಸ್ಥಳೀಯರ ಪ್ರಕಾರ ಜಾತ್ರೆ ಎಂದರೆ ಶ್ರೀ ಸಂಗಮೇಶ್ವರನ ಕಲ್ಯಾಣಮಹೋತ್ಸವದ ಕಾರ್ಯಕ್ಕೆ ತಂಗಿ ನೀಲಮ್ಮ ಬರುವಾಗ ಈ ಪಲ್ಲಕ್ಕಿ ಹಗುರವಾಗಿರುತ್ತದೆ. ಕಾರಣ ಸಂತೋಷ, ಸಡಗರದಿಂದ ಅಣ್ಣನ ಸ್ಥಾನಕ್ಕೆ ಆಗಮಿಸುವದು ಹಾಗೂ ಜಾತ್ರೆ ಮುಗಿದ ಏಳು ದಿನಕ್ಕೆ ಪಲ್ಲಕ್ಕಿ ತಂಗಡಗಿಗೆ ಹೋಗುವಾಗ ಅಣ್ಣನನ್ನು ಬಿಟ್ಟು ಹೋಗಬೇಕೆಂಬ ಕಾರಣಕ್ಕೆ ಪಲ್ಲಕ್ಕಿ ತುಂಬಾ ಭಾರವಾಗಿರುತ್ತದೆ ಎಂಬ ಪ್ರತೀತಿ ಈ ಭಾಗದ ಜನರಲ್ಲಿ ಕಂಡುಬರುತ್ತದೆ.

**ತಂಗಿಯ ಕರೆಯಲು ಹೋಗಿ**
**ತಿಂಗಳು ತಡಿದಾನ।**
**ತಂಗಡಗಿಯ ಮುಂದೆ ನೆನದಾನ।**
**ಅಣ್ಣ ಕಪ್ಪಡಿಯ ಸಂಗಣ್ಣ।**

ಈ ಬಗೆಯ ಜನಪದ ಹಾಡೊಂದನ್ನು ಗಮನಿಸುವಾಗ ಈ ಪರಂಪರೆಗೆ ಶತಮಾನಗಳಷ್ಟು ಹಳೆಯದಾದ ಐತಿಹ್ಯ ಇರುವದನ್ನು ಕಾಣುತ್ತೇವೆ. ಅಂತೆಯೇ ತಂಗಡಗಿ ಸಮೀಪದಲ್ಲಿ ಗಡ್ಡಿಸಂಗಮೇಶ್ವರನ ದೇವಾಲಯದ ಕಟ್ಟೆ ಇರಲಾಗಿದ್ದು, ಪ್ರತಿವರ್ಷ ಅಲ್ಲಿಗೆ ಶ್ರೀ ಸಂಗಮೇಶ್ವರ ಪಲ್ಲಕ್ಕಿ ಹೋಗಿಬರುವ ಸಂಪ್ರದಾಯ ಇದೆ. ಈ ತಾಣದಲ್ಲಿ ಅಪರೂಪದ ಪಕ್ಷಿಸಂಕುಲ, ಸಸ್ಯವರ್ಗ ಇರಲಾಗಿದ್ದು, ಈ ನೈಸರ್ಗಿಕ ನಡುಗಡ್ಡೆಯು ಪ್ರವಾಸಿ ತಾಣವಾಗಬೇಕೆಂಬ ಬೇಡಿಕೆ ಇದೆ. ಸಂಬಂಧಪಟ್ಟವರು ಈ ಬಗ್ಗೆ ಕಾಳಜಿ ವಹಿಸಬೇಕಾಗಿದೆ.

ಚೈತ್ರಮಾಸದಲ್ಲಿ ಸಂಗಮನಾಥನ ಜಾತ್ರೆ ಜರುಗಿದ ಏಳನೇ ದಿನಕ್ಕೆ ಕೂಡಲಸಂಗಮದಿಂದ ಭವ್ಯ ಮೆರೆವಣಿಗೆ ಮಂಗಲವಾದ್ಯ ಮೇಳಗಳೊಂದಿಗೆ ಪಲ್ಲಕ್ಕಿಯನ್ನು ತಂಗಡಗಿಗೆ ತೆಗೆದುಕೊಂಡು ಹೋಗಿ ಬರುವ ಸಂಪ್ರದಾಯ ಇರಲಾಗಿದ್ದು ಅಂದು ಕೂಡಲಸಂಗಮ ಹಾಗೂ ತಂಗಡಗಿಯಲ್ಲಿ ಜಾತ್ರೆಯ ವಾತಾವರಣ ಏರ್ಪಟ್ಟಿರುತ್ತದೆ. ಈ ಕುರಿತಾದ ವಿವರಣೆಯನ್ನು ಲೇಖಕರಾದ ಶ್ರೀ ರಮೇಶ ಲಿಂಗದಳ್ಳಿಯವರ, ಲಿಂಗನಿಷ್ಠೆ ನೀಲಾಂಬಿಕೆ ಕೃತಿಯಲ್ಲಿ ಚಿತ್ರ ಸಹಿತ ವಿವರಣೆಯನ್ನು ನೀಡಿರುವದನ್ನು ಕಾಣುತ್ತೇವೆ. ಅದೇರೀತಿ ಕಡುಬಿನ ಕಾಳಗ ಎಂಬ ಜಾತ್ರಾ ಸಂಪ್ರದಾಯ ಇರಲಾಗಿದ್ದು ಈ ಕುರಿತು ವಿವರಣೆಯನ್ನು ೧೯೪೦ರಲ್ಲಿ ಪ್ರಕಟಗೊಂಡ ಎಂ.ಎಂ ನಂದಿಕೋಲಮಠರವರ ಶ್ರೀ ಸಂಗಮೇಶ್ವರ ಮಹಾತ್ಮೆಯು ಎಂಬ ಕೃತಿ ಇಂತಹ ಜಾತ್ರಾ ಸಂಪ್ರದಾಯಗಳನ್ನು ತಿಳಿಸುತ್ತಾ ಇಲ್ಲಿ ನೀಲಮ್ಮಳನ್ನು ನೀಲಗಂಗಾ ಎಂದು ಉಲ್ಲೇಖಿಸಿರುವುದನ್ನು ಕಾಣಬಹುದಾಗಿದೆ. ಇದೇ ಕೃತಿಯಲ್ಲಿ ಉಲ್ಲೇಖಿಸಿದಂತೆ ಕ್ಷೇತ್ರದಲ್ಲಿನ ಸಂಗಮೇಶ್ವರ ದೇವಾಲಯದ ದೈನಂದಿನ ಪೂಜಾ ಕಾರ್ಯ ಹಾಗೂ ಜಾತ್ರಾ ಮಹೋತ್ಸವದ ಕಾರ್ಯಗಳು ಯಶಸ್ವಿಯಾಗಿ ಮುಂದುವರೆದುಕೊಂಡು ಬರುವಂತಾಗಲು ಅಂದಿನ ಸರ್ಕಾರದವರು ಇಲ್ಲಿನ ಅರ್ಚಕ ಮನೆತನದವರಿಗೆ ವಾದ್ಯ ಮೇಳದವರಿಗೆ ಹೂಗಾರರಿಗೆ ಇತರೆ ಸೇವಾ ಮನೆತನದವರಿಗೆ ವಂಶಪರಂಪರಾಗತವಾಗಿ ಉಪಭೋಗಿಸಲು ಇನಾಮ ಜಮೀನು (ಮಾನೆ)ಗಳನ್ನು ಹಾಕಿರುವದನ್ನು ಕಾಣುತ್ತೇವೆ. ಶ್ರೀ ಸಂಗಮೇಶ್ವರ ದೇವಸ್ಥಾನದ ವಹಿವಾಟುದಾರರ ಇನಾಮ ಜಮೀನುಗಳು ಇಂದು ಭಾಗಶಃ ಮುಳುಗಡೆಯಾಗಿದ್ದು ಕೆಲವು ಮಾತ್ರ ಉಳಿದುಕೊಂಡಿರುವದನ್ನು ಕಾಣುತ್ತೇವೆ.

ಶ್ರೀ ಸಂಗಮೇಶ್ವರ ಪಲ್ಲಕ್ಕಿಯಲ್ಲಿ ಶಿವನ ಬೆಳ್ಳಿ ಮೂರ್ತಿಯನ್ನು ಕಾಣುತ್ತೇವೆ. ಶ್ರೀ ಸಂಗಮೇಶ್ವರನ ಉತ್ಸವ,

ಹಾಗೂ ನೀಲಮ್ಮಳ ಉತ್ಸವಕ್ಕೆ ಇದೇ ಪಲ್ಲಕ್ಕಿ ಬಳಕೆಯಾಗುತ್ತಾ ಬಂದಿದ್ದರೂ. ನೀಲಮ್ಮಳನ್ನು ಕರೆತರುವಾಗ, ಹಾಗೂ ಕಳುಹಿಸಿ ಬರುವಾಗ ಈ ಪಲ್ಲಕ್ಕಿಯಲ್ಲಿ ನೀಲಮ್ಮಳ ಮೂರ್ತಿ ಹಾಗೂ ಭಾವಚಿತ್ರ ಇಡುವ ಪರಂಪರೆ ಕಂಡು ಬರುವುದಿಲ್ಲ. ಆದಾಗ್ಯೂ ನೀಲಮ್ಮಳ ಹಿನ್ನಲೆಯಲ್ಲಿ ಕಂಡು ಬರುವ ಸಾಂಪ್ರದಾಯಿಕ ನಂಬಿಕೆ, ಆಚರಣೆ, ಉತ್ಸವಗಳಿಗೆ ಸಂಬಂಧಿಸಿದಂತೆ ಈ ಪಲ್ಲಕ್ಕಿಯ ಪಾತ್ರ ಪ್ರಧಾನವಾಗಿ ಕಂಡುಬರುತ್ತದೆ.

ಈ ಜಾತ್ರಾ ಉತ್ಸವದ ಪ್ರಮುಖ ಸಂಪ್ರದಾಯದ ಕುರಿತು ಮತ್ತಷ್ಟು ವಿವರಣೆಗಳನ್ನು ನಮ್ಮ ಕೃತಿಯಾದ ಶ್ರೀ ಕೂಡಲಸಂಗಮೇಶ್ವರನ ಬಂಗಾರದ ಕಳಸ ಲೇಖಕರು ಎ.ಎಂ.ಗೊರಚಿಕ್ಕನವರ ೨೦೧೨ರ ಈ ಕೃತಿಯಲ್ಲಿನ ಪಲ್ಲಕ್ಕಿ ಉತ್ಸವದೊಂದಿಗೆ ನೀಲಮ್ಮಳನ್ನು ಕಳುಹಿಸಿ ಬರುವ ಸಂಪ್ರದಾಯ ಈ ಭಾಗದಲ್ಲಿ ಸವಿವರ ಕೊಡಲಾಗಿದೆ. ನೀಲಮ್ಮಳಿಗೆ ಸಂಬಂಧಿಸಿದಂತೆ ಗಮನಿಸುವಾಗ ಸಮೀಪದ ತಂಗಡಗಿಯಲ್ಲಿ ನೀಲಾಂಬಿಕೆಯವರ ಐಕ್ಯಮಂಟಪ ಕಾಣುತ್ತೇವೆ. ಕೇಸಾಪುರದ ದೇಶಮುಖರು ಹಳೆಯ ದೇವಾಲಯವನ್ನು ಕಟ್ಟಿರುವ ಬಗ್ಗೆ ದಾಖಲೆಗಳು ಕಾಣಸಿಗುತ್ತವೆ. ದೇವಾಲಯದ ಯಾವತ್ತೂ ಪೂಜಾ ಕೈಂಕರ್ಯಗಳು ನಿತ್ಯ ನಡೆಯುವಂತಾಗಲೂ ಪೂಜಾ ಕಾರ್ಯಗಳ ಅರ್ಚಕರಿಗೆ ಮೂವತ್ತಾರು ಎಕರೆ ಜಮೀನು ಉಂಬಳಿಯಾಗಿ ನೀಡಿರುವ ಬಗ್ಗೆ ಸ್ಥಳೀಯರು ಮಾಹಿತಿ ಒದಗಿಸುತ್ತಾರೆ.

ಅಂಗೈಯಲ್ಲಿ ಇಷ್ಟಲಿಂಗ ಹೊಂದಿ ಪೂಜೆಗೆ ಕುಳಿತ ಕಪ್ಪುಶಿಲೆಯ ನೀಲಾಂಬಿಕೆ ವಿಗ್ರಹವನ್ನು ತಂಗಡಗಿಯಲ್ಲಿ ಕಾಣುತ್ತೇವೆ. ಕೂಡಲಸಂಗಮದ ಬಸವಣ್ಣನವರ ಐಕ್ಯಮಂಟಪ ಮಾದರಿಯಲ್ಲಿ, ಗೋಲಾಕಾರದ ಕಾಂಕ್ರೇಟ್‌ಬಾವಿ, ಹತ್ತಿ ಇಳಿಯಲು ಮೆಟ್ಟಿಲುಗಳು, ಸುರಕ್ಷಿತ ಗೋಡೆ, ಭದ್ರವಾದ ಕಾಂಕ್ರೇಟ ಕಂಬಗಳ ಸೇತುವೆ ಇವೆ. ಕೂಡಲಸಂಗಮ ಅಭಿವೃದ್ಧಿ ಮಂಡಳಿ ಇದರ ನಿರ್ವಹಣೆ, ಜವಾಬ್ದಾರಿ ಹೊಂದಿದೆ.

ನೀಲಮ್ಮಳನ್ನು ಸ್ಮರಿಸುವ ಗೌರವಿಸುವ ನೆಲೆಯಲ್ಲಿ ಹಲವಾರು ಜನಪದ ಕಥನಗಳು, ಹಂತಿಪದಗಳಲ್ಲಿನ ತ್ರಿಪದಿಗಳು, ಜೋಗುಳ ಪದ, ಬೀಸುಕಲ್ಲಿನ ಪದ, ಭಜನಾ ಪದಗಳಲ್ಲಿ ನೀಲಮ್ಮಳನ್ನು ಭಕ್ತಿ–ಭಾವದಿಂದ ವರ್ಣಿಸಿರುವದನ್ನು ಕಾಣುತ್ತೇವೆ. ನೀಲಾಂಬಿಕೆಗೆ ಸಂಬಂಧಿಸಿದಂತೆ ಮತ್ತಷ್ಟು ಅಧ್ಯಯನಗಳು ನೀಲಮ್ಮಳ ವಚನ ಸಾಹಿತ್ಯದ ಬಗ್ಗೆ ವಿಚಾರ ಗೋಷ್ಠಿಗಳು ಮೌಲಿಕ ಕೃತಿಗಳು ಹತ್ತು ಹಲವಾರು ಆಯಾಮಗಳ ವಿನೂತನ ಕಾರ್ಯಗಳು ನಡೆಯಬೇಕೆಂಬುದು ಈ ಭಾಗದ ಜನರ ಸದಾಶಯವಾಗಿದೆ.

**ಅಲ್ಲಮಪ್ರಭು ಹಾಗೂ ಕೂಡಲಸಂಗಮ :**

ಬಸವಣ್ಣನವರು ಕೈಗೊಂಡ ಮಹಾಕಾರ್ಯಕ್ಕೆ ದೊಡ್ಡ ಪ್ರೇರಕ ಶಕ್ತಿಯಾಗಿ, ಆಧಾರಸ್ಥಂಭವಾಗಿ ನಿಂತವರು ಅಲ್ಲಮಪ್ರಭು. ಬಸವಣ್ಣನವರ ಒಂದು ವಚನದಲ್ಲಿ ಇಂತಿ ಪಂಚೇಂದ್ರೀಯಗಳಲ್ಲಿ ಬ್ರಹ್ಮಚಾರಿಯಾಗಿ ಕೂಡಲಸಂಗಮ ದೇವರಲ್ಲಿ ಎನ್ನನಾಗುಮಾಡಲಿಕ್ಕೆ ಬ್ರಹ್ಮಚಾರಿಯಾದನು ಪ್ರಭುದೇವರು ಎಂದು ಹೇಳಿದ್ದಾರೆ. ಈ ದಿಸೆಯಲ್ಲಿ ಅಲ್ಲಮಪ್ರಭುಗಳು ಬಸವಣ್ಣನವರನ್ನು ಆಗುಮಾಡಲಿಕ್ಕೆ ಕೂಡಲಸಂಗಮಕ್ಕೆ ಬಂದಿರಬಹುದು ಹಾಗೂ ಬಸವಕಲ್ಯಾಣದಲ್ಲಿನ ನಿರಂತರ ಒಡನಾಟ ಚರ್ಚೆ, ವಚನ ಸಾಹಿತ್ಯ ರಚನೆ, ಸಮಾಜ ಸುಧಾರಣೆ ಕಾರ್ಯಗಳಿಗೆ ಬೆಂಬಲ ನೀಡುವ ನಡೆ, ಅನುಭವ ಮಂಟಪದಲ್ಲಿ ಅವರು ತೋರಿದ ದಾರಿಯನ್ನು ಸ್ಮರಿಸುವಲ್ಲಿ ಹೇಳಿರಬಹುದೆಂದು ಕೂಡಾ ತಿಳಿಯಬಹುದಾಗಿದೆ. ಒಟ್ಟಾರೆ ಬಸವಣ್ಣನವರ ಜೀವನದಲ್ಲಿ ಅಲ್ಲಮಪ್ರಭುಗಳ ಪಾತ್ರ ಹಿರಿದಾದ ಸ್ಥಾನ ಹೊಂದಿದೆ. ಬಸವಣ್ಣನವರ ಬಾಲ್ಯ, ಶಿಕ್ಷಣ ಹಾಗೂ ಜೀವನದ ಅಂತಿಮ ದಿನಗಳನ್ನು ಈ ಪುಣ್ಯಭೂಮಿಯಲ್ಲಿ ಕಳೆದಿರುವದರಿಂದ, ಅಲ್ಲಮರು ಕೂಡಲಸಂಗಮಕ್ಕೆ ಹಲವಾರು ಬಾರಿ ಸಂದರ್ಶನ ಮಾಡಿರಬಹುದೆಂದು ಊಹಿಸಲು ಸಾಧ್ಯವೆನಿಸುತ್ತದೆ. ಇಲ್ಲವೇ ಘನ ವ್ಯಕ್ತಿತ್ವದ ಪರಿಮಳ ನಾಡಿನ ತುಂಬೆಲ್ಲಾ ಹರಡಿರಬೇಕು. ವೌಖಿಕ ಪರಂಪರೆಯ ಜನಪದರು ಅಲ್ಲಮನ ಹಿರಿಮೆಯನ್ನು ಕೂಡಲಸಂಗಮ ಭಾಗದತ್ತಲೂ ಪಸರಿಸಿರಬೇಕು. ಅಂತೆಯೇ ಈ ಭಾಗದಲ್ಲಿ ಅಲ್ಲಮಪ್ರಭುಗಳ ಘನವ್ಯಕ್ತಿತ್ವದ ಬಗ್ಗೆ ಹಲವಾರು ಜನರೂ ಇಂದಿಗೂ ತಮ್ಮ ತಮ್ಮ ಅನುಭವಗಳ ನೆಲೆಯಲ್ಲಿ ಹೇಳುವುದನ್ನು ಕಾಣುತ್ತೇವೆ.

ದೈನಂದಿನ ಹಾಗೂ ವಾರ್ಷಿಕ ವಿಶೇಷ ಆಚರಣೆ ಹಬ್ಬ ಹರಿದಿನ ಇತ್ಯಾದಿ ಸಂದರ್ಭಗಳಲ್ಲಿ ಅಲ್ಲಮಪ್ರಭುಗಳಿಗೆ ಸಂಬಂಧಿಸಿದಂತೆ ವಿಶೇಷ ಸಂಪ್ರಾದಾಯ, ಉತ್ಸವ ಧಾರ್ಮಿಕ ಆಚರಣೆಗಳು ಕಂಡುಬರುವುದಿಲ್ಲ ಶ್ರೀ ಕೂಡಲಸಂಗಮೇಶ್ವರ ದೇವಾಲಯದ ಆವರಣದಲ್ಲಿ ಬಸವಣ್ಣನವರ ಐಕ್ಯಮಂಟಪದ ಆವರಣದಲ್ಲಿ ಹಾಗೂ ಕೂಡಲಸಂಗಮ ಮೂಲ ಗ್ರಾಮದಲ್ಲಿ ಅಲ್ಲಮಪ್ರಭುಗಳಿಗೆ ಸಂಬಂಧಿಸಿದ ಯಾವುದೇ ಮಠ–ಮಂದಿರಗಳು, ಪೂಜಾ ಕಟ್ಟೆಗಳು, ಶಿಲಾಮೂರ್ತಿಗಳು ಇತರೆ ಸ್ಮಾರಕ ಕಟ್ಟಡಗಳು ಕಂಡುಬರುವುದಿಲ್ಲ. ಬಹುತೇಕ ಈ ಭಾಗದ ಸುತ್ತಮುತ್ತಲಿನ ಹಳ್ಳಿಗಳಲ್ಲಿಯೂ ಕೂಡಾ ಕಾಣಸಿಗುವದಿಲ್ಲ ಎನ್ನಬಹುದು.

ಅಲ್ಲಮಪ್ರಭು ಹಾಗೂ ಕೂಡಲಸಂಗಮ ಸಂಬಂಧಿಸಿದಂತೆ ನೋಡುವಾಗ ಶ್ರೀ ಕೂಡಲಸಂಗಮೇಶ್ವರನ ಉದ್ಭವಲಿಂಗದ ಹಿಂದೆ ಗರ್ಭಗುಡಿಯಲ್ಲಿ ಇರಲಾದ ಮೂರ್ತಿಯನ್ನು ಇಲ್ಲಿಯ ಸ್ಥಳೀಯ ಭಕ್ತವೃಂದ ದೇವಾಲಯದ ಪೂಜಾರ್ಚನೆಯ ಅರ್ಚಕರು ಪ್ರಭುದೇವರೆಂದು ಕರೆಯುತ್ತಾ ಬಂದಿದ್ದಾರೆ. ಕೂಡಲಸಂಗಮಕ್ಕೆ ಆಗಮಿಸಿದ ಪ್ರವಾಸಿಗರು ಯಾತ್ರಾರ್ಥಿಗಳು ಭಕ್ತವೃಂದದವರು ದೇವಾಲಯದಲ್ಲಿ ಸಂಗಮೇಶ್ವರ ಲಿಂಗದ ದರ್ಶನ ಮಾಡಿ ಕೂತೂಹಲಕ್ಕೆ ಭಕ್ತಿ-ಭಾವದ ಕಾರಣಕ್ಕೆ ಈ ಲಿಂಗದ ಹಿಂಭಾಗದ ದೇವರು ಯಾವ ದೇವರೆಂದು ಪ್ರಶ್ನಿಸಿದಾಗ ಕೇಳಿಬರುವ ಉತ್ತರ ಪ್ರಭುದೇವರೆಂದು ಇರಲಾಗಿರುತ್ತದೆ. ಈ ಮೂರ್ತಿ ಬಗ್ಗೆ ಹೇಳುವದಾದರೆ ತಾಂಡವ ನೃತ್ಯಭಂಗಿಯಲ್ಲಿ ಇರಲಾಗಿದ್ದು, ಬೆಳ್ಳಿಯ ಮುಖ ಕವಚ ಇರಲಾಗಿದೆ. ಎಡ-ಬಲಗಳಲ್ಲಿ ಬೆಳ್ಳಿ ಬೆತ್ತ ಹಾಗೂ ಗದೆಗಳು, ತ್ರಿಶೂಲ ಇರುವುದನ್ನು ಕಾಣುತ್ತೇವೆ. ಅಲಂಕೃತ ಮೂರ್ತಿಗೆ ಕೊರಳಲ್ಲಿ ರುದ್ರಾಕ್ಷಿ ಹಾಗೂ ಬೆಳ್ಳಿಯ ಗುಂಡಗಡಿಗೆ ಕಾವಿ ವಸ್ತ್ರವನ್ನು ಹಾಕಿರುವದನ್ನು ಕಾಣುತ್ತೇವೆ. ಈ ಮೂರ್ತಿಯ ಅಡಿಪೀಠದಲ್ಲಿ ಎಂಟು ಅಕ್ಷರಗಳುಳ್ಳ ಶಾಸನವೊಂದು ಇರಲಾಗಿದೆ. ಈ ಮೂರ್ತಿ ಹಾಗೂ ಶಾಸನದ ಕುರಿತಾಗಿ ಡಾ. ಶ್ರೀ ಜ.ಚ.ನಿಯವರು ೧೯೭೪ರಲ್ಲಿ ತಮ್ಮ ಕೂಡಲಕ್ಷೇತ್ರ ಎನ್ನುವ ಕೃತಿಯಲ್ಲಿ ವಿಶ್ಲೇಷಣೆಯನ್ನು ಚಿತ್ರ ಸಹಿತ ನೀಡಿದ್ದಾರೆ. ಇದು ಶಿವನ ಒಂದು ಅವತಾರದ ಮೂರ್ತಿ ಶಿವನನ್ನು ಪ್ರಭುವೆಂದು ಕರೆದಿರುವ ಬಗ್ಗೆ ತಿಳಿಸಿದ್ದಾರೆ. ಈ ಮೂರ್ತಿಯು ವೀರಭದ್ರಸ್ವಾಮಿಯನ್ನು ಹೋಲುತ್ತದೆ ಎಂದು ಕೂಡಾ ಕೆಲವರು ಹೇಳುತ್ತಾರೆ. ಸ್ಥಳೀಯವಾಗಿ ಹಲವಾರು ಹಿರಿಯರನ್ನು ಹಾಗೂ ಅರ್ಚಕರನ್ನು ಸಂಪರ್ಕಿಸಿದಾಗ ನಮ್ಮ ಹಿರಿಯರ ಕಾಲದಿಂದಲೂ ಈ ಮೂರ್ತಿಗೆ ಪ್ರಭುದೇವರ ಮೂರ್ತಿ ಎಂದು ಕರೆಯುತ್ತಾ ಬಂದಿದ್ದಾರೆ, ನಾವು ಕೂಡಾ ಅದೇ ಹೆಸರಿನಿಂದಲೇ ಕರೆಯುತ್ತಾ ಬರುತ್ತೇವೆ ಎನ್ನುತ್ತಾರೆ.

ಈ ಮೂರ್ತಿ ಅಲ್ಲಮಪ್ರಭುಗಳ ಮೂರ್ತಿ ಹೌದು ಹಾಗೂ ಅಲ್ಲ ಎಂಬ ಎರಡು ಬಗೆಯ ವಾದಗಳನ್ನು ಗಮನಿಸಿದಾಗ ಮತ್ತಷ್ಟು ಬಗೆಯ ಸಂಶೋಧನಾ ನೆಲೆಯ ಅಧ್ಯಯನ ವಿದ್ವಾಂಸರ ನಿಲವು ಅವಶ್ಯಕವೆನಿಸುತ್ತದೆ. ಈ ಮೂರ್ತಿಗೆ ಪ್ರಭುದೇವರ ಮೂರ್ತಿಯೆಂದು ಕರೆಯುತ್ತಾ ಬರುವದಕ್ಕೆ ಮೌಖಿಕ ಕಾರಣಗಳನ್ನು ಬಿಟ್ಟರೆ ಇತರೆ ಆಧಾರ ಪೂರಕ ಸಂಗತಿಗಳು ಕಾಣಸಿಗುವುದಿಲ್ಲ. ಶರಣ ಪರಂಪರೆಯ ಪ್ರಭುದೇವರ ಹೆಸರು ಈ ಕ್ಷೇತ್ರದಲ್ಲಿ ಈ ಮೂರ್ತಿಯ ಕಾರಣದಿಂದಾಗಿ ಹಿಂದಿನಿಂದಲೂ ಕೇಳಿಬರುತ್ತದೆ.

ಅಲ್ಲಮಪ್ರಭು ವಚನಗಳ ಬಗ್ಗೆ ಅವರ ಜೀವನದ ವಿವಿಧ ಸಂದರ್ಭಗಳ ಬಗ್ಗೆ ಈ ಭಾಗದಲ್ಲಿನ ಹಿರಿಯರು ಅಷ್ಟೊಂದು ಗಂಭೀರ ನೆಲೆಯಲ್ಲಿ ಗಮನಿಸುತ್ತಾ ಬಂದಿರುವುದಿಲ್ಲ ಎನ್ನುವಂತೆ ತೋರುತ್ತದೆ. ಆದರೆ ಇತ್ತೀಚೀನ ದಶಕಗಳಲ್ಲಿನ ಬೆಳವಣಿಗೆ ಅವರ ಬದುಕು-ಬರಹ, ಜೀವನದ ಸಂಗತಿಗಳ ಕುರಿತಾಗಿ ವಿಚಾರ ಗೋಷ್ಠಿಗಳು ನಡೆಯುತ್ತಾ ಬರಲಾಗಿವೆ. ವಿವಿಧ ಸಂದರ್ಭಗಳಲ್ಲಿ ವಿಚಾರಗೋಷ್ಠಿ, ಚರ್ಚಾಗೋಷ್ಠಿಗಳಲ್ಲಿ ಅಲ್ಲಮಪ್ರಭುಗಳ ಬಗ್ಗೆ ಸಾಕಷ್ಟು ಸಂಗತಿಗಳನ್ನು ಚರ್ಚಿಸುತ್ತಾ ಬಂದಿರುವದನ್ನು ಕಾಣುತ್ತೇವೆ. ಅಲ್ಲಮಪ್ರಭುಗಳಿಗೆ ಸಂಬಂಧಿಸಿದಂತೆ ಅಧ್ಯಯನ ಮಾಡಲು ಪೂರಕ ಕೃತಿಗಳು ಇಲ್ಲಿ ಲಭ್ಯ ಎನಿಸುತ್ತವೆ. ಶರಣಕಲಾಲೋಕ ಹಾಗೂ ಬಸವಧರ್ಮಪೀಠದ ಆವರಣದಲ್ಲಿನ ಅಲ್ಲಮಪ್ರಭುಗಳ ಕಲಾ ಮೂರ್ತಿಗಳು ಕಾಣಸಿಗುತ್ತವೆ. ಶೈಕ್ಷಣಿಕ ಪಠ್ಯಗಳಲ್ಲಿ ಅಲ್ಲಮರ ವಚನಗಳು ಇರುವದರಿಂದ ವಿದ್ಯಾರ್ಥಿಬಳಗ ಇವರ ಬಗ್ಗೆ ತಿಳಿಯಲು ಆಸಕ್ತಿ ವಹಿಸುತ್ತಾ ಬಂದಿರುವುದನ್ನು ಕಾಣುತ್ತೇವೆ. ಹಂಪಿ ಕನ್ನಡ ವಿಶ್ವವಿದ್ಯಾಲಯದ ವಿಸ್ತರಣಾ ಕೇಂದ್ರ ಅಂತರಾಷ್ಟ್ರೀಯ ವಚನ ಅಧ್ಯಯನ ಕೇಂದ್ರದ ಕೂಡಲಸಂಗಮ ಇದರ ವತಿಯಿಂದ ವಿವಿಧ ಕಾರ್ಯಕ್ರಮಗಳು ಅಲ್ಲಮಪ್ರಭು ಹಾಗೂ ಶರಣರ ಬಗ್ಗೆ ಅಧ್ಯಯನ ಕೈಗೊಳ್ಳಲು ಪೂರಕ ವಾತಾವರಣ ಒದಗಿಸಿವೆ. ಕ್ಷೇತ್ರದ ವ್ಯಾಪ್ತಿಯಲ್ಲಿ ವಿವಿಧ ಸಂದರ್ಭಗಳಲ್ಲಿ ಜರುಗುತ್ತಾ ಬಂದಿರುವ ಸ್ಥಳೀಯ, ಜಿಲ್ಲಾ, ರಾಜ್ಯಮಟ್ಟದ ಸಮಾರಂಭಗಳು ಈ ದಿಸೆಯಲ್ಲಿ ಗಮನಾರ್ಹ ಎನಿಸುತ್ತವೆ.

ಕೂಡಲಸಂಗಮ ಹಾಗೂ ಇಲ್ಲಿನ ಜನಸಮೂಹ, ಶರಣ ಪರಂಪರೆಯನ್ನು ಗೌರವ, ಭಕ್ತಿ, ಶ್ರದ್ಧೆಯಿಂದ ಕಾಣುತ್ತಾ ಬಂದಿರುವದನ್ನು ಕಾಣುತ್ತೇವೆ. ಅಂತೆಯೇ ಹಡಪದ ಅಪ್ಪಣ್ಣ, ಅಂಬಿಗರ ಚೌಡಯ್ಯ, ನೂಲಿಯಚಂದಯ್ಯ, ಜಗನ್ಮಾತೆ ಅಕ್ಕಮಹಾದೇವಿ, ಗಂಗಾಂಬಿಕೆ, ಮಾದರ ಚನ್ನಯ್ಯ, ಮಡಿವಾಳ ಮಾಚಯ್ಯ ಹೀಗೆ ಎಲ್ಲಾ ಶರಣರನ್ನು ಸ್ಮರಣೆ ಮಾಡುತ್ತಾ ಬಂದಿರುತ್ತಾರೆ.

ಪ್ರಸ್ತುತ ಲೇಖನದಲ್ಲಿ ಕೂಡಲಸಂಗಮ ಪರಂಪರೆ ಇಲ್ಲಿನ ಜನಸಮೂಹ ಬಸವಣ್ಣ, ನೀಲಾಂಬಿಕೆ, ಅಲ್ಲಮಪ್ರಭು, ಶರಣಸಮುದಾಯದ ಈ ಮೂವರನ್ನು ಕಂಡ ಬಗೆ ಇಲ್ಲಿ

ಆಚರಣೆ, ನಂಬಿಕೆ, ಉತ್ಸವ, ಕಥನ, ಐತಿಹ್ಯ, ಜನಪದದ ಪ್ರಭಾವ ಈ ಭಾಗದ ಜನತೆ ಶರಣ ಪರಂಪರೆಯನ್ನು ಪರಿಭಾವಿಸುವ ನಡೆಗಳನ್ನು ತಿಳಿಸಲು ಸಹಕಾರಿಯಾಗಿ ನಿಲ್ಲುತ್ತವೆ. ಇಲ್ಲಿ ಶರಣರನ್ನು ಗೌರವಿಸುವ ಮುಗ್ಧಭಕ್ತಿ ಇದೆ. ಅವರ ಜೀವನದ ಕಥನಗಳನ್ನು ಶಾಶ್ವತವಾಗಿರಿಸಿಕೊಳ್ಳಬೇಕೆಂಬ ಉತ್ಕಟವಾದ ಬಯಕೆ ಇದೆ. ಆಡಂಬರ ವೈಭವಕ್ಕೆಂದು ಎಲ್ಲಿಯೂ ಕೃತಕತೆಯ ಹಾದಿಯನ್ನು ತುಳಿಯದ ಪ್ರಾಮಾಣಿಕ ನಡೆಯಿದೆ. ಪರಂಪರೆ, ಸಂಪ್ರದಾಯದ ವೇಷತೊಟ್ಟು ಒಂದು ಸಂಸ್ಕೃತಿಯನ್ನು ಈ ನೆಲದಲ್ಲಿ ಶಾಶ್ವತವಾಗಿ ಬೆಳಗಿಸಬೇಕೆಂಬ ಹಿರಿದಾದ ಆಶಯಗಳನ್ನು ಇಲ್ಲಿ ಗುರುತಿಸಬಹುದಾಗಿದೆ. ವೈಚಾರಿಕ ನೆಲೆಯಲ್ಲಿ, ವೈಜ್ಞಾನಿಕ ನೆಲೆಯಲ್ಲಿ ನೋಡುವಾಗ ಜಂಗಮ ಸಂಸ್ಕೃತಿಗೆ ಹೆಚ್ಚು ಪ್ರಾಧಾನ್ಯತೆ ನೀಡಿದ ಶರಣರನ್ನು ಅದಕ್ಕಿಂತ ಭಿನ್ನ ನೆಲೆಯ ಸ್ಥಾವರರೂಪದಲ್ಲಿ ಕಾಣುವ ಈ ಭಾಗದ ಜನಸಮೂಹದ ಕೆಲವೊಂದಿಷ್ಟು ಆಚರಣೆಗಳು ಪ್ರಶ್ನಾರ್ಹ, ಚಿಂತನಾರ್ಹ ಎನಿಸುತ್ತವೆ. ಇಲ್ಲಿನ ಸೂಕ್ಷ್ಮತೆಗಳನ್ನು ಗುರುತಿಸುವ ಕಾರ್ಯಗಳನ್ನು ಮಾಡಬೇಕಿರುವದು; ಇವತ್ತಿನ ತಲೆಮಾರಿನ ಜನಕ್ಕೆ ಅವಶ್ಯಕ ನಡೆ ಎನಿಸಬೇಕಿದೆ ಹಾಗೂ ಬಹುಸಂಸ್ಕೃತಿಯ ನಮ್ಮ ನೆಲದ ಎಲ್ಲ ಬಗೆಯ ಆಚರಣೆಗಳನ್ನು ಪರಸ್ಪರ ಗೌರವಿಸುವ, ಕೊಡುಕೊಳ್ಳುವಿಕೆಯ ವ್ಯವಹಾರ ನಡೆಸುವ ಅನಿವಾರ್ಯವನ್ನು ಕೂಡಾ ನಾವು ನಿರ್ಲಕ್ಷಿಸುವಂತಿಲ್ಲ! ಈ ಬಗೆಯಲ್ಲಿ ಕೂಡಲಸಂಗಮದ ಜನಪರಂಪರೆ ಭಕ್ತವೃಂದ ಶರಣರನ್ನು ಕಂಡ ಬಗೆ ಇಂದಿಗೂ ಶರಣಸಮೂಹದ ಬಗ್ಗೆ ಹೊಂದಿರುವ ಗೌರವಾಭಿಮಾನದ ನಡೆ ನಿಜಕ್ಕೂ ಸ್ಮರಣಾರ್ಹ. ಇಲ್ಲಿನ ಕೆಲವು ಸಂಗತಿಗಳು ಅನಪೇಕ್ಷಣೀಯ, ಅನವಶ್ಯಕ ಎನಿಸಿದರೂ ಇನ್ನುಳಿದ ಎಲ್ಲವುಗಳನ್ನು ನಾವು ಗೌರವಿಸಲೇಬೇಕಾಗುತ್ತದೆ. ಜಗತ್ತಿನ ಒಳಿತನ್ನು ಬಯಸಿ ಮೌಲ್ಯಯುತ ವಚನಸಾಹಿತ್ಯವನ್ನು ವಿಶ್ವಕ್ಕೆ ಕೊಡುಗೆಯನ್ನಾಗಿ ನೀಡಿದ ವಚನಕಾರರನ್ನು ಶರಣಸಂಕುಲವನ್ನು ಕೂಡಲಸಂಗಮದ ಸಾಂಪ್ರದಾಯಿಕ ಪರಂಪರೆ ಕಾಣುತ್ತಾ ಬಂದಿರುವ ನಡೆ ನಿಲುವುಗಳು ಶರಣರ ಬಗ್ಗೆ ಹೊಸ ಆಯಾಮಗಳಲ್ಲಿ ಅಧ್ಯಯನಕೈಗೊಳ್ಳಲು ಹೊಸ ಹೊಳಹುಗಳನ್ನು ಸೃಷ್ಟಿಸಿಕೊಳ್ಳಲು ನೆರವಾಗಲಿ! ಬಸವಾದಿ ಶಿವಶರಣರ ಜೀವನ ಸಂದೇಶಗಳು, ವಚನಸಾಹಿತ್ಯದ ತಿರುಳುಗಳು, ಜಗವನ್ನು ಬೆಳಗುವ ದೀವಿಗೆಯಾಗಲಿ! ಶರಣಪರಂಪರೆಯ ಚರಿತ್ರೆಗೆ ವಿಶ್ವಮನ್ನಣೆ ದೊರೆತು ಜಗವೇ ಸರ್ವರ ಕಲ್ಯಾಣ ಬಯಸುವ ಕೂಡಲಸಂಗಮವಾಗಲಿ!

■■

## ಬಸವಣ್ಣನವರು

ಬಸವಣ್ಣನವರು ಮೇಲ್ವರ್ಗದಲ್ಲಿ ಹುಟ್ಟಿದ್ದರೂ, ಅವರು ಯಾವತ್ತೂ ತಾವು ಉಚ್ಚ ಕುಲದವರೆಂಬ ಅಹಂಕಾರ ಪ್ರದರ್ಶಿಸಿಸಲಿಲ್ಲ. ೧೨ ನೇ ಶತಮಾನದಲ್ಲಿ ಕರ್ನಾಟಕದ ಮಟ್ಟಿಗೆ ಮೇಲ್ವರ್ಗದ ಸಮುದಾಯಗಳು ಎಲ್ಲ ಸಮುದಾಯಗಳಲ್ಲಿ ಶ್ರೇಷ್ಠ ಸಮುದಾಯಗಳು ಎಂಬ ವಾತಾವರಣವಿತ್ತು. ಅದರಲ್ಲಿ ಅವರು ಅತ್ಯಂತ ಉತ್ತಮರು ಎಂಬ ಭಾವನೆ ಇತ್ತು. ಉಳಿದ ಎಲ್ಲ ಸಮಾಜಗಳು ಅವರಿಗಿಂತ ಕಡಿಮೆ ಎಂಬಂತಹ ಮನಸ್ಥಿತಿಯಲ್ಲಿ ಬದುಕುತ್ತಿದ್ದವು. ಬಸವಣ್ಣನವರಿಗೆ ಬಾಲ್ಯದಿಂದಲೇ ಸಮಾಜದಲ್ಲಿ ನಡೆಯುತ್ತಿದ್ದ ಆಚರಣೆಗಳು ಹಾಗೂ ಕೀಳು ವರ್ಗದವರ ಬಗ್ಗೆ ಹೊಂದಿದ್ದ ನಿಲುವುಗಳ ಬಗ್ಗೆ ಸ್ಪಷ್ಟ ಅರಿವಿತ್ತು. ಬಾಲ್ಯದಲ್ಲಿಯೇ ಮೇಲು ಕೀಳುಗಳ ಬಗ್ಗೆ ತುಂಬಾ ಜಿಜ್ಞಾಸು ಮನಸ್ಥಿತಿಯನ್ನು ಹೊಂದಿದ್ದರು. ಅವರು ಪ್ರತಿಯೊಂದು ಸಂದರ್ಭದಲ್ಲಿ ಸಮಾಜವನ್ನು ಪ್ರಶ್ನಿಸುತ್ತಿದ್ದು ಕೇವಲ ಮೇಲು–ಕೀಳುಗಳ ಬಗ್ಗೆ ಮಾತ್ರವಲ್ಲದೆ, ಅಂದಿನ ಕಾಲದಲ್ಲಿ ಹೆಣ್ಣು ಮಕ್ಕಳಿಗೆ ಧಾರ್ಮಿಕವಾಗಿ, ಸಾಮಾಜಿಕವಾಗಿ, ಶೈಕ್ಷಣಿಕವಾಗಿ ಯಾವುದೇ ಸ್ಥಾನಮಾನಗಳು ಇರುವುದು ಎಲ್ಲಿಯೂ ಕಂಡುಬರದೇ ಇರುವ ಈ ಅಸಮ ಧೋರಣೆಯನ್ನು ಕುರಿತು ಬಸವಣ್ಣನವರಿಗೆ ಅಸಹನೆಯಿದ್ದದ್ದು ಅವರ ಅಭಿವ್ಯಕ್ತಿಯಿಂದ ತಿಳಿದುಬರುತ್ತದೆ.

# ಬಸವಣ್ಣನ ಅರಸಿ ವಚನಗಾರ್ತಿ ಗಂಗಾಂಬಿಕೆ

● ಶ್ರೀಧರ ಗೌಡರ

ಬಸವಣ್ಣನ ಸಾಮಾಜಿಕ, ಧಾರ್ಮಿಕ ಆಚರಣೆಗೆ ಸಹಕಾರಿಯಾಗಿದ್ದ ಸಂಪ್ರದಾಯಶೀಲೆ, ಪತಿ ಭಕ್ತಿ ಸಂಪನ್ನೆ, ಆಚಾರ ಪತ್ನಿಯೇ ಗಂಗಾಂಬಿಕೆ. ಬಸವಣ್ಣನ ಹಿರಿಯ ಪತ್ನಿಯಾಗಿ, ಮಂತ್ರಿ ಬಲದೇವನ ಮಗಳಾಗಿ, ಗುರು ಘನಲಿಂಗ ರುದ್ರಮುನಿಗಳ ಶಿಷ್ಯೆಯಾದ ಗಂಗಾಂಬಿಕೆ, ಬಸವಣ್ಣನ ನವ ಸಮಾಜ ರಚನೆಯ ಕಾರ್ಯದಲ್ಲಿ ಸಹಕಾರಿಯಾಗಿ ಬಾಳಿದಳು. ಮಹಾಮನೆಯ, ಅನುಭವ ಮಂಟಪದ ಅನ್ನ-ಜ್ಞಾನ ದಾಸೋಹಗಳಲ್ಲಿ ನೆರವಾಗಿದ್ದಳು.

ಗಂಗಾಂಬಿಕೆಯ ಬಗೆಗೆ ಹೆಚ್ಚಿನ ಮಾಹಿತಿ ಸಾಹಿತ್ಯದಲ್ಲಿ ದೊರೆಯುವುದಿಲ್ಲ. ಹರಿಹರನ ಬಸವರಾಜ ದೇವರ ರಗಳೆ, ಭೀಮಕವಿಯ ಬಸವ ಪುರಾಣ, ಸಿಂಗಿರಾಜನ ಸಿಂಗಿ ಪುರಾಣ, ಲಕ್ಕಣ ದಂಡೇಶನ ಶಿವತತ್ವ ಚಿಂತಾಮಣಿ, ಸಿದ್ಧನಂಜೇಶನ ಗುರುರಾಜ ಚಾರಿತ್ರ್ಯ, ಷಡಕ್ಷರ ದೇವನ ಬಸವರಾಜ ವಿಜಯ, ಶಾಂತಲಿಂಗ ದೇಶಿಕನ ಭೈರವೇಶ್ವರ ಕಥಾಮಣಿ ಸೂತ್ರ ರತ್ನಾಕರ, ಮುಖಬೋಳು ಸಿದ್ದಲಿಂಗನ ಷಟ್‌ಸ್ಥಲ ತಿಲಕ, ಚೆನ್ನಪ್ಪ ಕವಿಯ ಶರಣ ಲೀಲಾಮೃತ ಮುಂತಾದ ಕೃತಿಗಳಲ್ಲಿ ಗಂಗಾಂಬಿಕೆಗೆ ಸಂಬಂಧಿಸಿದ ಕೆಲವು ಮಾಹಿತಿಗಳು ದೊರೆಯುತ್ತವೆ.

ಗಂಗಾಂಬಿಕೆ ಕಲ್ಯಾಣ ರಾಜ್ಯದ ಮಂತ್ರಿ ಬಲದೇವರಸನ ಪುತ್ರಿ. ರಾಜ ಬಿಜ್ಜಳನ ಸೇವೆಗೆ ಬಸವಣ್ಣನವರನ್ನು ನಿಯುಕ್ತಿಗೊಳಿಸಿದ ಬಲದೇವ ಮಂತ್ರಿಗಳು ತಮ್ಮ ಪುತ್ರಿಯೊಂದಿಗೆ ಬಸವಣ್ಣನವರ ವಿವಾಹ ಮಾಡಿದರು. ಪತಿಯ ಎಲ್ಲ ಕಾರ್ಯದಲ್ಲಿ ಭಾಗಿಯಾದ ಗಂಗಾಂಬಿಕೆ, ಕಲ್ಯಾಣ ಕ್ರಾಂತಿಯ ನಂತರ ಬಸವಣ್ಣ ಸಂಗಮಕ್ಕೆ ಹೊರಡುತ್ತಾರೆ. ಗಂಗಾಂಬಿಕೆ ತನ್ನ ಗುರುವಿನ ಸಲಹೆಯಂತೆ ಶರಣರ ಆಂದೋಲನದಲ್ಲಿ ಪಾಲ್ಗೊಳ್ಳಲು ಅಲ್ಲಿಯೇ ಉಳಿಯುತ್ತಾಳೆ. ಅಕ್ಕನಾಗಮ್ಮನೊಂದಿಗೆ ಶರಣರ ಹೋರಾಟದಲ್ಲಿ ಸಹಕರಿಸಿ, ಪ್ರಚೋದಕ ಶಕ್ತಿಯಾಗಿ ನಿಂತಂತೆ ತೋರುತ್ತದೆ.

ಗುರುವಿನ ಆಜ್ಞೆಯಂತೆ ಶರಣ ಆಂದೋಲನವನ್ನು ಸಂಘಟಿಸುವಲ್ಲಿ ಮಹತ್ವದ ಪಾತ್ರವನ್ನಾಡಿದ ಗಂಗಾಂಬಿಕೆ, ಕಾದರವಳ್ಳಿಯ ಘೋರ ಕಾಳಗದಲ್ಲಿ ಕಾದಾಡಿ ನಂತರ ಅಲ್ಲಿಂದ ಮೂರು ನಾಲ್ಕು ಮೈಲುಗಳ ಅಂತರದಲ್ಲಿ ಇರುವ ಈಗಿನ ಮುಗುಟಖಾನ ಹುಬ್ಬಳ್ಳಿಯಲ್ಲಿ ಐಕ್ಯಳಾದಳೆಂದು ಫ. ಗು. ಹಳಕಟ್ಟಿಯವರು ಹೇಳಿದ್ದಾರೆ.ಈಗಲೂ ಅಲ್ಲಿ ಗಂಗಮ್ಮನ ಗುಡಿಯೊಂದು ಇದ್ದು, ಅದು ಆಕೆಯ ಸಮಾಧಿಸ್ಥಾನ ಎಂದು ಸಂಶೋಧಕರು ಖಚಿತಪಡಿಸಿದ್ದಾರೆ.

ಕಲ್ಯಾಣ ಕ್ರಾಂತಿಯ ನಂತರ ಬಸವಣ್ಣ ಕಲ್ಯಾಣ ತೊರೆಯಬೇಕಾಯಿತು. ಅವರ ನೇತೃತ್ವದಲ್ಲಿ ಒಂದು ತಂಡ ಕೂಡಲಸಂಗಮಕ್ಕೆ, ಇನ್ನೊಂದು ತಂಡ ಶ್ರೀಶೈಲಕ್ಕೆ ಪ್ರಯಾಣ ಬೆಳೆಸಿತು. ಗಂಗಾಂಬಿಕೆ, ನಾಗಲಾಂಬಿಕೆ, ಚನ್ನಬಸವಣ್ಣ, ಮಡಿವಾಳ ಮಾಚಿದೇವ ಮತ್ತಿತರ ಶರಣರು ಇದ್ದ ಮತ್ತೊಂದು ತಂಡ ಉಳವಿ ಕಡೆಗೆ ಹೊರಟಿತ್ತು. ಈ ತಂಡದಲ್ಲಿದ್ದ ಧೀರ ಮಹಿಳೆಯರು ಬಿಜ್ಜಳನ ಸೈನಿಕರೊಂದಿಗೆ ಹೋರಾಟ ಮಾಡಿ ತೋರಗಲ್ ನಾಡನ್ನು ಪ್ರವೇಶ ಮಾಡಿದರು. ನಂತರ ಕಾದರವಳ್ಳಿಯಲ್ಲಿ ಘೋರ ಯುದ್ಧ ನಡೆಯಿತು. ಆ ಸಂದರ್ಭದಲ್ಲಿ ಕೊನೆಯುಸಿರೆಳೆದ ಗಂಗಾಂಬಿಕೆ ಅವರನ್ನು ಮಲಪ್ರಭೆಯ ದಡದಲ್ಲಿ ಸಮಾಧಿ ಮಾಡಲಾಯಿತು ಎಂದು ಸಂಶೋಧಕರು ಖಚಿತಪಡಿಸಿದ್ದಾರೆ.

ಗಂಗಾಂಬಿಕೆಯು ಬಸವಣ್ಣನ ಎರಡನೇ ಹೆಂಡತಿ ಎಂದು ಫ. ಗು. ಹಳಕಟ್ಟಿಯವರು ಹೇಳಿದ್ದರೂ, ಅದಕ್ಕೆ ಸರಿಯಾದ ಆಧಾರಗಳು ದೊರೆಯುವುದಿಲ್ಲ. ಬಸವಣ್ಣನವರು ಕಲ್ಯಾಣಕ್ಕೆ ಬಂದೊಡನೆ ಗಂಗಾಂಬಿಕೆಯೊಡನೆ ಅವರ ಮದುವೆ ನೆರವೇರುತ್ತದೆ. ನಂತರ ಬಿಜ್ಜಳದೊರೆಯ ಭಂಡಾರಕ್ಕೆ ಅಧಿಪತಿಯಾದ ಮೇಲೆ ನೀಲಾಂಬಿಕೆಯನ್ನು ಮದುವೆಯಾಗುತ್ತಾರೆ. ಗಂಗಾಂಬಿಕೆ ಅವರ ಮೊದಲ ಮಡದಿ ಎಂದು ವಿದ್ವಾಂಸರು ಅಭಿಪ್ರಾಯ ಪಟ್ಟಿದ್ದಾರೆ. ಕೆಲವು ವಿದ್ವಾಂಸರು ಬಸವಣ್ಣನವರಿಗೆ ಇಬ್ಬರು ಪತ್ನಿಯರು ಇರಲೂ ಸಾಧ್ಯವೆ ಇಲ್ಲ. ಇಬ್ಬರೂ ಒಂದೇ ಎನ್ನುವ ವಾದದಲ್ಲಿ ಇದ್ದಾರೆ.

ಶಿಕ್ಷಕರು, ಸರ್ಕಾರಿ ಪ್ರೌಢ ಶಾಲೆ, ಕೂಡಲಸಂಗಮ –೫೮೭೧೧೫ ತಾ.ಹುನಗುಂದ ಜಿ.ಬಾಗಲಕೋಟ

ಗಂಗಾಂಬಿಕೆಯನ್ನು ಭೀಮಕವಿ 'ಪತಿಭಕ್ತಿ ಗುಣಸಂಪನ್ನೆಯುಂ ಗುರುಲಿಂಗಭಜನಾಸನ್ನೆಯುಂ ಮೂಜಗಂಗಳ ಚನ್ನೆಯುಂ' ಎಂದು ವರ್ಣಿಸುತ್ತಾನೆ. ಗಂಗಾಂಬಿಕೆಯ ೯ ವಚನಗಳು ದೊರೆತಿದ್ದು, ಗಂಗಾಪ್ರಿಯ ಕೂಡಲಸಂಗಮದೇವಾ ಆಕೆಯ ವಚನಾಂಕಿತವಾಗಿದೆ. ಬಸವಣ್ಣನ ಬಹುಮುಖ ವ್ಯಕ್ತಿತ್ವದ ಬಗೆಗೆ ಅಚ್ಚರಿ, ಶರಣ ಸಿದ್ದರಾಮ, ಚನ್ನಬಸವಣ್ಣನವರ ಬಗೆಗೆ ಗೌರವ, ಪರಮಾತ್ಮನಲ್ಲಿ ಅಪಾರ ಭಕ್ತಿಭಾವ, ಅಂತರಂಗದ ಅಭಿವ್ಯಕ್ತಿ, ವೈಯಕ್ತಿಕ ಬದುಕಿನ ನೋವು, ಅಗಲಿಕೆ ಗಂಗಾಂಬಿಕೆಯ ವಚನದಲ್ಲಿ ವ್ಯಕ್ತವಾಗುವ ಮುಖ್ಯ ಅಂಶಗಳಾಗಿವೆ.

ಬಸವಣ್ಣನ ಕಾರ್ಯ ವೈಖರಿಯನ್ನು ವಚನದಲ್ಲಿ ವ್ಯಕ್ತಪಡಿಸಿದ ಗಂಗಾಂಬಿಕೆ

**ಸಾಂದ್ರವಾಗಿ ಹಗರಣ ಭಕ್ತಿಯ ಮಾಳ್ವನೆಂತೋ**
**ಮಾದಲಾಂಬಿಕಾನಂದನನು?**
**ಸಾಂದ್ರವಾಗಿ ಬಿಜ್ಜಳನರಮನೆಯ ನ್ಯಾಯನೋಳ್ಪನೆಂತೊ**
**ಮಾದರಸನ ಮೋಹದ ಮಗನು?**
**ಸಾಂದ್ರವಾಗಿ ಲಿಂಗಾರ್ಚನೆ ಲಿಂಗತೃಪ್ತಿ ಅನುಗೆಯ್ವನೆಂತೊ**
**ಗಂಗಾಪ್ರಿಯ ಕೂಡಲಸಂಗನ ಶರಣ ಚನ್ನಾ !**

ಈ ವಚನದಿಂದ ಬಸವಣ್ಣನ ತಂದೆ–ತಾಯಿಗಳ ಹೆಸರು ತಿಳಿಯುತ್ತದೆ. ಬಸವಣ್ಣ ನಿರ್ವಹಿಸುತ್ತಿದ್ದ ಕರ್ತವ್ಯಗಳ ಪರಿಚಯವೂ ಆಗುತ್ತದೆ. ತನ್ನ ಮಗನ ಸಾವಿನಿಂದಾದ ದುಃಖವನ್ನೇ ಬಹುವಾಗಿ ವ್ಯಕ್ತಪಡಿಸಿದ್ದಾಳೆ.

ಬಸವಣ್ಣನ ಹೆಂಡತಿ, ಮಕ್ಕಳ ವಿವರ ತಿಳಿಸುವ ವಚನ

**ಅವಳ ಕಂದ ಬಾಲಸಂಗ, ನಿನ್ನ ಕಂದ ಚೆನ್ನಲಿಂಗ**
**ಎಂದು ಹೇಳಿದರಮ್ಮಾ ಎನ್ನ ಒಡೆಯರು**
**ಫಲವಿಲ್ಲದ ಕಂದನಿರ್ಪನವಳಿಗೆ**
**ಎನಗೆ ಫಲವಿಲ್ಲ. ಕಂದನಿಲ್ಲ**
**ಇದೇನೋ ದುಃಖದಂದುಗ**
**ಗಂಗಾಪ್ರಿಯ ಕೂಡಲಸಂಗಮದೇವಾ**

ಬಸವಣ್ಣನಿಗೆ ಇಬ್ಬರು ಹೆಂಡಿರಿರುವ ಅಂಶ ಸ್ಪಷ್ಟವಾಗುತ್ತದೆ. ಅಲ್ಲದೆ ಇಬ್ಬರಿಗೂ ಒಬ್ಬೊಬ್ಬ ಮಗನಿದ್ದನೆಂದೂ, ನೀಲಾಂಬಿಕೆಯ ಮಗನಿಗೆ ಬಸವಣ್ಣನು ಬಾಲಸಂಗನೆಂದೂ, ಗಂಗಾಂಬಿಕೆಯ ಮಗನಿಗೆ ಚೆನ್ನಸಂಗನೆಂದೂ ಹೆಸರಿಟ್ಟಿದ್ದರೆಂದು ತಿಳಿದು ಬರುತ್ತದೆ.

ಗಂಗಾಂಬಿಕೆ ಒಂದು ವಚನದಲ್ಲಿ ಸಿದ್ಧರಾಮರ ಸ್ಮರಣೆ ಮಾಡಿದರೆ, ಮತ್ತೊಂದರಲ್ಲಿ ಲಿಂಗನಿಷ್ಠೆಗಿಂತ ಪತಿನಿಷ್ಠೆಗೆ ಮಹತ್ವ ಕೊಟ್ಟಿದ್ದಾಳೆ.

ಬಸವನರಸಿ ಗಂಗಾಂಬಿಕೆ ವಚನಗಾರ್ತಿಯಾಗಿ, ಪತಿಹಿತೆಯಾಗಿ, ಜೀವನದ ಕೊನೆಯ ಘಟ್ಟದಲ್ಲಿ ಹೋರಾಟಗಾರ್ತಿಯಾಗಿ ಕಂಡು ಬಂದಿದ್ದಾಳೆ.

■■

ಪತಿಯಾಜ್ಞೆಯಲ್ಲಿ ಚರಿಪ ಸತಿಗ್ಯಾಕೆ ಪ್ರತಿಜ್ಞೆಯು?
ಪ್ರತಿಜ್ಞೆಯ ಪತಿಕರದಲ್ಲಿ ಪೋಪದಿರೆ ಯಾತನೆಯಲ್ಲವೆ?
ಇವಳ ಲಿಂಗನಿಷ್ಠೆ ಇವಳಿಗೆ
ನಮ್ಮ ನಿಷ್ಠೆ ಪತಿಯಾಜ್ಞೆಯಲ್ಲಿ ಕಾಣಾ
ಗಂಗಾಪ್ರಿಯ ಕೂಡಲ ಸಂಗಮದೇವಾ.

**–ಶರಣೆ ಗಂಗಾಂಬಿಕೆ**

# ಪ್ರಾಣದಲ್ಲಿ ಮಾಯೆಯಿರಲು ಅದೇತರ ನಿರ್ವಾಣ?

● ವೆಂಕಟೇಶ ಕೆ. ಜನಾದ್ರಿ

"ಕಾಯದಲ್ಲಿ ಕಳವಳವಿರಲು, ಪ್ರಾಣದಲ್ಲಿ ಮಾಯೆಯಿರಲು ಏತರ ಮನ, ಇದೇತರ ನಿರ್ವಾಣ? ಮಹಾಲಿಂಗ ತ್ರಿಪುರಾಂತಕನು ನಿನ್ನ ಸಂಹಾರಿಯೆಂಬನಲ್ಲದೇ ಸಜ್ಜನೆಯೆಂದು ಕೈವಿಡಿವನಲ್ಲ ಕೇಳಾ ಮರುಳೆ" ಎಂದು ಅಕ್ಕಮಹಾದೇವಿಯನ್ನು ಪ್ರಶ್ನಿಸುವ ಮೂಲಕ ಆಕೆಯ ಮಾನಸಿಕ ಸ್ಥಿರತೆಯನ್ನೇ ಪರೀಕ್ಷಿಸುವ ಹೊಣೆಹೊತ್ತ ಶರಣ ಕಿನ್ನರಿ ಬೊಮ್ಮಯ್ಯ ಬಸವಾದಿ ಪ್ರಮಥರಲ್ಲಿಯೇ ಬಹಳ ವಿಶಿಷ್ಠ ಬಗೆಯ ವೈಚಾರಿಕ ಚಿಂತಕನೀತ. ಅಷ್ಟೇ ದಿಟ್ಟ ನಿಲುವಿನ ಶರಣನೀತ. ಈತನ ಈ ಬಗೆಯ ನೇರ ನಡೆ–ನುಡಿಗೆ ಮೆಚ್ಚಿದ ಬಸವಣ್ಣ ಬಸವಕಲ್ಯಾಣದ ಅನುಭವ ಮಂಟಪಕ್ಕೆ ಬರುವ ಹೊಸ ಹೊಸ ಶರಣರನ್ನು ಪರೀಕ್ಷಿಸಿ ಅವರಿಗೆ ಐಡೆಂಟಿಟಿ ಕಾರ್ಡ್‌ನ್ನು ಕೊಡುವ ಹೊಣೆಗಾರಿಕೆಯನ್ನು ವಹಿಸಿದ್ದರು. ಅದಕ್ಕಾಗಿಯೇ ಇರಬೇಕು ಅನುಭವ ಮಂಟಪವೆಂಬುದು ಶರಣ ಶ್ರೇಷ್ಠರ ನೆಲೆಯಾಗಿತ್ತು. ಶರಣರ ಚಿಂತನೆಯ ಅಲೆಗಳ ಅನುಭಾವದ ಆಗರವಾಗಿತ್ತು. ಅನುಭವ ಮಂಟಪ ತನ್ನ ಸ್ಥಾವರತೆಯೊಳಗೇ ಜಂಗಮತ್ವವನ್ನು ಉಸಿರಾಗಿಸಿಕೊಂಡಿತ್ತು. ಇಡೀ ಅನುಭವ ಮಂಟಪದಲ್ಲಿ ಬಯಲಾದ ನುಡಿಗಳೆಲ್ಲವೂ ಅವರ ನಡೆಯಾಗಿದ್ದವು.

ಅಕ್ಕಮಹಾದೇವಿ ಶಿವಮೊಗ್ಗದ ಉಡತಡಿ(ಬಟ್ಟೆ ಉಡುವುದನ್ನು ತಡೆದ ಊರು)ಯಿಂದ ಬಸವಕಲ್ಯಾಣದತ್ತ ಬರುತ್ತಿದ್ದಾಗ ಕಲ್ಬುರ್ಗಿ ಹತ್ತಿರದ ಮಹಾಗಾಂವದಲ್ಲಿ ಒಂದೆರಡು ದಿನ ತಂಗಿ ಬಸವಕಲ್ಯಾಣಕ್ಕೆ ತೆರಳಲಿರುವ ಅಕ್ಕಮಹಾದೇವಿಯನ್ನು ತಡೆದು ಪರೀಕ್ಷಿಸಿದ ಸ್ಥಳ ಒಂದಿದೆ. ಅದುವೇ ಬೀದರ್ ಜಿಲ್ಲೆ ಹುಮ್ನಾಬಾದ್ ತಾಲ್ಲೂಕಿನ ಹಳ್ಳಿಖೇಡದ ಹತ್ತಿರ ಕಿಣ್ಣಿ ಎಂಬ ಗ್ರಾಮವಿದೆ. ಕಿಣ್ಣಿ ಎಂಬುದು ಬೊಮ್ಮಯ್ಯನ ಕಿನ್ನರಿ ಶಬ್ದದಿಂದಲೇ ಪರಿವರ್ತಿತವಾಗಿ ಕಿನ್ನರಿ, ಕಿಣ್ಣರಿ, ಕಿಣ್ಣ, ಕಿಣ್ಣಿಯಾಗಿರಬಹುದೆಂಬುದು ನನ್ನ ಅಂದಾಜು. ಈ ಕಿಣ್ಣಿಯ ಹತ್ತಿರ ಕಿನ್ನರಿ ಬೊಮ್ಮಯ್ಯ ಶರಣರು ಅಕ್ಕಮಹಾದೇವಿಯನ್ನು ತಡೆದು ನಿಲ್ಲಿಸಿ ಆಕೆಯ ವೈರಾಗ್ಯವನ್ನು ಒರೆಹಚ್ಚಿ ನೋಡಬೇಕಾದಾಗ, ಕಿನ್ನರಿ ಬೊಮ್ಮಯ್ಯನಿಗೆ ಆಕೆಯ ಭಕ್ತಿ, ವೈರಾಗ್ಯದ ಕುರಿತಾಗಿ ಮತ್ತು ಚೆನ್ನಮಲ್ಲಿಕಾರ್ಜುನನೆಂಬ ಅರಿವಿನ ದೇವನನ್ನೇ ತನ್ನ ಪತಿಯಾಗಿಸಿಕೊಂಡಂಥ ಅವಳ ಧೋರಣೆಯನ್ನು ಪರೀಕ್ಷಿಸುವಾಗ ಸಹಜವಾಗಿ ಮೇಲಿನಂತೆ "ಪ್ರಾಣದಲ್ಲಿ ಮಾಯೆಯಿರಲು ಅದೇತರ ನಿರ್ವಾಣ" ಎಂಬ ತನ್ನ ಅಭಿಪ್ರಾಯ ವ್ಯಕ್ತಪಡಿಸುತ್ತಾನೆ.

ಕಾಯವೆಂಬ ದೇಹದಲ್ಲಿ ಕಳವಳವನ್ನು ಹೊಂದಿದ್ದರೆ ಅದೆಂಥ ನಿರ್ಮಲ ಮನ?, ಪ್ರಾಣದಲ್ಲಿಯ ಮಾಯೆಯೆಂಬ ಪಾಶವನ್ನು ಹೊಂದಿದ್ದಾಗ ಅದೆಂಥ ವೈರಾಗ್ಯದ ನಿರ್ವಾಣ? ಇರಲು ಸಾಧ್ಯವೆಂಬ ಅಂಶವನ್ನು ತಾನು ಗುರುತಿಸಿದವನಂತೆ ನಟಿಸಿ ಹೀಗಿದ್ದರೆ ಇದೆಂಥ ಮನ ನಿನ್ನದು, ಇದೆಂಥ ನಿರ್ವಾಣ? ನಿನ್ನದು ಹೀಗಿದ್ದರೆ ಮಹಾಲಿಂಗವೆಂಬ ತ್ರಿಪುರಾಂತಕ ಲಿಂಗ ನಿನ್ನನ್ನು ಸಂಹಾರಿ ಎನ್ನಬಲ್ಲನೇ ಹೊರತು "ಸಜ್ಜನೆ" ಎನ್ನಲಾರ ಎಂದು ಪ್ರಶ್ನಿಸುತ್ತಾರೆ. ಅದಕ್ಕೆ ಅಕ್ಕ ಸಮರ್ಥವಾಗಿಯೇ ತನ್ನ ವೈರಾಗ್ಯದ ಧೋರಣೆಯನ್ನು ತನ್ನ ಮನದೊಳಗಣ ಪತಿ ಆ ದೇವ ಚೆನ್ನಮಲ್ಲಿಕಾರ್ಜುನನ ಬಗೆಗೆ ಮಾರ್ಮಿಕವಾಗಿ ಉತ್ತರಿಸುತ್ತಾಳೆ.

ಇಲ್ಲಿ ಒಂದು ವಿಷಯ ಸಂಶೋಧನೆಗೊಳಪಡಬೇಕಾಗಿದೆ ಕೆಲವು ಜನಪದರ ದೃಷ್ಟಿಯಲ್ಲಿ ಕಿನ್ನರಿ ಬೊಮ್ಮಯ್ಯ ಅಕ್ಕಮಹಾದೇವಿಯ ಪ್ರೀತಿಯನ್ನು ಬಯಸಿದ್ದ, ಪ್ರೀತಿಯ ಭಾವದಲ್ಲಿದ್ದ ಎಂಬುದನ್ನು ಅಭಿವ್ಯಕ್ತಿಸುತ್ತಾರೆ. ಆದರೆ ನನ್ನ ಅಂದಾಜಿನ ಪ್ರಕಾರ ಬೊಮ್ಮಯ್ಯನವರಿಗೆ ಅಕ್ಕಮಹಾದೇವಿ ಬಗೆಗೆ ಪ್ರೀತಿಯ ಮೋಹವಿರದೇ ಕೇವಲ ಬಸವಣ್ಣನವರು ವಹಿಸಿದ ಹೊಣೆಗಾರಿಕೆಯನ್ನು ನಿಭಾಯಿಸುವ ಅಂದರೆ ಆಕೆಯ ವೈರಾಗ್ಯವನ್ನು ಪರೀಕ್ಷಿಸಿ ಆಕೆ ವೈರಾಗ್ಯ ನಿಧಿ ಎಂಬುದನ್ನು ನಿರೂಪಿಸಬೇಕಿತ್ತು. ಇಷ್ಟಾದರೂ ಮುಂದೆ ಆಕೆ ಅನುಭವ

ಲೆಕ್ಕಪತ್ರ ಅಧೀಕ್ಷಕ, ಈಕರಸಾ ಸಂಸ್ಥೆ , ಕೇಂದ್ರ ಕಛೇರಿ, ಕಲಬುರ್ಗಿ–೫೮೫೧೦೨ ಮೊ: ೯೪೫೩೩೦೪೯೨

ಮಂಟಪದಲ್ಲಿ ಮತ್ತೇ ಅಲ್ಲಮಪ್ರಭುವಿನಿಂದ ಪರೀಕ್ಷೆಗೊಡ್ಡಿಕೊಳ್ಳುವ ಮೂಲಕ "ವೈರಾಗ್ಯ ನಿಧಿ"ಗೆ ಭಾಜನಳಾಗುತ್ತಾಳೆ. ಹಾಗಾಗಿ ಇಲ್ಲಿ ಬೊಮ್ಮಯ್ಯನವರಿಗೆ ಮಹಾದೇವಿ ಕೇವಲ ಸಹೋದರಿ ಸಮಾನಳಾಗಿದ್ದಳೆನಿಸುತ್ತದೆ.

ಹೀಗೆ ಬೊಮ್ಮಯ್ಯ ಅಕ್ಕನನ್ನು ಪರೀಕ್ಷಿಸುವಾಗ, "ಮಸ್ತಕವ ಮುಟ್ಟಿ ನೋಡಿದಡೆ, ಮನೋಹರದಳಿವು ಕಾಣ ಬಂದಿತ್ತು, ಮುಖಮಂಡಲವ ಮುಟ್ಟಿ ನೋಡಿದಡೆ ಮೂರ್ತಿಯ ಅಳಿವು ಕಾಣ ಬಂದಿತ್ತು, ಕೊರಳ ಮುಟ್ಟಿ ನೋಡಿದಡೆ, ಗರಳಧರನ ಇರವು ಕಾಣ ಬಂದಿತ್ತು, ತೋಳುಗಳ ಮುಟ್ಟಿ ನೋಡಿದಡೆ ಶಿವನಪ್ಪುಗೆ ಕಾಣ ಬಂದಿತ್ತು, ಉರಸ್ಥಲವ ಮುಟ್ಟಿ ನೋಡಿದಡೆ ಪರಸ್ಥಲದಂಗಲೇಪ ಕಾಣ ಬಂದಿತ್ತು, ಬಸಿರ ಮುಟ್ಟಿ ನೋಡಿದಡೆ, ಬ್ರಹ್ಮಾಂಡವು ಕಾಣ ಬಂದಿತ್ತು, ಗುಹ್ಯವ ಮುಟ್ಟಿ ನೋಡಿದಡೆ ಕಾಮದಹನ ಕಾಣ ಬಂದಿತ್ತು, ಮಹಾಲಿಂಗ ತ್ರಿಪುರಾಂತಕದೇವಾ ಮಹಾದೇವಿಯಕ್ಕನ ನಿಲುವನರಿಯದೆ ಅಳುಪಿ ಕೆಟ್ಟೆನು"

ಎಂಬ ಬೊಮ್ಮಯ್ಯನ ವಚನವನ್ನಿಲ್ಲಿ ಗಮನಿಸಬಹುದು. ಈ ವಚನವನ್ನು ಅವಲೋಕಿಸಿದಾಗ ಬೊಮ್ಮಯ್ಯ ಅಕ್ಕಮಹಾದೇವಿಯನ್ನು ಪರೀಕ್ಷಿಸುವಾಗ ಕಂಡುಕೊಂಡ ಬೆರಗು ಮತ್ತು ನಿಷ್ಠೆಯನ್ನು ಬಿಂಬಿಸುತ್ತಾನೆ. ಆಕೆಯ ನೆತ್ತಿಯನ್ನು ಮುಟ್ಟಿದಾಗ ಐಹಿಕ ಜಗತ್ತಿನಿಂದ ಆಕೆ ವಿಮುಖವಾಗಿದ್ದನ್ನು ಗುರುತಿಸುತ್ತಾರೆ, ಮುಖ ಮುಟ್ಟಿ ನೋಡಿದಾಗ ನಿರಾಕಾರ ಸ್ಥಿತಿಯಲ್ಲಿದ್ದ ಆಕೆಯ ನಿರ್ಲಿಪ್ತ ಮನೋಭಾವ ಗೋಚರಿಸುತ್ತದೆ, ಕೊರಳನ್ನು ಮುಟ್ಟಿದಾಗ ಅಲ್ಲಿ ನೀಲಕಂಠನ ಇರುವಿಕೆ ಅರಿವಿಗೆ ಬರುತ್ತದೆ, ತೋಳುಗಳನ್ನು ಮುಟ್ಟಿದಾಗ ಅಲ್ಲಿ ಚೆನ್ನಮಲ್ಲಿಕಾರ್ಜುನನೇ ಆವರಿಸಿಕೊಂಡಿದ್ದು ಕಂಡು ಬರುತ್ತದೆ, ಎದೆ ಮುಟ್ಟಿದಾಗ ಅಲ್ಲಿ ಪರಶಿವನಿರುವಿಕೆ ತೋರುತ್ತದೆ, ಹೊಟ್ಟೆ ಮುಟ್ಟಿದಾಗ ಅಲ್ಲಂತೂ ಬ್ರಹ್ಮಾಂಡದ ಬೆರಗು ಕಾಣುತ್ತದೆ, ಗುಪ್ತಾಂಗ ಮುಟ್ಟಿದಾಗ ಕಾಮದಹನವಾದಂತ ವಿಸ್ಮಯತೆ ಅರಿವಾಗುತ್ತದೆ, ಓ ದೇವರೆ ಮಹಾದೇವಿಯಕ್ಕನ ದಿವ್ಯತೆ ಅರ್ಥೈಸಿಕೊಳ್ಳದೆ ಪರೀಕ್ಷಿಸಿ ನಾ ಕೆಟ್ಟೆ ಎಂದು ಪಶ್ಚಾತ್ತಾಪಿಯಾಗಿ "ನಾನು ಹುಲಿ ನೆಕ್ಕಿ ಬದುಕಿದೆನು ಶರಣಾರ್ಥಿ ತಾಯಿ ಶರಣಾರ್ಥಿ ಎನ್ನುತ್ತಾರೆ.

**"ನಿನ್ನ ಸ್ವರೂಪ ಕಂಡೆನ್ನ ದೃಷ್ಠಿ ನಟ್ಟುದೆನಗೆ ನಿನ್ನ ಲಾವಣ್ಯರಸವ ಕಂಡು ಮನ ಹಾರೈಸಿತ್ತೆನಗೆ, ನಿನ್ನ ಪ್ರವುಡಿಯಿಂದ ಕೂಡಿದೆನೆಂಬುದು ಭಾವದಲ್ಲಿ ಬಚ್ಚಬರಿಯ ಹೆಂಗಸಾಗಿ ತೋರಿತ್ತೆನೆಗೆ, ಮಹಾಲಿಂಗ ತ್ರಿಪುರಾಂತಕನೆನಗೊಡ್ಡಿದ ಮಾಯೆಯ ನಿನ್ನ ಸಮಸುಖ ಕೂಟದೊಳಿರ್ದು ಶಿವಭಾವಭಕ್ತಿಯಂ ಗೆಲುವೆನು ಮಹಾ ಹೆಣ್ಣು ಎಂದು ಕೈವಿಡಿದೆನು"** ಎಂದು ತಮ್ಮ ವಚನದ ಮೂಲಕ ಒಪ್ಪಿಕೊಂಡ ಬೊಮ್ಮಯ್ಯ ಅಕ್ಕಮಹಾವಿಯನ್ನು ಆ ಪರೀಕ್ಷೆಯಲ್ಲಿ ಉತ್ತೀರ್ಣ ಮಾಡಿ, ಅನುಭವ ಮಂಟಪಕ್ಕೆ ಕಳುಹಿಸುತ್ತಾನೆ. (ಅಕ್ಕಮಹಾದೇವಿಯನ್ನು ಹೀಗೆಲ್ಲ ಪರೀಕ್ಷಿಸುವ ಅವಶ್ಯಕತೆ ಇರಲಿಲ್ಲ, ಆದರೆ ಬಾಹ್ಯ ಪ್ರಪಂಚಕ್ಕೆ ಅಕ್ಕನ ಬಯಲ ಭಕ್ತಿ, ಬಯಲಭಾವವನ್ನು ಅನಾವರಣಗೊಳಿಸಬೇಕಿತ್ತೆನಿಸುತ್ತದೆ) ಇಲ್ಲಿ ಕಿನ್ನರಿ ಬೊಮ್ಮಯ್ಯ ಕೇವಲ ಸಾಂಕೇತಿಕವಾಗಿ ಪರೀಕ್ಷಕನಾಗಿದ್ದಾನೆಂದು ತೋರುತ್ತದೆ.

ಕಿನ್ನರಿ ಬೊಮ್ಮಯ್ಯನವರು ಇಂದಿನ ಆಂದ್ರಪ್ರದೇಶದ "ಪುಂಡೂರು" ಎಂಬ ಗ್ರಾಮದಲ್ಲಿ ಕಲಿದೇವಿ ಎಂಬ ತಾಯಿಯ ಮಗನಾಗಿ ಕ್ರಿ. ಶ. ೧೧೬೦ ಭಾರತ ಹುಣ್ಣಿಮೆ ದಿನದಂದು ಜನಸಿದರೆಂಬುದೊಂದು ಅಂದಾಜು. ಇವರು ರಚಿಸಿದ ಹಲವು ವಚನಗಳಲ್ಲಿ ಇಂದು ಲಭ್ಯವಿರುವುದು ಕೇವಲ ೧೮ ವಚನಗಳು. ಇವರ ಅಂಕಿತ ನಾಮ "ತ್ರಿಪುರಾಂತಕ ಲಿಂಗ" ಮೊದಲು ಅಕ್ಕಸಾಲಿಗ ಕಾಯಕವನ್ನು ನಿರ್ವಹಿಸುತ್ತಿದ್ದರು. ನಂತರ ಬಸವ ಕಲ್ಯಾಣಕ್ಕೆ ಬಂದು ತ್ರಿಪುರಾಂತಕೇಶ್ವರನ ಮುಂದೆ ಕಿನ್ನರಿ ನುಡಿಸುವ ಕಾಯಕವನ್ನು ಆಲಂಗಿಸಿಕೊಂಡದ್ದಕ್ಕಾಗಿ "ಕಿನ್ನರಿ ಬೊಮ್ಮಯ್ಯ" ಅಥವಾ "ಕಿನ್ನರಿ ಬ್ರಹ್ಮಯ್ಯ" ಎಂದು ಗುರುತಿಸಿಕೊಂಡಿದ್ದರು. ಬಸವಣ್ಣನವರ ಅಂತರಂಗದ ಸಖ ಆಗಿದ್ದರು.

ಒಂದೊಮ್ಮೆ ಇವರ ಪ್ರಾಣ ಪಕ್ಷಿ ಹಾರಿ ಹೋದಾಗ ಬಸವಣ್ಣ ತಮ್ಮ ಪ್ರಾಣವನ್ನು ಧಾರೆ ಎರೆದರೆಂಬ ಪ್ರಸಂಗ ಜನಪದರಲ್ಲಿ ಬರುತ್ತದೆ. ಇನ್ನೊಬ್ಬರಿಗೆ ಪ್ರಾಣ ಧಾರೆ ಎರೆಯುವುದು ವೈಜ್ಞಾನಿಕವಾಗಿ ಅಸಾಧ್ಯವಾಗಿದ್ದರೂ ಶರಣರಲ್ಲಿ ವಿಭಿನ್ನತೆಯೇ ಇರಲಿಲ್ಲ. ದೇಹ ಬೇರೆಯಾದರೂ ಅವರಲ್ಲಿಯ ಆತ್ಮ ಒಂದೇ ಆಗಿತ್ತು. ಅಂಗ ಬೇರೆಯಾಗಿದ್ದರೂ ಅವರೊಳಗಣ ಲಿಂಗ ಅಥವಾ ಲಿಂಗಗುಣ ಒಂದೇಯಾಗಿದ್ದು ಅದೇ ಎಲ್ಲಾ ಲಿಂಗಗಳ ಒಟ್ಟು ಮೊತ್ತವೇ ಪರಶಿವ ಅಥವಾ ದೇವನಾಗಿದ್ದ. ಹೀಗಾಗಿ ಆತ್ಮ, ಪ್ರಾಣ, ಲಿಂಗದ ಗುಣಗಳೆಲ್ಲವೂ ಒಂದೇ ಮೌಲ್ಯ ಆಗಿದ್ದವೆಂಬುದಕ್ಕೆ ಇದೊಂದು ಲೆಕ್ಕಾಚಾರದ ಪರಿಕಲ್ಪನೆಯೆಂದು ಒಪ್ಪಿಕೊಳ್ಳಲು ಸಾಧ್ಯವಿದೆ.

ಇಂದಿನ ಬೀದರ ಜಿಲ್ಲೆಯ ಹುಮ್ನಾಬಾದ್ ತಾಲ್ಲೂಕಿನ ಹಳ್ಳಿಖೇಡ(ಕೆ) ಎಂಬ ಗ್ರಾಮದಲ್ಲಿ ಇವರ ಗುಡಿಯೊಂದಿದೆ, ಗುಡಿಯೆನ್ನುವುದಕ್ಕಿಂತ ಅದು ಬೊಮ್ಮಯ್ಯನವರ ಗವಿಯಾಗಿತ್ತೆನಿಸುತ್ತದೆ. ಆ ಗವಿಯಲ್ಲಿ ಅವರು ಶಿವಯೋಗ

ಸಾಧನೆ ಮಾಡಿದ್ದಿರಬಹುದು. ಇಲ್ಲಿರುವುದು ಸಮಾಧಿಯಂತೂ ಅಲ್ಲ. ಇದು ಕಲ್ಯಾಣದ ಮಹಾದ್ವಾರವಾಗಿದೆ. ಅಲ್ಲಿ ಇಂದಿಗೂ ಶ್ರಾವಣ ಮೂರನೇ ಸೋಮವಾರ ಕಿನ್ನರಿ ಬೊಮ್ಮಯ್ಯನ ಜಾತ್ರೆಯನ್ನು ಬಹಳ ವೈಚಾರಿಕವಾಗಿ ವಿವಿಧ ಕಾರ್ಯಕ್ರಮಗಳೊಂದಿಗೆ ಅನುಭಾವ ಗೋಷ್ಠಿಯನ್ನೇರ್ಪಡಿಸಿ ಆಚರಿಸುತ್ತಾರೆ. ಬೊಮ್ಮಯ್ಯನ ಜಾತ್ರೆಯೆಂದರೆ ಬಹುಶಃ ಅವರ ಲಿಂಗೈಕ್ಯದ ದಿನವೆಂದೆನಿಸುತ್ತದೆ. ಈ ಜಾತ್ರೆಯೆಂದರೆ ಕಾರಣಾಂತರದಿಂದ ದೂರವಾಗಿದ್ದವರನ್ನೂ ಒಂದಾಗಿಸಿ ಪರಸ್ಪರರ ಮಧ್ಯ ಎದ್ದಿರುವ ಸ್ಥಾವರ ಗೋಡೆಗಳನ್ನುರುಳಿಸಿ ಜಂಗಮತ್ವದ ಸೇತುವೆಯನ್ನು ನಿರ್ಮಿಸುವಂಥ ಪವಿತ್ರ ದಿನವಾಗಿದೆ. ಎಲ್ಲ ಬಗೆಯ ಸ್ಥಾವರಗಳಳಿದ ಜಂಗಮತ್ವ ಅನಾವರಣಗೊಳಿಸುವ ವಿಧಾನವಿಲ್ಲಿದೆ. ಆ ಜಾತ್ರೆಯ ದಿನದ ಸಂಭ್ರಮದಲ್ಲಿದ್ದ ಎಲ್ಲರಲ್ಲಿ ಬೊಮ್ಮಯ್ಯ ಶರಣರ ಬಗ್ಗೆ ಅಪಾರ ಭಕ್ತಿ ಭಾವವನ್ನು ಗುರುತಿಸಬಹುದಾಗಿದೆ.

ಬೊಮ್ಮಯ್ಯನ ತಂಗಿಯೇ ಆಗಿದ್ದ ಅಕ್ಕಮಹಾದೇವಿ ಕೆಲ ದಿನ ಇಲ್ಲಿ ತಂಗಿದ್ದ ಕಾರಣ ಹಳ್ಳಿಖೇಡದಲ್ಲಿ "ತಂಗಿಯ ಗುಡ್ಡ" ಎಂದು ಕರೆಯುವ ಸ್ಥಳವಿದೆ. ಬೊಮ್ಮಯ್ಯನವರು ಸಕಲ ಜೀವಿಗಳಿಗೆ ಲೇಸನೇ ಬಯಸುವುದನ್ನು ಬಹಳವಾಗಿ ಪ್ರತಿಪಾದಿಸುತ್ತಿದ್ದ ಕಾರಣ ಪ್ರಾಣಿ ಹಿಂಸೆಯನ್ನು ವಿರೋಧಿಸುತ್ತಿದ್ದರು. ಇಂದಿಗೂ ಈ ಊರಲ್ಲಿ ಪ್ರಾಣಿ ಬಲಿ ಇಲ್ಲವೆಂಬುದು ನನ್ನ ಗಮನಕ್ಕಿದೆ. ಒಂದೊಮ್ಮೆ ಮಾಂಸಾಹಾರಿಗಳು ಮಾಂಸದೂಟ ಮಾಡಬೇಕೆಂದರೂ ಬೇರೊಂದು ಊರಿನಿಂದ ಮಾಂಸವನ್ನು ತರಿಸಿಕೊಂಡು ಅಡುಗೆ ಮಾಡಿಕೊಂಡು ಊಟ ಮಾಡಲು ಮಾತ್ರ ಅವಕಾಶವಿದೆಯಂತೆ. ಇಂದಿಗೂ ಶರಣರ ನಡೆಯನ್ನು ತಮ್ಮ ನಡೆಯಾಗಿಸಿಕೊಂಡಿರುವ ಈ ಗ್ರಾಮದ್ದಲ್ಲಿರುವವರ ಧೋರಣೆಗೆ ನಾನು ಶರಣಾಗಿರುವೆ. ಈ ಬಗೆಯಲ್ಲಿ ಆದರ್ಶದ ನುಡಿಗೆ ಬದ್ಧತೆಯ ನಡೆಗಳು ಇಂದು ನಮ್ಮವಾಗಬೇಕಿವೆ.

**"ಆವ ಮಡಿಕೆಯಾಗಲಿ ಸ್ವಾದ ಸಾಕಾರದಲ್ಲಿ ಭೇದವಲ್ಲ, ಮಣ್ಣ ಮಡಿಕೆ ಒಕ್ಕಲಿಗನಲ್ಲಿ, ಚಿನ್ನದ ಮಡಿಕೆ ಅರಮನೆಯಲ್ಲಿ, ಅರಮನೆ ಗುರುಮನೆ ಒಂದಾದ ಕಾರಣ–ಹಾದರ ಸಲ್ಲದು ಕಾಣಾ, ತ್ರಿಪುರಾಂತಕಲಿಂಗವೇ"** ಇದು ಬೊಮ್ಮಯ್ಯನ ಮಹತ್ವದ ವಚನ. ಮಡಿಕೆ ಯಾವುದಾದರೇನು ಮಣ್ಣಿನದಾಗಲೀ ಚಿನ್ನದ್ದೇ ಆಗಿರಲಿ ಅದರಲ್ಲಿಯ ಪ್ರಸಾದದ ರುಚಿಯಲ್ಲಿ ಬದಲಾವಣೆ ಸಾಧ್ಯವೇ? ಎಂದು ಪ್ರಶ್ನಿಸುತ್ತಾರೆ. ಬಡವನೇ ಆಗಲಿ, ಸಿರಿವಂತನೇ ಆಗಲಿ, ಬ್ರಾಹ್ಮಣನೇ ಆಗಲೀ ದಲಿತನೇ ಆಗಲೀ ಆತನ ವಿಚಾರ ಒಳ್ಳೆಯದಾಗಿದ್ದರೆ ಎಲ್ಲರಿಗೂ ಒಳ್ಳೆಯದೇ ಆಗಿರುತ್ತದೆಯಲ್ಲವೇ? ಭೌತಿಕ ಶರೀರಕ್ಕೆ ಜಾತಿ, ಧರ್ಮವಿರಬಹುದು ಆದರೆ ಆಂತರ್ಯದ ಜೀವಕ್ಕೆ ಯಾವ ಭೇದಭಾವ? ಯಾವ ಜಾತಿ? ಎಲ್ಲವೂ ಒಂದೇ ಅಲ್ಲವೇ? ಎನ್ನುತ್ತಾರೆ. ಹಾಗೆಯೇ ಅರಮನೆಯಾಗಲೀ ಗುರುಮನೆಯಾಗಲೀ ಅಲ್ಲಿ ಹಾದರ ಸಲ್ಲದು ಎಂಬುದು ಇವರ ನಿಲುವು. ಭ್ರಷ್ಟ ಆಚಾರ ಮತ್ತು ವಿಚಾರಗಳು ಎಲ್ಲಿ ನಡೆದರೂ ಕೆಟ್ಟ ಪರಿಣಾಮವೇ ಹೊರತು ಯಾರಿಗೂ ಅದರಿಂದ ಒಳ್ಳೆಯದಲ್ಲವೆಂಬುದು ಇವರ ಈ ವಚನದಲ್ಲಿಯ ಎಚ್ಚರಿಕೆಯ ಚಿಂತನೆಯ ಕ್ರಮವನ್ನು ಗಮನಿಸಬಹುದು.

**"ಚಿನಿಪಾಲ ಚಿನ್ನದ ಹರಿವಾಣದಲ್ಲಿ ಭೋಗಿಪುದು ಭೂಷಣವಲ್ಲದೆ, ಮಣ್ಣ ಹರಿವಾಣದಲ್ಲಿ ಭೂಷಣವೆ? ತಾ ಮಾಳ್ಪ ಶಿವಲಿಂಗ ಪೂಜೆಗೆ ಕಾಯ ಪವಿತ್ರವಲ್ಲದೆ, ಅಪವಿತ್ರವೆಂತೊ ತ್ರಿಪುರಾಂತಕಲಿಂಗವೇ?"** ಈ ವಚನವನ್ನೊಮ್ಮೆ ಅವಲೋಕಿಸಿದಾಗ, ಚಿನ್ನದ ತಟ್ಟೆಯಾದರೇನು, ಮಣ್ಣಿನ ತಟ್ಟೆಯಾದರೇನು ಭೋಗಿಸುವಾತನಿಗೆ ಒಂದೇ ಅಲ್ಲವೇ ಹಾಗೆಯೇ ತನ್ನೊಳಗೇ ಇರುವ ಶಿವ, ದೇವನನ್ನು ಪೂಜಿಸಿಕೊಳ್ಳಲು ಪವಿತ್ರವಾದ ಕಾಯ ಇದ್ದರಷ್ಟೇ ಸಾಕು. ಕಾಯ ಯಾವುದಾದರೇನು ಮೇಲ್ಜಾತಿಯ ಕಾಯ ಪವಿತ್ರ, ಕೆಳಜಾತಿಯ ಕಾಯ ಕನಿಷ್ಠವೆಂಬ ಭೇದವುಂಟೇನು? ಸತ್ಯಶುದ್ಧವಾದ ಕಾಯಕದಲ್ಲಿ ನಿರತವಾದ ಸತ್ಯಶುದ್ಧವಾದ ಮನಸ್ಸಿನಿಂದ ತನ್ನ ಕಾಯದೊಳಗೇ ಇರುವ ದೇವನನ್ನು ಇಷ್ಟಲಿಂಗದ ಮೂಲಕ ಜಾಗ್ರತಗೊಳಿಸಿಕೊಳ್ಳುವಾತನೇ ನಿಜವಾದ ಭಕ್ತ. ಆತನಿಗೆ ಯಾವುದೇ ರೀತಿಯ ಭೇದಭಾವವಿರದೆನ್ನುತ್ತಾರೆ.

**"ತನು ಸಜ್ಜೆ ಮನ ಲಿಂಗವಾದ ಬಳಿಕ ಆನು ಮತ್ತೆ ಬೇರೆ ಅರಸಲುಂಟೆ? ತನುವೆ ಬಸವಣ್ಣ ಮನವೇ ಪ್ರಭುದೇವರೆಂಬ ಮಹಾ ಘನವನೊಳಕೊಂಡಿರ್ದ ಬಳಿಕ ಗುಣಾವಗುಣವ ಸಂಪಾದಿಸುವರೆ? ಮಹಾಲಿಂಗ ತ್ರಿಪುರಾಂತಕದೇವ"** ತಮ್ಮ ತನು ಅಂದರೆ ದೇಹವೇ ಇಷ್ಟಲಿಂಗ (ಸಜ್ಜೆ) ತಮ್ಮ ಮನವೇ ಜ್ಞಾನಲಿಂಗ (ಅರಿವು) ಆಗಿ ಪೂಜಿಸಿಕೊಂಡಾಗ ಬೇರೆ ದೇವನನ್ನು ಅರಸಲೇಕೆ? ಎನ್ನುವ ಮೂಲಕ ಇಷ್ಟಲಿಂಗದ ಮೂಲಕವೇ ತನ್ನ ಕಾಯದೊಳಗೇ ಇರುವ ದೇವನನ್ನು ಕಾಣುವಂಥ ಶರಣರ ಧೋರಣೆಯನ್ನು ಇಲ್ಲಿ ಬೊಮ್ಮಯ್ಯ ಪ್ರತಿಪಾದಿಸುತ್ತಾರೆ. ಬಸವಣ್ಣ ಮತ್ತು ಅಲ್ಲಮರೊಡನೇ ತಮ್ಮ ಸಾಮರಸ್ಯವನ್ನು ಬಿಂಬಿಸುತ್ತಾ ತಮ್ಮ ತನುವೇ ಬಸವಣ್ಣ, ತಮ್ಮ ಮನವೇ

ಅಲ್ಲಮಪ್ರಭು ಎನ್ನುವ ಮೂಲಕ ಸಾಂಕೇತಿಕವಾಗಿ ಎಲ್ಲ ಶರಣರ ಘನ ಒಂದರೊಳಗೇ ಇರುವಾಗ ಗುಣಾವಗುಣಗಳನ್ನು ಮತ್ತೇಕೆ ಸಂಪಾದಿಸಬೇಕೆನ್ನುತ್ತಾರೆ. ಇದು ಸಮಷ್ಠಿಯೆಲ್ಲವೂ ಶರಣತ್ವವಾಗಬೇಕು. ವಿಶ್ವವೆಲ್ಲವೂ ಲಿಂಗತತ್ವದಲ್ಲಿ ಪ್ರಕಾಶಿಸಬೇಕೆನ್ನುವಲ್ಲಿ ಉದಾತ್ತ ಚಿಂತನೆ ಅಂತರ್ಗತವಾಗಿದೆ.

**ಹುಟ್ಟಿತ್ತಲ್ಲಾ ಉಂಟೆನಿಸಿತ್ತಲ್ಲಾ. ಕರುವಿಟ್ಟಿತ್ತಲ್ಲಾ ರೂಪಾಯಿತ್ತಲ್ಲಾ. ನೋಡ ನೋಡ ವಾಯುಗುಂದಿತ್ತಲ್ಲಾ ಅರಿವು ವಿಕಾರದಲ್ಲಿ ಆಯಿತ್ತು, ಹೋಯಿತ್ತು, ಮಹಾಲಿಂಗ ತ್ರಿಪುರಾಂತಕ, ನಿಮಗೆರಗದ ತನು"** ಇಲ್ಲಿ ಇಷ್ಟಲಿಂಗದೊಡನೆಯ ಅನುಸಂಧಾನ, ಶಿವಯೋಗದ ಅರಿವು ಇದೆ. ಸಾಕಾರ ಇಷ್ಟಲಿಂಗದ ಮೂಲಕ ನಮ್ಮ ಕಾಯದೊಳಗಿರುವ ನಿರಾಕಾರ ಅರಿವಿನ ಲಿಂಗವನ್ನು ಕಂಡುಕೊಳ್ಳುವ ಬಗೆಯನ್ನು ಬಿಂಬಿಸಿದ್ದಾರೆ. ಹೀಗೆ, ಇಷ್ಟಲಿಂಗದೊಂದಿಗೆ ಲಿಂಗಾಂಗ ಸಾಮರಸ್ಯ ಮೈಗೂಡಿಸಿಕೊಂಡಾಗ ನಿರಾಕಾರಲಿಂಗವೇ ರೂಪಾಗಿ ದೇವದರ್ಶನವಾಗುತ್ತದೆಂಬ ಅನುಭಾವವಿಲ್ಲಿದೆ. ಆ ಅರಿವೆಂಬ ಲಿಂಗಕ್ಕೆರಗದಿದ್ದರೆ ಅರಿವು ರೂಪವಾಗಿ ಕಾಣದೇ ವಿಕಾರವಾಗಿ ಹೋಗಿಬಿಡುತ್ತೆಂಬುದನ್ನು ಇಲ್ಲಿ ಬೊಮ್ಮಯ್ಯ ಬಿಂಬಿಸುತ್ತಾರೆ.

ಕಾಯಕ ತತ್ವವನ್ನೇ ಪ್ರತಿಪಾದಿಸಿದ ಹಲವಾರು ಶರಣರಲ್ಲಿ ಬೊಮ್ಮಯ್ಯ ಪ್ರಮುಖರು. ಒಂದೊಮ್ಮೆ ಹಸಿವಿನ ಬಾಧೆಯಿಂದ ಬಳಲುತ್ತಿದ್ದ ಬಡವನೊಬ್ಬ ಅನ್ನ ಕೇಳಿದಾಗ ಕಾಯಕ ಮಾಡಿ ನಿನ್ನ ಅನ್ನವನ್ನು ಗಳಿಸಿಕೊ ಶ್ರಮವಿಲ್ಲದ ಅನ್ನ ಪಡೆದರೆ ನಿನಗದು ಪ್ರಸಾದವಾಗದು ಎಂದು ಕಾಯಕದ ಮಹತ್ವನ್ನು ಆತನಿಗೆ ತಿಳಿಸುತ್ತಾರೆ. ಹೀಗೆ ಹಸಿದವನಿಗೆ ಅನ್ನ ಕೊಡುವುದಕ್ಕಿಂತ, ದಿಕ್ಕೆಟ್ಟವರಿಗೊಮ್ಮೆ ಮಾರ್ಗದರ್ಶಿಯಾಗುವುದಕ್ಕಿಂತ ಅವರಿಗೆ ಕಾಯಕ ಮಾಡಿಕೊಂಡೇ ಶಾಶ್ವತವಾಗಿ ತಮಗೆ ಬೇಕಾದ ಅನ್ನ, ಅರಿವು, ಅರಿವೆಯನ್ನು ತಾವೇ ಸಂಪಾದಿಸಿಕೊಳ್ಳಲು ಸಾಧ್ಯವಾಗುವಂಥ ಬದುಕನ್ನು ಕಟ್ಟಿಕೊಳ್ಳುವಂತೆ ಬದುಕಿನ ಪಥ ತೋರುವುದು ಇವರ ವಿಶಿಷ್ಠ ನಡೆಯಾಗಿತ್ತು.

ಹೀಗೆ, ತಮ್ಮ ನಡೆಯೊಳಗೇ ನುಡಿಯ ಪೂರೈಸಿಕೊಳ್ಳುತ್ತಲೇ ಕಲ್ಯಾಣದ ಕ್ರಾಂತಿಯ ಸಂದರ್ಭದಲ್ಲಿ ಇವರು ಉಳವಿಯತ್ತ ತೆರಳಿದ ಶರಣರ ತಂಡದಲ್ಲಿ ಸೇರುತ್ತಾರೆ. ತಮ್ಮ ಪ್ರಾಣರಕ್ಷಣೆಗಿಂತ ವಚನಗಳ ರಕ್ಷಣೆಗೆ ಹೆಚ್ಚಿನ ಗಮನವಿಟ್ಟು ರಕ್ಷಿಸಿದ ಕಾರಣಕ್ಕೇ ಬೊಮ್ಮಯ್ಯನನ್ನು "ರಕ್ಷಕ ಬೊಮ್ಮಯ್ಯ" ಎಂತಲೂ ಕರೆಯುವುದುಂಟು. ಕಾದ್ರೋಳಿ ಎಂಬಲ್ಲಿ ಬಿಜ್ಜಳನ ಸೈನ್ಯದೊಡನೆ ಯುದ್ಧವಾಗುತ್ತದೆ. ಅಲ್ಲಿಯೂ ವೀರೋಚಿತವಾಗಿ ಹೋರಾಡಿ ವಚನಗಳನ್ನು ರಕ್ಷಿಸುತ್ತಾರೆ. ಮುಂದೆ "ಉಳವಿ"ಯಲ್ಲಿ ಬಯಲಾಗಿ "ಉಳಿ"ಯುತ್ತಾರೆ. ಇಂದಿಗೂ ಉಳವಿಯಲ್ಲಿ ಇವರ ಸಮಾಧಿಯ ಸ್ಮಾರಕವಿದೆ. ಈ ಸ್ಮಾರಕ ಸ್ಥಾವರವಾಗಿದ್ದರೂ ಸಹೃದಯದವರಿಗಲ್ಲಿ ಕಿನ್ನರಿ ಬೊಮ್ಮಯ್ಯನ ಲಿಂಗದುಸಿರು ಕೇಳುತ್ತಲೇ ಇದೆ. ಈಗಲೂ ಅಲ್ಲಿಯ ಕಿನ್ನರಿಯ ನಿನಾದದೊಂದಿಗೆ ಪ್ರಗತಿಪರತೆಯ ಎಚ್ಚರಿಕೆಯ ಘಂಟೆಯ ಸದ್ದಿದೆ. ಆಲಿಸುವ ಪ್ರಗತಿಪರ ಮನಸ್ಸಿರಬೇಕಷ್ಟೇ. ಅವರ ನುಡಿಯನ್ನಾಲಿಸಿ ನಮ್ಮ ನಡೆಯನ್ನು ಬೆಸೆಯಿಸುವ ಪ್ರಯತ್ನವಿದ್ದಲ್ಲಿ ನನ್ನೊಳಗಿರುವ ನನ್ನೊಡೆಯ ನನ್ನ ನಡೆಯನ್ನು ಮೆಚ್ಚಿ ಹೌದಹುದೆನ್ನಬಹುದೇನೋ?

■■

ಕಿನ್ನರಿ ಬೊಮ್ಮಯ್ಯ ಕಿನ್ನರಿಯ ಬಾರಿಸಲು
ಕುನ್ನಿ ಹಸು ಮರೆತು ಕಿವಿಗೊಟ್ಟು । ಕಲ್ಯಾಣ
ಚೆನ್ನಾತು ಲೋಕ ಚೆಲುವಾತ ॥

# ಪುಸ್ತಕ ಪರಿಚಯ

• ಡಾ. ಎಂ. ಎಸ್. ಹುಲ್ಲೋಳಿ

**ಲಿಂಗನೆಡೆಗೆ ಅಂಗನ ಯಾತ್ರೆ**

| | | |
|---|---|---|
| ಲೇಖಕರು | : | ವೀ. ಗ. ಶೀಲವಂತರ |
| ಪ್ರಕಾಶಕರು | : | ವಚನ ಅಧ್ಯಯನ ಕೇಂದ್ರ, ನಾಗನೂರು ಶ್ರೀ ರುದ್ರಾಕ್ಷಿಮಠ, ಶಿವಬಸವನಗರ, ಬೆಳಗಾವಿ–೧೦ |
| ಪುಟ | : | ೩೪೬ |
| ಬೆಲೆ | : | ೧೦೦ |
| ವರ್ಷ | : | ೨೦೧೯ |

ಶ್ರೀ ವೀ. ಗ. ಶೀಲವಂತರ ಅವರು ಅಚ್ಚ ಕನ್ನಡದ ಸಾಧಕರು, ಶರಣ ಸಾಹಿತ್ಯವನ್ನು ಜಿಜ್ಞಾಸೆಯಿಂದ ಅಧ್ಯಯನ ಮಾಡಿದವರು. ಪ್ರಸ್ತುತ 'ಲಿಂಗನೆಡೆಗೆ ಅಂಗನ ಯಾತ್ರೆ' ಎಂಬ ಕೃತಿಯನ್ನು ನೂರೊಂದು ಸ್ಥಲಗಳ ಸಾರವನ್ನು ಸರಳ ಹಾಗು ಸುಲಲಿತ ಶೈಲಿಯಲ್ಲಿ ರಚಿಸಿದ್ದಾರೆ.

ಬಸವಾದಿ ಶರಣರ ನೂರೊಂದು ಸ್ಥಲಗಳಿಗೆ ಸಂಬಂಧಿಸಿದ ವಚನ ಸ್ವರವಚನಗಳ ಸಾರವನ್ನು ಸರ್ವರಿಗೂ ತಿಳಿಯುವಂತೆ ವಿವರಿಸಿದ್ದಾರೆ. ಇಲ್ಲಿ ಯೋಗ–ಶಿವಯೋಗ, ಕಾಯಕ–ದಾಸೋಹ, ಆಧಾರಾದಿ ಚಕ್ರಗಳ ವಿವರಣೆ ನೀಡಲಾಗಿದೆ.

ಧರ್ಮ, ದರ್ಶನ ಮತ್ತು ಸಾಹಿತ್ಯದ ಹಿನ್ನೆಲೆಯಲ್ಲಿ ಬಸವಾದಿ ಶಿವಶರಣರ ವಚನಗಳಿಗೆ ಮಹತ್ವದ ಸ್ಥಾನವಿದೆ.

ಶಿವನನ್ನು ಕಾಣುವ ಪಥವಾವುದು? ಭಕ್ತಿ, ಜ್ಞಾನ, ವೈರಾಗ್ಯದ ಬಲದಿಂದ ಸಾಧಕ ತನ್ನ ಮನಸ್ಸಿನ ಕಾಳಿಕೆಗಳನ್ನು ಕಳೆದುಕೊಂಡು ಷಟ್‌ಸ್ಥಲದ ಪಥದಲ್ಲಿ ಸಾಗಿದಾಗ ಶಿವನ ಕರುಣೆಯುಂಟಾಗುವುದು. ಶಿವನ ಸಾಕ್ಷಾತ್ಕಾರಕ್ಕೆ ಕರೆದೊಯ್ಯುವ ಸೋಪಾನಗಳೇ ಸ್ಥಲಗಳು. ಇವು ಏಕೋತ್ತರ ಶತ, ಅಂದರೆ ನೂರೊಂದು ಸ್ಥಲಗಳಾಗಿರುವವು. ಇವು ಷಟ್‌ಸ್ಥಲಗಳಲ್ಲಿ ವಿಭಜಿತವಾಗಿರುವವು. ಈ ಸ್ಥಲಗಳನ್ನು ಏರಲು ಸಾಧಕನು ಅಷ್ಟಾವರಣಗಳೆಂಬ ಬೇಲಿಯನ್ನು ನಿರ್ಮಿಸಿಕೊಂಡು, ಪಂಚಾಚಾರಗಳಿಂದ ಕೂಡಿ, ಸ್ಥಲ ಸೋಪಾನಗಳಾದ ಭಕ್ತ, ಮಹೇಶ್ವರ, ಪ್ರಸಾದಿ, ಪ್ರಾಣಲಿಂಗಿ, ಶರಣ ಕೊನೆಗೆ ಐಕ್ಯಸ್ಥಲದಲ್ಲಿ ನಿಂದು ಶಿವನಲ್ಲಿ ಒಂದಾಗುವುದೇ ಮುಕ್ತಿ.

ಶಿವನ ಕೃಪೆಗಾಗಿ ಹಾರೈಸಿ, ಲಿಂಗನತ್ತ ಭಕ್ತಿ, ಜ್ಞಾನ, ವೈರಾಗ್ಯದಿಂದ ಸಾಗುವ ಅಂಗನ ಯಾತ್ರೆಗೆ ಪೂರಕವಾಗಿ ಲಿಂಗನತ್ತ ಹರಿದು ಬರುವ ಲಿಂಗದ ಕರುಣೆಯಿಂದ ಕೂಡಿದ ನೂರೊಂದು ಸ್ಥಲಗಳ ವಿವರಣೆಯನ್ನು 'ಲಿಂಗನೆಡೆಗೆ ಅಂಗನ ಯಾತ್ರೆ' ಒಳಗೊಂಡಿರುವುದು. ಗ್ರಂಥವು ಲಿಂಗಾಯತ ಧರ್ಮದ ಸಾಧಕನ ಆಧ್ಯಾತ್ಮಿಕ ಯಾತ್ರೆಯನ್ನು ಪರಿಚಯಿಸುವ ಮತ್ತು ಮಾರ್ಗದರ್ಶನ ಮಾಡುವ ಮೌಲಿಕ ಕೃತಿಯಾಗಿದೆ.

ಜಕ್ಕಣಾರ್ಯರ ಸಂಸ್ಕೃತ ಕೃತಿ 'ಏಕೋತ್ತರ ಶತಸ್ಥಲೀ' ಎಂಬ ಕೃತಿಗೆ ಶ್ರೀ ಗಿರೀಂದ್ರನು ಕನ್ನಡ ಟೀಕೆ ಬರೆದಿದ್ದಾನೆ. ಪರ್ವತ ಶಿವಯೋಗಿಯು 'ಏಕೋತ್ತರ ಶತಸ್ಥಲೀ ಸಾರ ಚಿಂತಾಮಣಿ' ರಚಿಸಿದ್ದಾನೆ. ಮಗ್ಗೆಯ ಮಾಯಿದೇವರು, ಸಿದ್ಧಲಿಂಗ, ಇಮ್ಮಡಿ ಮುರಿಗಾಸಿದ್ಧ ಮುಂತಾದವರು ಕೂಡ ನೂರೊಂದು ಸ್ಥಲ ಸಿದ್ಧಾಂತದ ಜನಕರು ಬಸವಾದಿ ಪ್ರಮಥರೇ ಆಗಿದ್ದಾರೆ ಎಂಬ ಖಚಿತ ಅಭಿಪ್ರಾಯವನ್ನು ಹೊಂದಿದ್ದಾರೆ.

**೧. ಅಂಗಸ್ಥಲಗಳು (೧ ರಿಂದ ೪೪ ರವರೆಗೆ)**

ಭಕ್ತ (೧ ರಿಂದ ೧೫ ರವರೆಗೆ)

ಮಾಹೇಶ್ವರ (೧೬ ರಿಂದ ೨೪ ರವರೆಗೆ)

ಪ್ರಸಾದಿ (೨೫ ರಿಂದ ೩೧ ರವರೆಗೆ)

ಪ್ರಾಣಲಿಂಗಿ (೩೨ ರಿಂದ ೩೬ ರವರೆಗೆ)

ಶರಣ (೩೭ ರಿಂದ ೪೦ ರವರೆಗೆ)

ಐಕ್ಯ (೪೧ ರಿಂದ ೪೪ ರವರೆಗೆ)

ನಿವೃತ್ತ ಪ್ರಾಚಾರ್ಯರು, ಓಂನಗರ, ಹುಬ್ಬಳ್ಳಿ–೫೮೦೦೩೧, ಮೊ–೯೮೮೯೮೫೩೩೩

**೨. ಲಿಂಗಸ್ಥಲಗಳು (೪೫ ರಿಂದ ೧೦೧ ರವರೆಗೆ)**

ಆಚಾರ ಲಿಂಗ– ಶ್ರದ್ಧಾ ಭಕ್ತಿ (೪೫ ರಿಂದ ೫೩ ರವರೆಗೆ)

ಗುರುಲಿಂಗ– ನಿಷ್ಠಾ ಭಕ್ತಿ (೫೪ ರಿಂದ ೬೨ ರವರೆಗೆ)

ಶಿವಲಿಂಗ– ಅವಧಾನ ಭಕ್ತಿ (೬೩ ರಿಂದ ೭೧ ರವರೆಗೆ)

ಜಂಗಮಲಿಂಗ– ಅನುಭಾವ ಭಕ್ತಿ (೭೨ ರಿಂದ ೮೩ ರವರೆಗೆ)

ಪ್ರಸಾದಲಿಂಗ– ಆನಂದ ಭಕ್ತಿ (೮೪ ರಿಂದ ೯೨ ರವರೆಗೆ)

ಮಹಾಲಿಂಗ– ಸಮರಸ ಭಕ್ತಿ (೯೩ ರಿಂದ ೧೦೧ ರವರೆಗೆ)

ಶ್ರೀ ಶೀಲವಂತರ ಅವರ ಪ್ರಸ್ತುತ ಕೃತಿ 'ಲಿಂಗನೆಡೆಗೆ ಅಂಗನಯಾತ್ರೆ' ಮಹತ್ವವನ್ನು ಅರಿಯಬೇಕಾದರೆ ಐತಿಹಾಸಿಕ ದೃಷ್ಟಿಯ ಅವಲೋಕನ ಮಾಡಿದಾಗ ಕೆಲ ಅಂಶಗಳು ನಮ್ಮ ಗಮನವನ್ನು ಸೆಳೆಯುತ್ತವೆ. ಲಿಂಗಾಯತ ತತ್ತ್ವಶಾಸ್ತ್ರಕ್ಕೆ ತಮ್ಮದೇ ಆದ ವಿಶೇಷ ವಿಶಿಷ್ಟ ದೃಷ್ಟಿಕೋನದ ಕೊಡುಗೆ ನೀಡಿದ ಚನ್ನಬಸವಣ್ಣ, ತೋಂಟದ ಸಿದ್ಧಲಿಂಗೇಶ್ವರರು, ಸ್ವತಂತ್ರ ಸಿದ್ಧಲಿಂಗೇಶ್ವರರು, ಷಣ್ಮುಖ ಶಿವಯೋಗಿಗಳು, ಡಾ. ಫ. ಗು. ಹಳಕಟ್ಟಿ, ಪ್ರೊ. ಬಸವನಾಳ, ಡಾ. ಆರ್. ಆರ್. ದಿವಾಕರ, ಡಾ. ಆರ್. ಸಿ. ಹಿರೇಮಠ, ಪ್ರೊ. ಎಂ. ಆರ್. ಸಾಖರೆ, ಡಾ. ಎನ್. ಜಿ. ಮಹಾದೇವಪ್ಪ ಮುಂತಾದವರಲ್ಲಿ ಸೇರಬೇಕಾದವರು ಶ್ರೀ ವೀ. ಗ. ಶೀಲವಂತರ ಅವರು.

ಶ್ರೀ ನಿಜಗುಣ ಶಿವಯೋಗಿಗಳ ಷಟ್‌ಶಾಸ್ತ್ರಗಳಿಗೆ ಭಾಷ್ಯವನ್ನು ಅದ್ವೈತಪರವಾಗಿ ಬರೆದ ಮಹನೀಯರನ್ನು ಜ್ಞಾಪಿಸಿಕೊಳ್ಳಬಹುದು. ಅವರ ವಿಷಯ ನಿರೂಪಣಾ ಶೈಲಿಯಿಂದ ಪ್ರಭಾವಿತರಾದ ಶ್ರೀ ಶೀಲವಂತರ ಕೂಡ ಅಷ್ಟೇ ಘನ ಗಂಭೀರವಾಗಿ ಲಿಂಗಾಯತ ತತ್ತ್ವಜ್ಞಾನದ ಕೊಡುಗೆ, ಬಸವಾದಿ ಶರಣರ ವಿಶೇಷತೆ ಜ್ಞಾಪಿಸುವ 'ನೂರೊಂದು ಸ್ಥಲಗಳ' ಸಾರವನ್ನು ರಚಿಸಿದ್ದಾರೆ. ಇಂಥ ವಿಶೇಷ ಕೃತಿಯನ್ನು ಪ್ರಕಟಿಸಿದ ಶ್ರೀಗಳು ಹಾಗು ವಚನ ಅಧ್ಯಯನ ಕೇಂದ್ರವನ್ನು ಮನಸಾರೆ ಅಭಿನಂದಿಸುತ್ತೇನೆ.

■■

## ಲಿಂಗನೆಡೆಗೆ ಅಂಗನ ಯಾತ್ರೆ

ಜಕ್ಕಣಾರ್ಯರು ಬಸವಾದಿ ಶರಣರ ವಚನ–ಸ್ವರವಚನಗಳನ್ನು ತಾತ್ವಿಕವಾಗಿ ಜೋಡಿಸಿ ಏಕೋತ್ತರ ಶತಸ್ಥಲ ಎಂಬ ಕೃತಿಯನ್ನು ರಚಿಸಿದ್ದರು. ಇದು ಅಪ್ಪಟ ಕನ್ನಡ ಕೃತಿಯಾಗಿದ್ದು, ಬೇರಾವುದೋ (ಸಂಸ್ಕೃತ ಇತ್ಯಾದಿ) ಭಾಷೆಯಿಂದ ಕನ್ನಡಕ್ಕೆ ಎರವಲು ತಂದ ಕೃತಿಯಲ್ಲ. ಏಕೋತ್ತರ ಶತ(ನೂರೊಂದು)ಸ್ಥಲಗಳ ಮೂಲ ಆಕರ ವಚನಗಳೇ ಹೊರತು ವೇದಾಗಮ ಉಪನಿಷತ್ತುಗಳಲ್ಲ. ಏಕೋತ್ತರ ಶತಸ್ಥಲಗಳ ಜನಕರು ಬಸವಾದಿ ಪ್ರಮಥರು ಎಂಬಲ್ಲಿ ಎರಡು ಮಾತಿಲ್ಲ.

ಜಕ್ಕಣಾರ್ಯರು ಈ ಮೌಲಿಕ ಕೃತಿಗೆ ರಾಷ್ಟ್ರವ್ಯಾಪಿಯಾದ ಮನ್ನಣೆ ದೊರೆಯಲೆಂದು ಸಂಸ್ಕೃತ ಭಾಷೆಯಲ್ಲಿ 'ಏಕೋತ್ತರ ಶತಸ್ಥಲೀ' ಎಂಬ ಕೃತಿಯನ್ನೂ ರಚಿಸಿದ್ದಾರೆ. 'ಸಿದ್ಧಾಂತ ಶಿಖಾಮಣಿ' ಎಂಬ ಗ್ರಂಥದ ರಚನೆಯಾದುದು ಜಕ್ಕಣಾರ್ಯರ 'ಏಕೋತ್ತರ ಶತಸ್ಥಲೀ' ಕೃತಿ ರಚನೆ ನಂತರ ಎಂಬುದು ನಿರ್ವಿವಾದ. ಸಂಶೋಧಕರೂ, ವಿದ್ವನ್ಮಣಿಗಳೂ ಆದ ಕುಂದೂರುಮಠದ ಡಾ. ಇಮ್ಮಡಿ ಶಿವಬಸವ ಸ್ವಾಮಿಗಳು ಜಕ್ಕಣಾರ್ಯನ ಏಕೋತ್ತರ ಶತಸ್ಥಲೀ ಕೃತಿಯು ಸಿದ್ಧಾಂತ ಶಿಖಾಮಣಿಯ ಜನನಿ ಎಂದು ಸಾಧಾರಪೂರ್ವಕ ಸ್ಪಷ್ಟಪಡಿಸಿದ್ದಾರೆ.

ಶ್ರೀ ವೀ. ಗ. ಶೀಲವಂತರ ಅವರು ರಚಿಸಿದ ಪ್ರಸ್ತುತ ಕೃತಿಯಲ್ಲಿ ಬಸವಾದಿ ಶರಣರ ನೂರೊಂದು ಸ್ಥಲಗಳಿಗೆ ಸಂಬಂಧಿಸಿದ ವಚನ–ಸ್ವರವಚನಗಳ ಸಾರವನ್ನು ಸರ್ವರಿಗೂ ಸುಲಭವಾಗಿ ತಿಳಿಯುವಂತೆ ವಿವರಿಸಲಾಗಿದೆ. ಅಲ್ಲಲ್ಲಿ ವಿಷಯದ ಸ್ಪಷ್ಟತೆಗಾಗಿ ಯೋಗ–ಶಿವಯೋಗ, ಕಾಯಕ–ದಾಸೋಹ, ಆಧಾರಾದಿ ಚಕ್ರಗಳ ವಿವರಣೆ ನೀಡಲಾಗಿದೆ. ನೂರೊಂದು ಸ್ಥಲಗಳ ಸಾರ ಕನ್ನಡದಲ್ಲಿ ಇಷ್ಟು ಸರಳ ಹಾಗು ಸುಲಲಿತವಾಗಿ ಪ್ರಕಟವಾದುದು ಇದೇ ಮೊದಲು. 'ಏಕೋತ್ತರ ಶತಸ್ಥಲದ ಭಾವದನುಭಾವವಂ ಭೂಮಿಯೊಳು ಪೇಳಿದ ಬಸವೇಶ ಜನಕೆ' ಎಂದು ಪದ್ಯೆಕೋತ್ತರ ಶತಸ್ಥಲದಲ್ಲಿ ಬರೆದಂತೆ ಅಚ್ಚಕನ್ನಡದ ಸಾಧಕರಿಗಾಗಿ ಶ್ರೀ ವೀ. ಗ. ಶೀಲವಂತರ ಅವರು 'ಲಿಂಗನೆಡೆಗೆ ಅಂಗನ ಯಾತ್ರೆ' ಎಂಬ ಕೃತಿಯನ್ನು ರಚಿಸಿದ್ದಾರೆ.

**ಡಾ. ಸಿದ್ಧರಾಮ ಸ್ವಾಮಿಗಳು**
ನಾಗನೂರು ಶ್ರೀ ರುದ್ರಾಕ್ಷಿಮಠ

# ೨೦೨೦ನೇ ಇಸ್ವಿಯ ಬಸವಾದಿ ಶರಣರ ಶರಣೋತ್ಸವಗಳು

● ಪ್ರೊ. ಸಿದ್ಧಣ್ಣ ಲಂಗೋಟಿ

| | | | | |
|---|---|---|---|---|
| ಜನೇವರಿ | ೦೧ | ಶುಕ್ರವಾರ | ಬನದಹುಣ್ಣಿವೆ | ಮೇದಾರ ಕೇತಯ್ಯ |
| ಜನೇವರಿ | ೧೪ | ಮಂಗಳವಾರ | ಮಕರ ಸಂಕ್ರಾಂತಿ | ಸಿದ್ಧರಾಮೇಶ್ವರ |
| ಜನೇವರಿ | ೨೪ | ಶುಕ್ರವಾರ | ಅವರಾತ್ರಿ ಅಮವಾಸ್ಯೆ | ಜೇಡರ ದಾಸಿಮಯ್ಯ |
| ಫೆಬ್ರುವರಿ | ೦೧ | ಶನಿವಾರ | ಪ್ರತಿ ವರುಷ | ಮರುಳ ಶಂಕರದೇವ |
| ಫೆಬ್ರುವರಿ | ೦೯ | ರವಿವಾರ | ಭಾರತ ಹುಣ್ಣಿವೆ | ಕಿನ್ನರಿ ಬೊಮ್ಮಯ್ಯ |
| ಫೆಬ್ರುವರಿ | ೨೧ | ಶುಕ್ರವಾರ | ಮಹಾಶಿವರಾತ್ರಿ | ಡೋಹರ ಕಕ್ಕಯ್ಯ |
| ಮಾರ್ಚ | ೦೯ | ಸೋಮವಾರ | ಹೋಳಿ ಹುಣ್ಣಿವೆ | ಬಿಬ್ಬಿ ಬಾಚಯ್ಯ |
| ಮಾರ್ಚ | ೨೫ | ಬುಧವಾರ | ಯುಗಾದಿ ಪಾಡ್ಯ | ಅಲ್ಲಮ ಪ್ರಭುದೇವ |
| ಎಪ್ರಿಲ್ | ೦೮ | ಬುಧವಾರ | ದವನದ ಹುಣ್ಣಿವೆ | ಅಕ್ಕಮಹಾದೇವಿ |
| ಎಪ್ರಿಲ್ | ೨೬ | ರವಿವಾರ | ಅಕ್ಷಯ ತೃತೀಯಾ | ಬಸವಣ್ಣನವರು |
| ಮೇ | ೦೭ | ಗುರುವಾರ | ಆಗಿ ಹುಣ್ಣಿವೆ | ಶಿವನಾಗಮಯ್ಯ |
| ಮೇ | ೨೨ | ಶುಕ್ರವಾರ | ಬಾದಾಮಿ ಅಮವಾಸ್ಯೆ | ಕುರುಬ ಗೊಲ್ಲಾಳೇಶ್ವರ |
| ಜೂನ್ | ೦೫ | ಶುಕ್ರವಾರ | ಕಾರ ಹುಣ್ಣಿವೆ | ಅಂಬಿಗರ ಚೌಡಯ್ಯ |
| ಜೂನ್ | ೨೧ | ರವಿವಾರ | ಮಣ್ಣೆತ್ತಿನ ಅಮವಾಸ್ಯೆ | ಕುಂಬಾರ ಗುಂಡಯ್ಯ |
| ಜುಲೈ | ೦೫ | ರವಿವಾರ | ಕಡ್ಲಿಗಡಬ ಹುಣ್ಣಿವೆ | ಹಡಪದ ಅಪ್ಪಣ್ಣ |
| ಜುಲೈ | ೨೫ | ಶನಿವಾರ | ನಾಗರಪಂಚಮಿ | ಅಕ್ಕನಾಗಮ್ಮ ಹಾಗು ಬಸವ ಪಂಚಮಿ |
| ಜುಲೈ | ೨೭ | ಸೋಮವಾರ | ಶ್ರಾವಣ-೧ | ಶಂಕರ ದಾಸಿಮಯ್ಯ |
| ಅಗಸ್ಟ | ೦೩ | ಸೋಮವಾರ | ನೂಲಹುಣ್ಣಿವೆ | ನುಲಿಯ ಚಂದಯ್ಯ |
| ಅಗಸ್ಟ | ೨೨ | ಶನಿವಾರ | ಗಣೇಶ ಚೌತಿ | ಮಡಿವಾಳ ಮಾಚಿದೇವ |
| ಸಪ್ಟೆಂಬರ | ೦೨ | ಬುಧವಾರ | ಅನಂತನ ಹುಣ್ಣಿವೆ | ಹೂಗಾರ ಮಾದಣ್ಣ |
| ಅಕ್ಟೋಬರ | ೨೫ | ರವಿವಾರ | ಮಹಾನವಮಿ | ಹರಳಯ್ಯ-ಮಧುವಯ್ಯ |
| ಅಕ್ಟೋಬರ | ೨೬ | ಸೋಮವಾರ | ವಿಜಯದಶಮಿ | ಕಲ್ಯಾಣಕ್ರಾಂತಿ ವಿಜಯ |
| ಅಕ್ಟೋಬರ | ೩೧ | ಶನಿವಾರ | ಶೀಗಿ ಹುಣ್ಣಿವೆ | ಗಂಗಾಂಬಿಕೆ |
| ನವೆಂಬರ | ೧೬ | ಸೋಮವಾರ | ದೀಪಾವಳಿ ಪಾಡ್ಯ | ಚೆನ್ನಬಸವಣ್ಣ |
| ನವೆಂಬರ | ೩೦ | ಸೋಮವಾರ | ಗೌರಿ ಹುಣ್ಣಿವೆ | ನೀಲಾಂಬಿಕೆ |
| ಡಿಸೆಂಬರ | ೧೪ | ಸೋಮವಾರ | ಛಟ್ಟಿ ಅಮವಾಸ್ಯೆ | ದಾನಮ್ಮದೇವಿ |
| ಡಿಸೆಂಬರ | ೩೦ | ಬುಧವಾರ | ಹೊಸ್ತಿಲ ಹುಣ್ಣಿವೆ | ಮಾದಾರ ಚೆನ್ನಯ್ಯ |

**ವಚನ ಸಾಹಿತ್ಯ ಸಂಶೋಧಕರ ವಿಶೇಷ ಸ್ಮರಣೋತ್ಸವಗಳು**

| | | | |
|---|---|---|---|
| ಫೆಬ್ರುವರಿ | ೧೮ | ಶನಿವಾರ | ಹರ್ಡೇಕರ ಮಂಜಪ್ಪನವರು |
| ಜುಲೈ | ೦೨ | ರವಿವಾರ | ಫ. ಗು. ಹಳಕಟ್ಟಿಯವರು |
| ಅಗಸ್ಟ | ೩೦ | ಬುಧವಾರ | ಎಂ. ಎಂ. ಕಲಬುರ್ಗಿಯವರು |
| ಅಕ್ಟೋಬರ | ೨೮ | ಶನಿವಾರ | ಉತ್ತಂಗಿ ಚೆನ್ನಪ್ಪನವರು |

**ಗೌರವ ಸಂಪಾದಕರು ಬಸವ ಬೆಳಗು ಪತ್ರಿಕೆ ಇಳಕಲ್ಲ-೫೮೭೧೨೫**